

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 35 ಆಗಸ್ಟ್ 24-30, 1998 ರೂ. 2.00

ಬೆಲೆಯೇರಿಕೆಯ ಪ್ರಕೃತಿಯನ್ನು ದೂರಬೇಕು ಎನ್ನುವ 'ಸಮರ್ಥ' ಪ್ರಧಾನಿ

"ನನಗೆ ಗೊತ್ತು, ನಿಮ್ಮನ್ನೆಲ್ಲಾ ಮುಖ್ಯವಾಗಿ ನಮ್ಮ ಸೋದರಿಯರನ್ನು ಕೆಲವು ಸರಕುಗಳ ಏರುತ್ತಿರುವ ಬೆಲೆಗಳು ಚುಚ್ಚುತ್ತಿವೆ. ನನಗೆ ನಿಮ್ಮ ಸಮಸ್ಯೆಗಳು ಅರ್ಥವಾಗುತ್ತವೆ. ಇದಕ್ಕೆ ಸರಕಾರಕ್ಕಿಂತ ಹೆಚ್ಚು ಪ್ರಕೃತಿಯನ್ನೇ ದೂರಬೇಕಾಗುತ್ತದೆ" - ಇದು ಸ್ವಾತಂತ್ರ್ಯ ದಿನದಂದು ಪ್ರಧಾನ ಮಂತ್ರಿ ಅಟಲ ಬಿಹಾರಿ ವಾಜಪೇಯಿಯವರು ಕೆಂಪು ಕೋಟೆಯಿಂದ ಹೇಳಿದ ಮಾತು 'ಸಮರ್ಥ' ಪ್ರಧಾನಮಂತ್ರಿಯಿಂದ ಎಂತಹ ಅಮೋಘ ಸಾಂತ್ವನದ ಮಾತು!

"ಕೆಲವೊಮ್ಮೆ ನನಗೆ ದೇಶದಲ್ಲಿ ನಿರಾಶಾವಾದದ ಪ್ರವೃತ್ತಿ ಹೆಚ್ಚುತ್ತಿರುವುದು ಕಾಣುತ್ತದೆ" ಎಂದರು ಪ್ರಧಾನಿಗಳು. ಕೆಂಪುಕೋಟೆಯ ಅವರ ಭಾಷಣದ ದನಿ ಈ ನಿರಾಶಾವಾದಕ್ಕೆ, ಸಿನಿಕತನಕ್ಕೆ ತನ್ನ ಕೊಡುಗೆಯನ್ನು ನೀಡಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಟಿಪ್ಪಣಿ ಮಾಡಿದ್ದಾರೆ.

ನಿಜ, ದಿನಬೆಳಗಾದರೆ ಬದುಕುಳಿಯುವುದೇ ಏಕೈಕ ಕಾಯಕವಾಗಿಬಿಟ್ಟಿರುವ ಈ ಸರಕಾರದ ವಿವಿಧ ಪಕ್ಷಗಳ ತಿಣುಕಾಟಗಳು ನಿರಾಸೆ, ಸಿನಿಕತನವನ್ನಲ್ಲದೆ ಇನ್ನೇನು ಮೂಡಿಸಲು ಸಾಧ್ಯ? ಭ್ರಷ್ಟಾಚಾರ ನಿರ್ಮೂಲನದ ಬಗ್ಗೆ ನಿರರ್ಗಳ ಭಾಷಣ ನೀಡುವ ಪ್ರಧಾನಮಂತ್ರಿಯ ಸರಕಾರ ಹಿಂದಿನ ದಿನವೇ ಕೆಲವು ಸೂಕ್ಷ್ಮ ಕೇಸುಗಳ ತನಿಖೆ ನಡೆಸುತ್ತಿದ್ದ ಜ್ಯಾರಿ ನಿರ್ದೇಶನಾಲಯದ ಮುಖ್ಯಸ್ಥ ಎಂ.ಕೆ. ಬೇಜ್‌ಬರುವಾರನ್ನು ಆತುರಾತುರದಿಂದ ವರ್ಗ ಮಾಡಿತು. ಯಾವುದೇ ರಾಜಕೀಯ ಒತ್ತಡಗಳಿಗೆ ತಲೆಬಾಗದೆ ನಿಷ್ಪಕ್ಷಪಾತದಿಂದ ತನ್ನ ಜವಾಬ್ದಾರಿ ನಿರ್ವಹಿಸುತ್ತಿದ್ದ ಒಬ್ಬ ಹಿರಿಯ ಅಧಿಕಾರಿಯ ವಿರುದ್ಧ ಕೈಗೊಂಡ ಕ್ರಮ ಇದೆಂಬ ಭಾವನೆ ಸಹಜವಾಗಿಯೇ ಪ್ರಚಲಿತಗೊಂಡಿದೆ. ಏಕೆಂದರೆ ಅವರು ನಡೆಸುತ್ತಿದ್ದ ತನಿಖೆಗಳಲ್ಲಿ ಹಸ್ತಕ್ಷೇಪ ಮಾಡಲು ಸತತ ಪ್ರಯತ್ನ ನಡೆದಿವೆ ಎಂದು ಎಲ್ಲರಿಗೂ ತಿಳಿದ ಸಂಗತಿ. ಆದ್ದರಿಂದ ಇದು ಸಾಮಾನ್ಯ ವರ್ಗಾವರ್ಗಿ ಎಂಬ ವಾಜಪೇಯಿ ಸರಕಾರದ ಸಮಜಾಯಿಷಿಯನ್ನು ಯಾರೂ ನಂಬುತ್ತಿಲ್ಲ. ಸುಪ್ರೀಂ ಕೋರ್ಟ್ ಕೂಡಾ ಈ ವರ್ಗಾವಣೆಯ ಬಗ್ಗೆ ಆತಂಕ ವ್ಯಕ್ತಪಡಿಸಿರುವುದು ವಾಜಪೇಯಿ ಸರಕಾರದ ನಿಜ ಉದ್ದೇಶದ ಬಗ್ಗೆ ಇನ್ನಷ್ಟು ಅವಿಶ್ವಾಸ, ಸಿನಿಕತನವನ್ನು ಹೆಚ್ಚಿಸಿದೆ.

ನಗೆಪಾಟಲಾಗಿರುವ ಸರಕಾರ

ಈ ನಡುವೆ ಬೇಜ್‌ಬರುವಾರವರ ವರ್ಗಾವಣೆ ಕುರಿತಂತೆ ಬಿಜೆಪಿಯ ಮಿತ್ರಪಕ್ಷ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಜಯಲಲಿತಾ ಹಾಗೂ ಪ್ರಧಾನ ಮಂತ್ರಿಗಳ ನಡುವೆ ಪತ್ರ ಸಮರ, ಪ್ರಧಾನ ಮಂತ್ರಿಗಳ ಆಪ್ತರೊಬ್ಬರು ಗುತ್ತೇದಾರಿ ಪತ್ರಿಕೆಯೊಂದರ ಒಡೆಯನಿಂದ ಲಂಚ ಪಡೆದು ಈ ವರ್ಗಾವಣೆ ಮಾಡಿದ್ದಾರೆಂಬ ಆರೋಪ, ತನ್ನ ಮೇಲೆ ನೇರವಾಗಿ ಆರೋಪ ಹೊರಿಸಲಿ, ಕಾನೂನುಕ್ರಮ ಕೈಗೊಳ್ಳುತ್ತೇನೆಂದು ಇತ್ತೀಚಿನವರೆಗೆ ಪ್ರಧಾನ ಮಂತ್ರಿಯ ಸಲಹಾಗಾರರಾಗಿದ್ದ ಪ್ರಮೋದ್ ಮಹಾಜನ್ 'ಸವಾಲು'(ಪುಟ 6ನ್ನೂ ನೋಡಿ) - ಇವೆಲ್ಲಾ ಈ ಸ್ಥಿರತೆಯ ಭರವಸೆ ನೀಡಿದ ಸರಕಾರವನ್ನು ನಗೆಪಾಟಲು ಮಾಡಿರುವಾಗ, ಸ್ವಾತಂತ್ರ್ಯದ ಸುವರ್ಣ ಜಯಂತಿ ಆಚರಣೆಗಳು ಅಂತ್ಯಗೊಳ್ಳುವ ವೇಳೆಗೆ ತನ್ನ ಉಳಿವೇ ಏಕಮಾತ್ರ ಆದ್ಯತೆಯಾಗಿರುವ ಸರಕಾರದ ಬಗ್ಗೆ ಆಶಾವಾದಕ್ಕೆ ಅವಕಾಶವಾದರೂ ಎಲ್ಲಿ?

ಒಂದು ವರ್ಷದ ಹಿಂದೆ ನಮ್ಮ ದೇಶಬಾಂಧವರು ಹಾಗೂ ಅವರ ರಾಜಕೀಯ ಪ್ರತಿನಿಧಿಗಳು ಸ್ವಾತಂತ್ರ್ಯದ ಸ್ವರ್ಣ ಜಯಂತಿ ಆಚರಣೆ ಕೇವಲ ನಾಮಮಾತ್ರಕ್ಕಾಗಬಾರದು, ನಮ್ಮ ಸಾಧನೆಗಳ-ವಿಫಲತೆಗಳ, ಸಾಮರ್ಥ್ಯಗಳ- ದೌರ್ಬಲ್ಯಗಳ ಅವಲೋಕನದ ಸಮಯವಾಗಬೇಕು ಎಂದು ನಿರ್ಧರಿಸಿದ್ದರು. ಅದಕ್ಕನುಸಾರವಾಗಿ ಸಮಾಜದ ಎಲ್ಲಾ ವಿಭಾಗಗಳ ಪ್ರಮುಖರಿದ್ದ ಒಂದು ವಿಶಾಲ ವ್ಯಾಪ್ತಿಯ ರಾಷ್ಟ್ರೀಯ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿ ನಮ್ಮ ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಎತ್ತಿತೋರುವ ವಿವರವಾದ ಕಾರ್ಯಕ್ರಮಗಳನ್ನು ರೂಪಿಸಿತ್ತು. ಕಳೆದ ವರ್ಷ ಆಗಸ್ಟ್ 14-15 ರ ಮಧ್ಯರಾತ್ರಿ ನಡೆದ ಸಂಸತ್ತಿನ ವಿಶೇಷ ಅಧಿವೇಶನ ಸ್ವರ್ಣಜಯಂತಿಯ ಸಂದೇಶವನ್ನು ಹೊಸ ಪೀಳಿಗೆಗೆ ಒಯ್ಯಲು ನಿರ್ಧರಿಸಿತ್ತು.

"ಆದರೆ 17 ಕ್ಕೂ ಹೆಚ್ಚು ಮಿತ್ರರ ಊರುಗೋಲ ಮೇಲೆ ಕುಂಟುತ್ತಾ ಅಧಿಕಾರವೇರಿದ ಭಾರತೀಯ ಜನತಾ ಪಾರ್ಟಿ ಈ ಇಡೀ ಕಾರ್ಯಕ್ರಮವನ್ನು ಸದ್ದಿಲ್ಲದೆ ಪರಿಣಾಮಕಾರಿಯಾಗಿ ಮೂಲೆಗೊತ್ತಿತು. ಅವೆಲ್ಲಾ ಕಪಾಟುಗಳಲ್ಲೇ ಸಾಯುವಂತೆ ಮಾಡಿತು. ಆ ಪಕ್ಷದ ಗುರು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸ್ವಾತಂತ್ರ್ಯ ಹೋರಾಟದಿಂದ ದೂರನಿಂತಿದ್ದ ಅಮೋಘ ದಾಖಲೆ ಹೊಂದಿರುವಾಗ ಬೇರೇನು ತಾನೇ ನಿರೀಕ್ಷಿಸಲು ಸಾಧ್ಯ?" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಪ್ರಶ್ನಿಸಿದ್ದಾರೆ.

ಹತಾಶೆಯ ನಡುವೆ ಆಶಾಕಿರಣವಾದ ರಾಷ್ಟ್ರಪತಿಗಳ ಸಂದರ್ಶನ

ಈ ಆಗಸ್ಟ್ 15 ರಂದು ಯೋಜಿಸಿದ್ದ ಸಂಸತ್ತಿನ ವಿಶೇಷ ಅಧಿವೇಶನವನ್ನು ಕೊನೆಗಳಿಗೆಯಲ್ಲಿ ರದ್ದು ಮಾಡಲಾಯಿತು. ಸಂಸತ್ ಸದಸ್ಯರು ಈ ಅಧಿವೇಶನಕ್ಕೆಂದು ಆಗಲೇ ದಿಲ್ಲಿಗೆ ಬಂದಿದ್ದರು.

ಮತ್ತೊಂದು ಗಮನಾರ್ಹ ಸಂಗತಿಯೆಂದರೆ ರಾಷ್ಟ್ರಪತಿಗಳು ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನ ಮಾಡುವ ತನ್ನ ಭಾಷಣವನ್ನು ಮಾಡಲಿಲ್ಲ. ಅದರ ಬದಲು ಸುಮಾರು ಹತ್ತು ದಿನಗಳ ಹಿಂದೆ ರೆಕಾರ್ಡ್ ಮಾಡಿಕೊಂಡಿದ್ದ ಪ್ರಖ್ಯಾತ ಪತ್ರಕರ್ತ ಎನ್.ರಾಮ್ ರವರಿಗೆ ಕೊಟ್ಟಿದ್ದ ಸಂದರ್ಶನವನ್ನು ಪ್ರಸಾರ ಮಾಡಲಾಯಿತು. ರಾಷ್ಟ್ರಪತಿಗಳ ಅಭೂತಪೂರ್ವ ನಿರ್ಣಯಕ್ಕೆ ಕಾರಣಗಳೇನೇ ಇರಬಹುದು, ನಮ್ಮ ಪ್ರಭುತ್ವದ ಮುಖ್ಯಸ್ಥರು ಈಗಿನ ಸರಕಾರ ಅನುಸರಿಸುತ್ತಿರುವ ಧೋರಣೆಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳಲು ಇಷ್ಟ ಪಡದೆ ಹಾಗೆ ಮಾಡಿದ್ದಾರೆ ಎಂಬ ಭಾವನೆ ಸರ್ವಸಾಮಾನ್ಯವಾಗಿ ಪ್ರಚಲಿತಗೊಂಡಿದೆ. 'ಹಿಂದುಸ್ತಾನ್ ಟೈಮ್ಸ್' ಪತ್ರಿಕೆ ಆಗಸ್ಟ್ 15 ರ ಸಂಚಿಕೆಯ ಮುಖಪುಟದಲ್ಲಿ 'ರಾಷ್ಟ್ರಪತಿಗಳಿಂದ ಬಿಜೆಪಿ ತತ್ವಗಳ ಮುಸುಕಿನ ಟೀಕೆ' ಎಂದು ಶಿರೋನಾಮೆ ನೀಡಿತು.

"ಬಿಜೆಪಿ ನೇತೃತ್ವದ ಸರಕಾರದ ಧೋರಣೆಗಳು ದೇಶವನ್ನು ಎಂತಹ ಪರಿಸ್ಥಿತಿಗೆ ತಂದಿವೆಯೆಂದರೆ ನಮ್ಮ ಪ್ರಭುತ್ವದ ಮುಖ್ಯಸ್ಥರು ಕೂಡಾ ಅದರಿಂದ ತನ್ನನ್ನು ದೂರವಿರಿಸಿಕೊಳ್ಳಬೇಕಾಯ್ತು ಎಂಬುದು ಸ್ವಯಂವೇದ್ಯ. ಸಾಂವಿಧಾನಿಕ ಘನತೆಯ ಮಿತಿಯೊಳಗೆ ಅವರು ಇದನ್ನು ಮಾಡಿದ್ದಾರೆ. ಇದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು" ಎಂದು ಸುರ್ಜಿತ್ ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

"ಸಹಜವಾಗಿಯೇ ಪ್ರಧಾನಮಂತ್ರಿಗಳ ವಾಡಿಕೆಯ ಭಾಷಣ ಹತಾಶೆಯಿಂದ ತುಂಬಿದ್ದು ಜನಸಮೂಹಗಳಲ್ಲಿ ಯಾವುದೇ ನಿರೀಕ್ಷೆ, ಉತ್ಸಾಹ ಮೂಡಿಸುವಲ್ಲಿ ವಿಫಲವಾದರೆ, ರಾಷ್ಟ್ರಪತಿಗಳ ಸಂದರ್ಶನ ನಮ್ಮ ದೇಶಬಾಂಧವರು ತಮ್ಮ ಸಂಪನ್ಮೂಲಗಳನ್ನು ಮತ್ತು ಸಾಮರ್ಥ್ಯಗಳನ್ನು ಕ್ರೋಢೀಕರಿಸಿಕೊಂಡು ಖಂಡಿತಾ ತಮ್ಮೆಲ್ಲಾ ಸಮಸ್ಯೆಗಳನ್ನು ಮುಖ್ಯವಾಗಿ ಕೋಮುವಾದದ ಸಮಸ್ಯೆಯನ್ನು ಮೀರಿ ನಿಲ್ಲಬಲ್ಲರು, ಕೋಮುವಾದಿ ಶಕ್ತಿಗಳ ತಂತ್ರಗಳು ಸಫಲವಾಗುವುದಿಲ್ಲ" ಎಂದು ಮುಂದುವರೆದು ಸುರ್ಜಿತ್ ಹೇಳಿದ್ದಾರೆ.

ಕಾವೇರಿ ಒಪ್ಪಂದ : ಸುರ್ಜಿತ್ ಸ್ವಾಗತ

"ನಾಲ್ಕು ಸಂಬಂಧ ಪಟ್ಟ ರಾಜ್ಯಗಳಾದ ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಪಾಂಡಿಚೇರಿಗಳ ಮುಖ್ಯಮಂತ್ರಿಗಳು ಕಾವೇರಿ ನದಿ ನೀರಿನ ಹಂಚಿಕೆ ಕುರಿತಂತೆ ಮಾಡಿಕೊಂಡ ಒಪ್ಪಂದವನ್ನು ಸಿಪಿಐ(ಎಂ) ಸ್ವಾಗತಿಸುತ್ತದೆ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ರವರು ಪಿಎನ್ಎನ್ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿದ್ದ, ಮಧ್ಯಂತರ ಅವಾರ್ಡ್ ಹಲವು ವರ್ಷ ಜಾರಿಯಾಗದಿದ್ದ ಪರಿಸ್ಥಿತಿಯಲ್ಲಿ ಒಂದು ರಾಜ್ಯದ ಜನರನ್ನು ಇನ್ನೊಂದು ರಾಜ್ಯದ ಜನಗಳ ವಿರುದ್ಧ ಎತ್ತಿಕಟ್ಟಿ ಈ ಹಿಂದೆ ಜೀವಹಾನಿ, ಆಸ್ತಿ-ಪಾಸ್ತಿ ಹಾನಿಗೂ ಕಾರಣವಾಗಿದ್ದ ಈ ಪ್ರಶ್ನೆ ಬಗ್ಗೆ ಆಗಿರುವ ಈ ಒಪ್ಪಂದ "ನದಿ ನೀರಿನ ಬಗ್ಗೆ ಇತರ ರಾಜ್ಯಗಳ ನಡುವೆ ಇರುವ ವಿವಾದಗಳಲ್ಲಿ ಒಂದು ತಿಳುವಳಿಕೆಗೆ ಬರಲು ದಾರಿ ಮಾಡಿಕೊಟ್ಟಿದೆ" ಎಂದು ಸುರ್ಜಿತ್ ಹೇಳಿದ್ದಾರೆ. "ಭೂಸುಧಾರಣೆಯಲ್ಲದೆ, ಕೃಷಿಯ ಬೆಳವಣಿಗೆ ಬಹುಪಾಲು ನೀರಾವರಿ ಸಾಮರ್ಥ್ಯದ ಬಳಕೆಯನ್ನು ಅವಲಂಬಿಸಿದೆ. ಆದ್ದರಿಂದಲೇ ಎಲ್ಲಾ ರಾಜ್ಯಗಳು ನದಿನೀರಿನ ಪಾಲಿಗಾಗಿ ಪರಸ್ಪರ ಸ್ಪರ್ಧಿಸುತ್ತಿವೆ. ಏಕೆಂದರೆ ಇವು ನೀರಾವರಿಯ ಅತಿ ಅಗ್ಗದ ಮೂಲ. ವಿದ್ಯುತ್ ಮತ್ತು ಡೀಸೆಲ್ ಇಂಜಿನ್‌ಗಳು, ಕೊಳವೆ ಬಾವಿಗಳು ಮತ್ತಿತರ ವಿಧಾನಗಳು ಕಾಲುವೆ ನೀರಿಗಿಂತ ಬಹಳ ವೆಚ್ಚದಾಯಕ-ಆದ್ದರಿಂದ ಇತರ ರಾಜ್ಯಗಳೂ ಕಾವೇರಿ ಒಪ್ಪಂದದಿಂದ ಸ್ಫೂರ್ತಿ ಪಡೆದು ಇಂತಹ ವಿವಾದಗಳನ್ನು ಪರಸ್ಪರ ವಿಶ್ವಾಸದಿಂದ ಬಗೆಹರಿಸಿಕೊಳ್ಳುತ್ತವೆ ಎಂದು ನನ್ನ ನಿರೀಕ್ಷೆ" ಎಂದು ಸುರ್ಜಿತ್ ಆಶಾಭಾವನೆ ವ್ಯಕ್ತಪಡಿಸಿದರು.

ಉತ್ಸಾಹ ತುಂಬದ ಸ್ವಾತಂತ್ರ್ಯ ಸ್ವರ್ಣಜಯಂತಿ ಉತ್ಸವ

ಎನ್.ಕೆ.ಉಪಾಧ್ಯಾಯ

ಆಗಸ್ಟ್ 15, 1947 ರಂದು ಗಳಿಸಿದ ಭಾರತ ದೇಶದ ಆಗಸ್ಟ್ 15, 1997 ರಂದು ಸ್ವಾತಂತ್ರ್ಯ ಉತ್ಸವವನ್ನು ಸ್ವಾತಂತ್ರ್ಯ ಸ್ವರ್ಣಜಯಂತಿಯಾಗಿ ಅತ್ಯುತ್ಸಾಹದಿಂದ ಆಚರಿಸಿ, ಆಗಸ್ಟ್ 15, 1998 ರವರೆಗೆ ಇಡೀ ವರ್ಷ ಭಾರತದ ಹೊಸ ಪೀಳಿಗೆಗೆ ಬ್ರಿಟಿಷರ ವಿರುದ್ಧ ಭಾರತ ಸ್ವಾತಂತ್ರ್ಯಕ್ಕಾಗಿ ನಡೆಸಿದ ವೀರ ಧೀರ, ತ್ಯಾಗ ಬಲಿದಾನಗಳ ಸ್ಫೂರ್ತಿದಾಯಕ ಚರಿತ್ರೆಯನ್ನು ತಿಳಿಯಗೊಳಿಸುವ ಬ್ರಹತ್ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಯಾವ ಉದ್ದೇಶಕ್ಕಾಗಿ ಅಂದಿನ ಮುದುಕ, ಮುದುಕಿಯರು, ಯುವಕ, ಯುವತಿಯರು, ರೈತ, ಕಾರ್ಮಿಕ, ವಿದ್ಯಾರ್ಥಿಗಳು ಸರ್ವಸ್ವವನ್ನು ಬಲಿಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಧಮುಕಿದರೆಂಬ, ಧೀರ ಹೋರಾಟ ನಡೆಸಿದರು ಎಂಬ ಅಂಶಗಳನ್ನು ಸಾರ್ವಜನಿಕರ ಮುಂದಿಡುವ ಪ್ರತಿಜ್ಞೆ ಲೋಕಸಭೆಗೆ ಆರಿಸಿಹೋದ ಎಲ್ಲಾ ಪಕ್ಷಗಳ ಸದಸ್ಯರಿಂದ ಹೋದವರ್ಷ ಲೋಕಸಭೆಯಲ್ಲಿ ಗಂಟಾ ಘೋಷವಾಗಿ ಪ್ರತಿಧ್ವನಿಸಿತು. ಕರ್ನಾಟಕದ ವಿಧಾನಸಭೆಯಲ್ಲೂ ಲೋಕಸಭೆಯನ್ನು ನಾಚಿಸುವ ರೀತಿಯಲ್ಲೇ ಪ್ರತಿಜ್ಞೆ ಕೈಗೊಳ್ಳಲಾಯಿತು. ಸ್ವತಂತ್ರ್ಯ ಸ್ವರ್ಣ ಜಯಂತಿಯ ಉತ್ಸವದ ಈ ಹನ್ನೆರಡು ತಿಂಗಳುಗಳಲ್ಲಿ ನಡೆದದ್ದೇನು? ಸ್ವಾತಂತ್ರ್ಯ ಚಳುವಳಿಯಿಂದ ನಾವು ಸ್ಫೂರ್ತಿ ಪಡೆದಿದ್ದೇವೆಯೇ, ಸ್ವಾತಂತ್ರ್ಯ ಚಳುವಳಿಯ ಮಹೋದ್ದೇಶಗಳನ್ನು ಕಾರ್ಯರೂಪದಲ್ಲಿ ತರಲು ಸ್ವಲ್ಪವಾದರೂ ಪ್ರಯತ್ನ ನಡೆಸಿದ್ದೇವೆಯೇ ಎಂದು ವಿಚಾರ ಮಾಡಿದರೆ, ಸ್ವರ್ಣಜಯಂತಿ ಉತ್ಸವ ಬರೀ ಘೋಷಣೆಯಾಗಿಯೇ ಉಳಿಯಿತಲ್ಲದೆ ಅದನ್ನು ನೆನಪಿಸಿಕೊಳ್ಳುವವರೆ ಇಲ್ಲದಂತಾಗಿದೆಂದರೆ ತಪ್ಪೇನಾಗಲಾರದು.

ಕಾ.ಇ.ಎಂ.ಎಸ್. ನಂಬೂದರೀಪಾಡ್ ಅವರು 1947 ರ ಐಕ್ಯರಂಗದ ಸ್ವಾತಂತ್ರ್ಯ ಸ್ವರ್ಣಜಯಂತಿ ವಿಶೇಷಾಂಕಕ್ಕೆ ಇತ್ತ ಸಂದೇಶದಲ್ಲಿ ಆಗಸ್ಟ್ 15, 1947 ರಂದು ಗೆದ್ದ ಸ್ವಾತಂತ್ರ್ಯದ ಫಲಾನುಭವಿಗಳು ಇಡೀ ಭಾರತದ ಜನತೆಯಲ್ಲಿ ಹೊಸ ಆಳರಸರಾಗಿ ಬಿಟ್ಟ ಭೂಮಾಲಿಕರು ಮತ್ತು ಬಂಡವಾಳ ಶಾಹಿಗಳ ಒಂದು ಸಣ್ಣ ಕೂಟ. ಯಾವ ಆಶಯ ಆಕಾಂಕ್ಷೆಗಳಿಂದ ಜನಸಾಮಾನ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರೋ ಅದು ಈಡೇರಲಿಲ್ಲ" ಎಂಬ ದುಃಖಭರಿತ ಉದ್ಗಾರ ತೆಗೆದಿದ್ದರು. ಅವರ ನುಡಿ ಎಷ್ಟು ಸತ್ಯ ಎಂಬುದಕ್ಕೆ ಸ್ವರ್ಣಜಯಂತಿ ಉತ್ಸವದ ಕುರಿತು ಸರಕಾರ ಮತ್ತು ರಾಜಕೀಯ ಪಕ್ಷಗಳ ವರ್ತನೆ ಸಾಕ್ಷಿಯಾಗಿದೆ. ಅಧಿಕಾರ ಸಿಕ್ಕವರಿಗೆ ಅಧಿಕಾರ ಉಳಿಸಿಕೊಳ್ಳುವ ಚಿಂತೆ, ಅಧಿಕಾರ ಇಲ್ಲದವರಿಗೆ ಅಧಿಕಾರ ಗಳಿಸುವ ಚಿಂತೆ. ಸ್ವಾತಂತ್ರ್ಯ ಸ್ವರ್ಣಜಯಂತಿಯ ಚಿಂತೆ ಮನದಲ್ಲೇ ಉಳಿಯದಿರುವುದು ದೇಶದ ಭವಿಷ್ಯತ್ತಿಗೆ ಮಾರಕವೆಂದೇ ಹೇಳಬೇಕಾಗುತ್ತದೆ.

ದೇಶದ ಸ್ವತಂತ್ರ್ಯ ಸ್ವರ್ಣಜಯಂತಿ ಉತ್ಸವವನ್ನು ಆಚರಿಸುತ್ತಿರುವಾಗಲೇ ಯಾರು ಸ್ವಾತಂತ್ರಚಳುವಳಿಯನ್ನು ವಿರೋಧಿಸುತ್ತಿದ್ದರೂ ಅವರೇ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವುದು ಸ್ವಾತಂತ್ರಜಯಂತಿ ಉತ್ಸವಕ್ಕಾಗಿರುವ ಅಪಮಾನ ವೆಂದೇ ಹೇಳಬೇಕು. ಆದರೆ ಕರ್ನಾಟಕದಲ್ಲಿ ಜನತಾದಳದ ಸರಕಾರ ಅಸ್ತಿತ್ವದಲ್ಲಿದ್ದರೂ ಕೂಡ ಜನತಾದಳವಾಗಲೀ, ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಇರುವ ಕಾಂಗ್ರೆಸ್ಸಾಗಲೀ ಸ್ವಾತಂತ್ರ್ಯ ಚಳುವಳಿಯ ಮಹತ್ವವನ್ನು ಜನರ ಮಧ್ಯೆ ಕೊಂಡೊಯ್ದು ರಾಜ್ಯದಲ್ಲಿ ಹೊಸ ಚಿಂತನೆ ಮೂಡಿಬರುವಂತೆ ಮಾಡುವಲ್ಲಿ ವಿಫಲರಾಗಿದ್ದಾರೆಂದೇ ಹೇಳಬೇಕಾಗುತ್ತದೆ, ಮಾತ್ರವಲ್ಲ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಜನವಿಭಾಗಗಳಲ್ಲಿ ಜಾತಿ ಧರ್ಮಗಳಲ್ಲಿ ಐಕ್ಯತೆ ಉಂಟು ಮಾಡಿ ಬ್ರಿಟಿಷರ ರಾಕ್ಷಸೀ ದಬ್ಬಾಳಿಕೆಯನ್ನೆದುರಿಸಿ ಹೋರಾಟದಲ್ಲಿ ಧುಮುಕುವಂತೆ ಮಾಡಿದ ಅನುಭವಗಳ ಹಿನ್ನೆಲೆಯಲ್ಲಿ ಒಳಜಗಳಗಳನ್ನು ಹಿಂದೆ ಹಾಕಿ, ಮತೀಯ ಶಕ್ತಿಗಳನ್ನು ಜನರಿಂದ ದೂರೀಕರಿಸಿ ಅಲ್ಪಮತಸ್ತರ ಮತ್ತು ದಲಿತರ ಹಿತಾಸಕ್ತಿಗಳಿಗೆ ಮುಂದಾಗಿ ಜನಸಾಮಾನ್ಯರ ನೂರಾರು ಜೀವಂತ ಸಮಸ್ಯೆಗಳಿಗೆ ಪರಿಹಾರ ಒದಗಿಸಿ ಸ್ವಾತಂತ್ರ್ಯ ಸಂಗ್ರಾಮದ ಮಹತ್ತರ ದೃಶ್ಯವನ್ನು ಕನ್ನಡಿಗರ ಕನಸುಗಳನ್ನು ನನಸು ಗೊಳಿಸುವುದರಲ್ಲಿಯೂ ವಿಫಲ ಗೊಂಡಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಾತಿ ಧರ್ಮಗೌಣವಾಗಿತ್ತು. ಗುಲಾಮಗಿರಿ ವಿರುದ್ಧ ಐಕ್ಯಹೋರಾಟ ಪ್ರಧಾನವಾಗಿತ್ತು. ನಮ್ಮಲ್ಲಿ ಕಳೆದ ಒಂದು ವರ್ಷದಲ್ಲಿ ಆಳುವ ಜನತಾಪಕ್ಷ ಜಾತಿ, ಉಪಜಾತಿಗಳಿಗೆ ಕುಮ್ಮಕ್ಕು ನೀಡುವ ರೀತಿಯಲ್ಲಿ ವರ್ತಿಸಿದೆ. ರಾಷ್ಟ್ರೀಕೃತ ಕೈಗಾರಿಕೆಗಳನ್ನು ಅಪಾರ ನಷ್ಟ ಅನುಭವಿಸುವಂತೆ ಮಾಡಿ ಖಾಸಗೀಕರಣಗೊಳಿಸುವ, ಬಹುರಾಷ್ಟ್ರೀಯರಿಗೆ ಕಾರ್ಖಾನೆ ಮತ್ತು ಅದರ ಸ್ಥಿರಾಸ್ತಿಯನ್ನು ದಾನವಾಗಿ ನೀಡಿ ಉತ್ಪಾದನ ಸಾಧನೆಗಳನ್ನು ರಾಷ್ಟ್ರೀಕರಣ ಗೊಳಿಸಬೇಕೆಂಬ ಮಹೋದ್ದೇಶಕ್ಕೆ ನೀರೆರಚುತ್ತಿರುವುದನ್ನು ನೋಡುತ್ತಿದ್ದೇವೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ರೈತರಿಗಿತ್ತ "ದುಡಿಯುವ ರೈತನೇ ಭೂಮಿಯ ಒಡೆಯ" ಎಂಬ ಆಶ್ವಾಸನೆಯನ್ನು ಕಡೆಗಣಿಸಿ ಭೂಮಾಲಿಕರ, ಸರಕಾರದ ಹೆಚ್ಚುವರಿ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ಕೃಷಿಕೂಲಿಗಾರ, ಬಡ ರೈತರ ಮೇಲೆ ದೌರ್ಜನ್ಯ ನಡೆಸುತ್ತಿದೆ. ಅಕಾಲಿಕ ಮಳೆ, ಸಾಲದ ಹೊರೆಗಳಿಂದ ಜರ್ಜರಿತನಾದ ರೈತ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ವಿಷಕುಡಿದು ಆತ್ಮಹತ್ಯೆಗೊಳಗಾಗಬೇಕಾಗಿದೆ. ತಮ್ಮ ಹೊಲಗಳನ್ನು ಸಾಗುಮಾಡಲು ಸಾಧ್ಯವಿಲ್ಲದೆ ಉಪಜೀವನಕ್ಕಾಗಿ ದೂರದ ಊರುಗಳಿಗೆ ಗುಳೇ ಹೋಗ ಬೇಕಾಗಿದೆ. ಕನಿಷ್ಠ ಕೂಲಿಗಾಗಿ ಒಂದೆಡೆ ಹೋರಾಡುತ್ತಿರುವಾಗಲೇ ಉದಾರೀಕರಣ ನೀತಿಯಿಂದಾಗಿ ಕಾರ್ಖಾನೆಗಳ

ಪುಟ 7ಕ್ಕೆ

ಶ್ರೀಕೃಷ್ಣಾ ಆಯೋಗದ ವರದಿಯ ಬಗ್ಗೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ

ಹಿಟ್ಲರನ ಹಾದಿಯಲ್ಲಿ......



ಬಾಬ್ರಿ ಮಸೀದಿ ಧ್ವಂಸದ ನಂತರ ಮುಂಬೈ ನಗರ ಅನುಭವಿಸಿದ ಅತ್ಯಂತ ಕರಾಳ ಕೋಮುಗಲಭೆಗಳ ಬಗ್ಗೆ ತನಿಖೆ ನಡೆಸಿದ ಶ್ರೀಕೃಷ್ಣ ಆಯೋಗದ ವರದಿಯನ್ನು ಅಹಂಭಾವದಿಂದ ತಿರಸ್ಕರಿಸುವ ಮೂಲಕ ಮಹಾರಾಷ್ಟ್ರದ ಬಿಜೆಪಿ-ಶಿವಸೇನೆ ಸರಕಾರ ಪ್ರಜಾಪ್ರಭುತ್ವ ಹಾಗೂ ಸಾರ್ವಜನಿಕ ಹೊಣೆಗಾರಿಕೆಯ ಕನಿಷ್ಠ ವಿಧಿ-ವಿಧಾನಗಳನ್ನೂ ಗಾಳಿಗೆ ತೂರಿದೆ. ಪ್ರಸಕ್ತ ಹೈಕೋರ್ಟ್ ನ್ಯಾಯಧೀಶರಾಗಿರುವ ಒಬ್ಬರು ತನಿಖೆ ನಡೆಸಿ ಸಲ್ಲಿಸಿದ ವರದಿಯನ್ನು ಇಷ್ಟೊಂದು ತಿರಸ್ಕಾರದಿಂದ ಎಸೆದಿರುವುದುಸ್ವತಂತ್ರ ಭಾರತದ ಇತಿಹಾಸದಲ್ಲೇ ಇದು ಮೊದಲು. ಕಾರಣ ಸ್ಪಷ್ಟ-ನ್ಯಾಯಮೂರ್ತಿ ಶ್ರೀಕೃಷ್ಣರವರು ಪರಿಶ್ರಮ ಪಟ್ಟು ನಡೆಸಿದ ತನಿಖೆ ಈ ಭಯಾನಕ ಗಲಭೆಗಳಿಗೆ ಬಿಜೆಪಿ ಮತ್ತು ಶಿವಸೇನೆಯ ಘಟಾನುಘಟಿಗಳೇ ಹೊಣೆ ಎಂದು ಆರೋಪಿಸಿದ್ದೇ ಅವರ ತಿರಸ್ಕಾರಕ್ಕೆ ಕಾರಣ. ಈ ವರದಿಯನ್ನು ತಿರಸ್ಕರಿಸುವ ಮೂಲಕ ಭಾರತೀಯ ಸಂವಿಧಾನ ಹಾಕಿಕೊಟ್ಟಿರುವ ರಾಜಕಾರಣದ ಜಾತ್ಯಾತೀತ ಪ್ರಜಾಸತ್ತಾತ್ಮಕ ನೀತಿಗಳಿಗೆ ತಾವು ಬದ್ಧರಲ್ಲ ಎಂದು ಕೋಮುವಾದಿ ಶಕ್ತಿಗಳು ಸಾರಿ ಹೇಳಿದಂತಾಗಿದೆ - ಅವು ಸ್ಪಷ್ಟವಾಗಿ ಈ ಕಹಳೆಯನ್ನು ಊದಿವೆ.

ಕೇಂದ್ರ ಗೃಹಮಂತ್ರಿ ಎಲ್.ಕೆ.ಅಡ್ವಾಣಿಯವರೂ ವರದಿಯನ್ನು ತಿರಸ್ಕರಿಸಿರುವುದನ್ನು ಸಮರ್ಥಿಸಿಕೊಳ್ಳುತ್ತಾ ಮಹಾರಾಷ್ಟ್ರ ಸರಕಾರದ ರಕ್ಷಣೆಗೆ ಧಾವಿಸಿದ್ದಲ್ಲಿ ಆಶ್ಚರ್ಯವೇನಿಲ್ಲ. ನಿಜ, ಅವರ ಸಮರ್ಥನೆಗೆ ವೈಯಕ್ತಿಕ ಕಾರಣಗಳೂ ಇವೆ. ಬಾಬ್ರಿ ಮಸೀದಿ ಧ್ವಂಸದ ಕೇಸಿನಲ್ಲಿ ಚಾರ್ಜ್‌ಶೀಟ್ ಆದ ನಂತರ ಈಗ ಶ್ರೀಕೃಷ್ಣ ಆಯೋಗದ ವರದಿಯಲ್ಲೂ ಅವರು ತನ್ನ ಕುಖ್ಯಾತ ರಥಯಾತ್ರೆಯ ಸಮಯದಲ್ಲಿ ಕೋಮುವಿಷ ಹರಡಿದರೆಂಬ ದೋಷಾರೋಪಣೆಗೆ ಒಳಗಾಗಿದ್ದಾರೆ. ಆಯೋಗ ಹೀಗೆಂದಿದೆ- *"ಬಿಜೆಪಿ ಮುಖಂಡ ಶ್ರೀ ಎಲ್.ಕೆ.ಅಡ್ವಾಣಿಯವರ ರಥಯಾತ್ರೆಯಿಂದ ಮತ್ತೆ ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದದ ಮೇಲೆ ಗಮನ ಕೇಂದ್ರೀಕೃತವಾಯಿತು. ರಥಯಾತ್ರೆಯ ಹಾದಿಯಲ್ಲಿ ಅನಿವಾರ್ಯವಾಗಿ ನಡೆದ ತಿಕ್ಕಾಟಗಳು, ಗಲಭೆಗಳ ಸಣ್ಣ ಕೇಸುಗಳು.... ಬರಲಿದ್ದ ಬಿರುಗಾಳಿಯನ್ನು ಸೂಚಿಸುವ ದೂರದ ಸಿಡಿಲ ಸದ್ದು ಆಗಿದ್ದವು"*

ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಮುಂಬೈಯಲ್ಲಿ ಕ್ರಿಮಿನಲ್ ಕೋಮು ಗಲಭೆಗಳನ್ನು ಹರಿಯಬಿಟ್ಟು ಅಪರಾಧವೆಸಗಿದವರನ್ನು ರಕ್ಷಿಸುವ ಒಂದು ಪಿತೂರಿಯಲ್ಲಿ ಶಾಮೀಲಾಗಿವೆ ಎಂಬುದು ಸ್ಪಷ್ಟ. ಇಂತಹ ಒಂದು ಪಿತೂರಿ ಸಫಲವಾಗಲು ಬಿಡಲಾಗದು. ಸಾರ್ವಜನಿಕ ಒತ್ತಡಗಳನ್ನು ತೀವ್ರಗೊಳಿಸಿ ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಆಯೋಗದ ಶಿಫಾರಸುಗಳನ್ನು ಜಾರಿಗೆ ತರುವಂತೆ, ಅಪರಾಧಿಗಳನ್ನು ಶಿಕ್ಷಿಸುವಂತೆ ಮಾಡಬೇಕು. ಹಾಗೆ ಮಾಡಲು ನಿರಾಕರಿಸಿಧರೆ ಅವರಿಗೆ ಅಧಿಕಾರದಲ್ಲಿ ಉಳಿಯಲು ಯಾವುದೇ ಹಕ್ಕಿಲ್ಲ.

ಸರಕಾರ ಇಷ್ಟೊಂದು ನಗ್ನ ರೀತಿಯಲ್ಲಿ ಕೋಮುಗ್ರಸ್ತಗೊಂಡಿರುವುದನ್ನು ವಿಹೆಚ್‌ಪಿ ಮತ್ತು ಭಜರಂಗ ದಳದಂತಹ ಆರ್.ಎಸ್.ಎಸ್. ಮುಖಗಳು ಅಲ್ಪಸಂಖ್ಯಾತರ ವಿರುದ್ಧ ನಡೆಸಿರುವ ತೀವ್ರವಾದ ದ್ವೇಷ ಪ್ರಚಾರದ ಹಿನ್ನೆಲೆಯಲ್ಲಿ ನೋಡಬೇಕು. ಗುಜರಾತಿನಲ್ಲಿ ಚರ್ಚುಗಳು, ಕ್ರಿಶ್ಚಿಯನ್ ಶಾಲೆಗಳ ಮೇಲೆ ಬಹಿರಂಗ ಆಕ್ರಮಣ ನಡೆಯುತ್ತಿವೆ, 'ಗುಪ್ತ' ಮತಾಂತರವನ್ನು ತಡೆಯುವ ಹೆಸರಲ್ಲಿ ಬೈಬಲ್ ಪ್ರತಿಗಳನ್ನು ಸಾರ್ವಜನಿಕವಾಗಿ ಸುಡಲಾಗುತ್ತಿದೆ. ಬಹಳ ಆತಂಕದ ಸಂಗತಿಯೆಂದರೆ ವಿಹೆಚ್‌ಪಿ ಒಂದು ಅಂತರ-ಕೋಮು ವಿವಾಹ ಸೆಲ್' ರಚಿಸಿದೆಯಂತೆ. ಮಿಶ್ರ ಮದುವೆಗಳ ಮೇಲೆ 'ಬಿಗಿ ಹಿಡಿತ' ಇದರ ಗುರಿ. ಕೇಂದ್ರ ಮತ್ತು ರಾಜ್ಯ ಸರಕಾರಗಳೆಡರ ಅನುಮೋದನೆಯೂ ಇದಕ್ಕೆ ಇದ್ದಂತಿದೆ. ಭವಿಷ್ಯದಲ್ಲಿ ಏನಾಗಬಹುದು ಎಂಬುದು ಗುಜರಾತಿನ ಒಂದು ಹಳ್ಳಿಯಲ್ಲಿ ಆಗಲೇ ಕಂಡು ಬಂದಿದೆ. ಇಬ್ಬರು ಹಿಂದೂ ಹುಡುಗಿಯರು ಮುಸ್ಲಿಂ ಹುಡುಗರೊಡನೆ ಓಡಿಹೋದುದಕ್ಕೆ ಸಿಟ್ಟು ಪ್ರಕಟಿಸುತ್ತಾ ವಿಹೆಚ್‌ಪಿಯ ಗಲಭೆ ಪಡೆಗಳು ಲೂಟಿಯಲ್ಲಿ ತೊಡಗಿದವು. ಅಂಗಡಿ, ಮನೆಗಳನ್ನು ಸುಟ್ಟು ಆ ಹಳ್ಳಿಯ ಎಲ್ಲಾ 69 ಅಲ್ಪಸಂಖ್ಯಾತ ಕುಟುಂಬಗಳು ಊರು ಬಿಟ್ಟು ಹೋಗುವಂತೆ ಮಾಡಿದರು.

ಕಾವಿಪಡೆಗಳು ನಿರಂತರವಾಗಿ ಹಿಟ್ಲರ್‌ನಿಂದ ಎರವಲು ಪಡೆಯುತ್ತಲೇ ಇವೆ. ಹಿಟ್ಲರ್ ಕೂಡಾ ಯೆಹೂದಿಯರ ಮತ್ತು ಜರ್ಮನರ ನಡುವೆ ವಿವಾಹಗಳನ್ನು ನಿಷೇಧಿಸಿದ್ದ. ಇದು ಇವರ ಸ್ಫೂರ್ತಿಯ ಮೂಲವಾಗಿರುವಾಗ ಭಾರತದಲ್ಲಿ ಇವರೇನು ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬ ಬಗ್ಗೆ ಸಂಶಯವೇ ಉಳಿಯುವುದಿಲ್ಲ. ಭಾರತದಂತಹ ವೈವಿಧ್ಯಮಯ ಹಾಗೂ ಬಹುಸ್ವರೂಪದ ಒಂದು ಸಮಾಜದ ಜಾತ್ಯಾತೀತ ಪ್ರಜಾಸತ್ತಾತ್ಮಕ ಅಡಿಪಾಯಗಳನ್ನು ನಾಶಪಡಿಸಲೆತ್ನಿಸುವ ಇಂತಹ ಪ್ರಯತ್ನಗಳನ್ನು ಇನ್ನು ಸಹಿಸಲಾಗದು. ಇಂತಹ ನಗ್ನ ಕೋಮುವಾದಿ ಶಕ್ತಿಗಳನ್ನು ನಮ್ಮ ದೇಶದ ಜನ ಒಗ್ಗಟ್ಟಾಗಿ ಅಧಿಕಾರದಿಂದ ಹೊರಹಾಕಬೇಕು.

ಡಿಸೆಂಬರ್ 1992 - ಜನವರಿ 1993 ರ ಭೀಕರ ಕೋಮುಗಲಭೆಗಳಲ್ಲಿ ಬಲಿಯಾದ ಸಾವಿರದಷ್ಟು ಮುಗ್ಧರ ಒಂದು ಕುಟುಂಬದ ಈ ಆಕ್ರಂದನಕ್ಕೆ ಕಾರಣರಾದವರನ್ನು ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು ಬಿಡಬೇಕೆ?



'ಮೂಡಿ' ನಂತರ ಡಿ.ಸಿ.ಆರ್ ಹೊಡೆತ



ಜಿ.ಎಸ್.ಮಣಿ

ಆರ್ಥಿಕದಲ್ಲಿ ಸರ್ಕಾರದ ಪಾತ್ರ ದೊಡ್ಡದಾಗಿರುವವರೆಗೆ ಇಂತಹವುಗಳಿಗೆ ಹೇಳಿಕೊಳ್ಳುವಂತಹ ಪ್ರಾಮುಖ್ಯತೆ ಇರುತ್ತಿರಲಿಲ್ಲ. ಆದರೆ ಉದಾರೀಕರಣ ಜಾಗತೀಕರಣಗಳು ಆರ್ಥಿಕದಲ್ಲಿ ಸರ್ಕಾರದ ಪಾತ್ರವನ್ನು ತೀರ ಕಡಿಮೆ ಮಾಡಿರುವುದ ರಿಂದ, ವಿದೇಶೀ ಹೂಡಿಕೆಯ ಮೇಲೆ ಆರ್ಥಿಕ ಪೂರ್ತಿ ಅವಲಂಬಿಸಿರುವು ದರಿಂದಲೇ ತಾಪತ್ರಯಗಳ ಸರಮಾಲೆ ಹೆಣೆದು ಕೊಳ್ಳುತ್ತಿರುವುದು.

ಮೂಡಿಸ್, ಸ್ಟಾಂಡರ್ಡ್ ಆ್ಯಂಡ್ ಪೂರ್, ಡಿಸಿಆರ್ (ಅಂದರೆ ಡಿಫ್ ಆ್ಯಂಡ್ ಸೆಲ್ಪ್ಸ್ ರೇಟಿಂಗ್ ಕಂಪನಿ). ಇವೆಲ್ಲ ಅಂತರಾಷ್ಟ್ರೀಯ ಮಟ್ಟದ ರೇಟಿಂಗ್ ಕಂಪನಿಗಳು. ರೇಟಿಂಗ್ ಕಂಪನಿಯೆಂದರೆ ವಿವಿಧ ದೇಶಗಳು, ಕಂಪನಿಗಳ ಶೇರುಗಳು ಭದ್ರತಾ ಬಾಂಡುಗಳು ಇತ್ಯಾದಿಗಳಲ್ಲಿ ಹಣ ಹೂಡಿದರೆ ಪ್ರತಿಫಲ ಎಷ್ಟಿರುತ್ತದೆ ಮತ್ತು ಹಣ ಕಳೆದುಕೊಳ್ಳುವ ಅಪಾಯ (ರಿಸ್ಕ್) ಎಷ್ಟು ಎಂಬುದನ್ನು ಅಳೆದು ಅದರ ಪ್ರಕಾರ ಶ್ರೇಣಿ ನೀಡುತ್ತವೆ. ಇದನ್ನೇ ರೇಟಿಂಗ್ ಅನ್ನುವುದು.

ಈ ರೇಟಿಂಗ್‌ನ ಆಧಾರದ ಮೇಲೆ ಅಂತರ್‌ರಾಷ್ಟ್ರೀಯ ಹೂಡಿಕೆ ದೇಶದೊಳಗೆ ಹರಿದು ಬರುತ್ತದೆ. ಈಗ ಈ ರೇಟಿಂಗ್ ಕಂಪನಿಗಳ ಮೇಲೆ ಎಂತಹ ಒತ್ತಡಗಳು ಕೆಲಸ ಮಾಡುತ್ತವೆ ಮತ್ತು ಅವುಗಳ ಪಕ್ಷಪಾತತನ ಎಷ್ಟು ಎಂಬುದು ಬಹು ಮುಖ್ಯವಾಗುತ್ತದೆ.

ಭಾರತ ಪರಮಾಣು ಪರೀಕ್ಷೆ ಮಾಡಿದ ನಂತರ ಮತ್ತು ಅದಕ್ಕೂ ಮೊದಲು ಮೂಡಿಸ್ ರೇಟಿಂಗ್ ಕಂಪನಿ ಭಾರತದ ರೇಟಿಂಗನ್ನು ಕಡಿಮೆ ಮಾಡಿತ್ತು. ಆಗ್ನೇಯ ಏಶಿಯ ದೇಶಗಳ ಬಿಕ್ಕಟ್ಟಿಗೆ ಮೊದಲು ಈ ದೇಶಗಳ ಬಗ್ಗೆ ಉತ್ತಮ ರೇಟಿಂಗ್ ನೀಡಿ ಮೂಡಿಸ್ ತನ್ನ ಕೈ ಸುಟ್ಟುಕೊಂಡಿತ್ತು. ಮೂಡಿಸ್‌ನ ಪ್ರತಿಷ್ಠೆಗೆ ಇದು ಧಕ್ಕೆ ತಂದಿತ್ತು. ಆದ್ದರಿಂದಲೇ ಅದು ಭಾರತದ ರೇಟಿಂಗನ್ನು ಕಡಿಮೆ ಮಾಡಿತ್ತು. ಈಗ ಡಿ.ಸಿ.ಆರ್. ಭಾರತದ ವಿದೇಶೀ ವಿನಿಮಯ ರೇಟಿಂಗನ್ನು ಕಡಿಮೆ ಮಾಡಿದೆ. ಮೊದಲು ಈ ರೇಟಿಂಗ್ ಡಬಲ್‌ಬಿಪ್ಲಸ್ ಇತ್ತು (ಬಿಬಿ+) ಅದನ್ನು ಟ್ರಿಪಲ್ ಬಿ ಮೈನಸ್ ಮಾಡಲಾಗಿದೆ (ಬಿಬಿಬಿ-)

ಇದರರ್ಥ ಭಾರತ ಹೂಡಿಕೆಗೆ ಅರ್ಹವಲ್ಲದ ದೇಶವೆಂಬ ವರ್ಗಕ್ಕೆ ಸೇರುತ್ತದೆ. ಡಿಸಿಆರ್ ಪ್ರಕಾರ ಭಾರತದ ಹಣಕಾಸು ಪರಿಸ್ಥಿತಿ ಹದಗೆಡುತ್ತಿದ್ದು ಮುಂಬರುವ ದಿನಗಳಲ್ಲಿ ವ್ಯಾಪಾರ ಬಾಕಿ ಹೆಚ್ಚುತ್ತಲೇ ಹೋಗುವ ಸಂಭವ ವಿದೆಯಂತೆ.

ಡಿಸಿಆರ್‌ನ ಈ ಕೆಳ ರೇಟಿಂಗ್‌ನ ಪರಿಣಾಮವಾಗಿ ರೂಪಾಯಿಯ ಬೆಲೆ ಕುಸಿದಿದೆ.ಈ ಕುಸಿತ ಮುಂದುವರಿದೇ ಇದೆ.

ಸರ್ಕಾರಗಳು ಆರ್ಥಿಕ ಸುಧಾರಣೆಯ ವೇಗವನ್ನು ಕಡಿಮೆ ಮಾಡುತ್ತಲೇ ಹೋಗುತ್ತಿರುವುದರಿಂದ ಭಾರತದ ಆರ್ಥಿಕ ಪರಿಸ್ಥಿತಿಯಲ್ಲಿ ಒಟ್ಟಾರೆಯಾಗಿ ಸುಧಾರಣೆಯಾಗುವ ಬದಲು ಹದಗೆಡುವ ಸಾಧ್ಯತೆಯೇ ಹೆಚ್ಚು ಎಂಬುದು ಅವರ ಅಭಿಪ್ರಾಯ.

ಡಿಸಿಆರ್‌ನ ರೇಟಿಂಗ್‌ನ ಪರಿಣಾಮ ಗಳು ಏನು ಎಂಬುದು ಬೇರೆ ವಿಷಯ. ಆದರೆ ಭಾರತದಂತಹ ಒಂದು ಬೃಹತ್ ರಾಷ್ಟ್ರದಲ್ಲಿ ಹೂಡಿಕೆ ಮಾಡಬೇಕಾದರೆ ಈ ಕಂಪನಿಯ ರೇಟಿಂಗನ್ನು ನೋಡಬೇಕಾಗಿರು ವಾಗ ಈ ರೇಟಿಂಗ್ ಕಂಪನಿಯ ದೃಷ್ಟಿ ದೋಷಗಳಿಂದ ಕೂಡಿರುವಾಗ ಭಾರತ ಎಂತಹ ಅನಿಶ್ಚಿತ ಪರಿಸ್ಥಿತಿಯನ್ನು ಎದುರಿಸ ಬೇಕಾಗುತ್ತದೆ ಎಂಬುದೇ ಇಲ್ಲಿ ಮುಖ್ಯ ಅಂಶ.

ಉದಾರೀಕರಣದ ಹೆಸರಿನಲ್ಲಿ ಸ್ವಾವಲಂಬನೆ ಮತ್ತು ದೇಶದ ಹಿತಾಸಕ್ತಿ ಇವೆರಡನ್ನೂ ಕೈ ಬಿಟ್ಟಿರುವುದರಿಂದಲೇ ಇಂತಹ ಪರಿಸ್ಥಿತಿ ಉಂಟಾಗಿದೆ. ಉದಾರೀಕರಣದ ನೀತಿಗಳಿಂದ ಭಾರತ ಉದ್ಧಾರವಾಗಲು ಸಾಧ್ಯವೇ?

'ಸಮಾಧಾನ'ಕ್ಕೆ ಸಮಾಧಾನವಾಗುವಷ್ಟು ಗ್ರಾಸ್

ಸಮಾಧಾನ್ ಎಂಬುದು ಕೇಂದ್ರ ಬಜೆಟ್ಟಿನಲ್ಲಿ ಘೋಷಿಸಿದ ಯೋಜನೆ. ಕಪ್ಪು ಹಣವಿರುವವರಿಗೆ ಅದನ್ನು ಬಿಳಿ ಮಾಡಿಕೊಳ್ಳಲು ಅವಕಾಶ ನೀಡುವ ಯೋಜನೆ ಅದು. ಕಳೆದ ಸಾಲಿನಲ್ಲಿ ವಿ.ಡಿ.ಐ.ಎಸ್. ಎಂಬ ಯೋಜನೆಯನ್ನು ಘೋಷಿಸಿ ಅತ್ಯಂತ ಯಶಸ್ವಿಯಾಗಿತ್ತು. ಭಾರತದ ತುಂಬ ಕಪ್ಪು ಹಣವುಳ್ಳವರ ಬಹುದೊಡ್ಡ ಸಂಖ್ಯೆಯೇ ಇದೆ ಎಂಬುದನ್ನು ಈ ಯಶಸ್ಸು ಸೂಚಿಸಿತ್ತು.

ಈ ವಿ.ಡಿ.ಐ.ಎಸ್.ಗೆ ಬಹಳ ಪ್ರಚಾರ ನೀಡಲಾಗಿತ್ತು ಮತ್ತು ಈ ಯೋಜನೆಯಡಿ ಕಪ್ಪು ಹಣ (ಇದ್ದು) ಘೋಷಿಸದೇ ಇರುವವರು ತೀವ್ರ ಪರಿಣಾಮ ಎದುರಿಸ ಬೇಕಾಗುತ್ತದೆ ಎಂಬ ಬೆದರಿಕೆಯನ್ನು ಬೇರೆ ಹಾಕಲಾಗಿತ್ತು.

ಸರ್ಕಾರ ಇಂತಹ ಬೆದರಿಕೆ ಹಾಕಿರು ವಾಗ ಎಲ್ಲ ಕಪ್ಪು ಹಣದ ಶ್ರೀಮಂತರು ಕಪ್ಪು ಹಣ ಘೋಷಿಸಿರ ಬೇಕಾಗಿತ್ತು. ದೇಶದಲ್ಲಿರುವ ಕಪ್ಪು ಹಣವೆಲ್ಲ ಹೊರಗೆ ಬಂದು ಬಿಳಿಯಾಗಬೇಕಾಗಿತ್ತು. ಸರ್ಕಾರಕ್ಕೆ ಅಪಾರ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗ ಬೇಕಾಗಿತ್ತು. ಆದರೆ ವಿಡಿಐಎಸ್‌ನಿಂದ ಗುರಿ ಹೊಂದಿದಷ್ಟು ತೆರಿಗೆ ಸಂಗ್ರಹವಾಗಿದ್ದು ನಿಜ.

ಆದರೆ ಈಗ ಸಮಾಧಾನವೆಂಬ ಇಂತಹದ್ದೆ ಯೋಜನೆಗೂ ಯಶಸ್ಸು ದೊರೆಯುವ ವಿಶ್ವಾಸ ಸರ್ಕಾರದ್ದು. ಕೇಂದ್ರ ತೆರಿಗೆ ಇಲಾಖೆಯ ಪ್ರಕಾರ 1998 ರ ಮಾರ್ಚ್ ಕೊನೆಯ ವೇಳೆಯಲ್ಲಿ ತೆರಿಗೆ ಬಾಕಿ ಉಳಿಸಿಕೊಂಡಿರುವವರ ಸಂಖ್ಯೆ ಬಹಳವಿದೆಯಂತೆ. ಅವರ ಪ್ರಕಾರ ಸುಮಾರು 50000 ಕೋಟಿ ರೂಪಾಯಿಗಳ ನೇರ ಮತ್ತು ಪರೋಕ್ಷ ತೆರಿಗೆ ಬಾಕಿ ಉಳಿಸಿದೆಯಂತೆ. ತೆರಿಗೆ ವಿಷಯದಲ್ಲಿ ತಕರಾರು ಪ್ರಕರಣಗಳು ಸುಮಾರು ಐದು ಲಕ್ಷಕ್ಕೂ ಹೆಚ್ಚಿಗೆ ಇದೆಯಂತೆ. ಸಮಾಧಾನದಲ್ಲಿ ಈ ಎಲ್ಲ ತಕರಾರುಗಳಿಗೆ ಸಮಾಧಾನ ನೀಡಿದರೆ ಸರ್ಕಾರದ ಈ ಯೋಜನೆ ಯಶಸ್ವಿಯಾದಂತೆ.

ತೆರಿಗೆ ತಪ್ಪಿಸಿಕೊಳ್ಳುವವರಿಗೆ ಕ್ಷಮಾದಾನ ನೀಡುವ ಯೋಜನೆಗಳನ್ನು ಆಗಾಗ ತರುತ್ತಲೇ ಇವೆ ಸರ್ಕಾರಗಳು. ಆದರೂ ತೆರಿಗೆ ತಪ್ಪಿಸಿಕೊಂಡವರ ಸಂಖ್ಯೆ ಬೆಳೆಯುತ್ತಲೇ ಇದೆ. ಅಭಿವೃದ್ಧಿ ಕಾರ್ಯಗಳಿಗೆ ಬಡವರಿಗೆ ಪರಿಹಾರ ನೀಡುವ ಬಡತನ ನೀಗಿಸುವ ಕಾರ್ಯಕ್ರಮಗಳಿಗೆ ಇದ್ಯಾವುದಕ್ಕೂ ಸರ್ಕಾರದಲ್ಲಿ ಸಂಪನ್ಮೂಲಗಳಿಲ್ಲ ಎಂದು ಸರ್ಕಾರಗಳು ಹೇಳುತ್ತಲೇ ಬಂದಿವೆ. ಬಂಡವಾಳಶಾಹಿ ಸರ್ಕಾರಗಳ ನಿಜವಾದ ಕಾಳಜಿಯ ಬಂಡವಾಳ ಇದೇ ಅಲ್ಲವೇ? ಶ್ರೀಮಂತರಿಗೆ ಸಮಾಧಾನ, ಬಡವರಿಗೆ ನೋವುದಾನ ಇದಲ್ಲವೆ ಅವರ ನ್ಯಾಯ?

ಖಾಸಗಿ ಬ್ಯಾಂಕುಗಳಿಗೆ ವಿದೇಶೀ ಒಡೆತನ

ಹಣಕಾಸು ವಲಯದ ಸುಧಾರಣೆಗಳ ಹೆಸರಿನಲ್ಲಿ ಕೇಂದ್ರ ಸರ್ಕಾರ ಬ್ಯಾಂಕಿಂಗ್ ವಲಯದಲ್ಲಿ ವಿದೇಶೀ ಪಾಲುದಾರಿಕೆಗೆ ಅವಕಾಶ ಮಾಡಿಕೊಟ್ಟಿದೆ. ಭಾರತೀಯ ಖಾಸಗಿ ಬ್ಯಾಂಕುಗಳಲ್ಲಿ ಈಗ ಶೇ 20 ರಷ್ಟು ವಿದೇಶೀ ಪಾಲುದಾರಿಕೆಗೆ ಅವಕಾಶ ಮಾಡಿಕೊಡಲಾಗಿದೆ.

ಹಿಂಬಾಗಿಲಿನ ಮೂಲಕ ಭಾರತೀಯ ಬ್ಯಾಂಕುಗಳನ್ನು ವಿದೇಶೀಯರಿಗೆ ನುಂಗಿಹಾಕಲು ಅವಕಾಶ ಮಾಡಿಕೊಡುವ ಈ ಕ್ರಮ ಭಾರತೀಯ ಬ್ಯಾಂಕುಗಳ ಬಂಡವಾಳವನ್ನು ಹೆಚ್ಚಿಸುವ ನೆಪದಲ್ಲಿ ಬಂದಿದೆ.

ದೇಶದ ಆಯಕಟ್ಟಿನ ಉದ್ಯಮಗಳಲ್ಲಿ ಒಂದೊಂದನ್ನೇ ವಿದೇಶಿಯರಿಗೆ ತೆರೆವ ತಂತ್ರದ ಒಂದು ಭಾಗ ಈ ಕ್ರಮ.

ಔದ್ಯಮಿಕ ಬೆಳವಣಿಗೆಯ ಮರೀಚಿಕೆ

ಕೇಂದ್ರ ಹಣಕಾಸು ಮಂತ್ರಿ ಯಶವಂತಸಿನ್ಹಾ ಬಹಳ ಆಶಾವಾದಿಯಂತೆ ಆರ್ಥಿಕ ಸುಧಾರಿಸುತ್ತಿದೆ, ಔದ್ಯಮಿಕ ಬೆಳವಣಿಗೆ ಚೇತರಿಸಿಕೊಳ್ಳುತ್ತಿದೆ ಎಂದೆಲ್ಲ ಹೇಳುತ್ತಲೇ ಇದ್ದಾರೆ. ಆದರೆ ಭಾರತದ ಆರ್ಥಿಕ ಯಾವ ದಾರಿ ಹಿಡಿದಿದೆ ಎಂಬುದು ಭಾರತದ ಜನಸಾಮಾನ್ಯರಿಗೆ ಮತ್ತು ವಿದೇಶಿಯರಿಗೂ ಗೊತ್ತು.

ಈಗ ಎನ್.ಸಿ.ಎ.ಇ.ಆರ್ ಎಂಬ ಆರ್ಥಿಕ ಸಂಶೋಧನಾ ಸಂಸ್ಥೆ ಈ ಸಾಲಿನ ಎರಡನೇ ಕಾಲುಭಾಗದಲ್ಲೂ ಔದ್ಯಮಿಕ ಬೆಳವಣಿಗೆಯ ದರ ಸುಧಾರಿಸುವ ಲಕ್ಷಣಗಳಿಲ್ಲ ಎಂದು ಹೇಳಿದೆ. ಭಾರತದ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ಹೇರಿರು ವುದರಿಂದ ಸುಧಾರಣೆಯ ಸಾಧ್ಯತೆ ಇನ್ನೂ ಕಡಿಮೆಯಾಗಿದೆ ಎಂದು ಅದು ಹೇಳಿದೆ.

ಹೆಚ್ಚಿನ ಬಡ್ಡಿದರ ಮತ್ತು ರೂಪಾಯಿಯ ದರದಲ್ಲಿ ತೀವ್ರ ಕುಸಿತ ಇವೆರಡು ಔದ್ಯಮಿಕ ಬೆಳವಣಿಗೆಯನ್ನು ತಡೆ ಹಿಡಿಯುತ್ತವೆ ಎಂಬುದು ಅದರ ಅಭಿಪ್ರಾಯ. ಇದಲ್ಲದೆ ಆಮದು ಹೆಚ್ಚಿನ ದರದಲ್ಲೇ ಮುಂದುವರಿಯಲಿರುವುದ ರಿಂದಲೂ ಸಮಸ್ಯೆಗಳುಂಟಾಗುತ್ತವೆ ಎಂದಿದೆ ಅದು. ಸರ್ಕಾರ ದೊಡ್ಡ ಪ್ರಮಾಣದಲ್ಲಿ ಸಾಲಗಳನ್ನು ಎತ್ತುತ್ತಿರುವುದರಿಂದ ಹಣಕಾಸು ಸಂಪನ್ಮೂಲಗಳ ಮೇಲೂ ಒತ್ತಡ ಹೆಚ್ಚಿ ಬಡ್ಡಿ ದರಗಳು ಇನ್ನೂ ಹೆಚ್ಚಲಿವೆ ಎಂದು ಅದು ಹೇಳಿದೆ.

ಅದರ ಇತ್ತೀಚಿನ ಸಮೀಕ್ಷೆಯಲ್ಲಿ 526 ಕಂಪನಿಗಳನ್ನು ಸಮೀಕ್ಷಿಸಲಾಗಿದ್ದು ಅದರ ಪ್ರಕಾರ ವ್ಯವಹಾರ ವಿಶ್ವಾಸ ಸೂಚ್ಯಂಕ ಹಿಂದೆಂದಿಗಿಂತ ಇಂದು ಕೆಳಗಿಳಿದಿದೆಯಂತೆ.

ಗಿರಗಿಟ್ಟೆಯಾದ ರೂಪಾಯಿ

ಕಳೆದವಾರ ರೂಪಾಯಿ ಗಿರಗಿಟ್ಟೆಯಾಗಿ ಆಕಾಶದಿಂದ ಪಾತಾಳಕ್ಕೆ ಕುಸಿದಿದೆ. ಕಳೆದ ಬುಧವಾರ ರೂಪಾಯಿಯ ಬೆಲೆ ಡಾಲರೊಂದಕ್ಕೆ 43.35 ಕ್ಕೆ ಕುಸಿಯಿತು. ಇದು ರೂಪಾಯಿ ಕಂಡಿರುವ ಅತ್ಯಂತ ಕಡಿಮೆ ಬೆಲೆ. ರೂಪಾಯಿ ಪಾತಾಳ ಮುಖಿಯಾದ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಭಾರತೀಯ ಸ್ಟೇಟ್ ಬ್ಯಾಂಕ್ ರೂಪಾಯಿಯ ಬೆಲೆಯನ್ನು ಇನ್ನು ಕುಸಿಯದಂತೆ ತಡೆ ಹಿಡಿಯುವ ಸರ್ಕಸ್ಸನ್ನು ಶುರುಮಾಡಿದವು.

ಹಲವು ಕಂಪನಿಗಳು ಡಾಲರುಗಳನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸತೊಡಗಿದ್ದರಿಂದ ಈ ಕುಸಿತ ಉಂಟಾಯಿತು ಎಂದು ಹೇಳಲಾಗುತ್ತಿದೆ. ಕಂಪನಿಗಳಿಗೆ ಬರುವ ನೆಗಡಿ ಕೆಮ್ಮಿಗೂ ಈಗ ರೂಪಾಯಿ ಮತ್ತು ಆ ಮೂಲಕ ದೇಶದ ಆರ್ಥಿಕ ತಲ್ಲಣಿಸುವಂತಾಗಿದೆ.

ಹೇಗಿದೆ ಉದಾರೀಕರಣದ ಪರಿಣಾಮಗಳು?

ಶೇರು ಹಗರಣದವರಿಗೆ ಶಿಕ್ಷೆ

1992 ರ ಶೇರು ಹಗರಣದ ವಿಚಾರಣೆ ಮುಗಿಯುತ್ತಾ ಬಂದಿದ್ದು ಈಗ ಆರೋಪಿಗಳಿಗೆ ಶಿಕ್ಷೆಯ ತೀರ್ಪುಗಳು ಬರತೊಡಗಿವೆ. ಮುಂಬೈಯಲ್ಲಿ ಶೇರು ಹಗರಣದ ವಿಚಾರಣೆಗೆ ನ್ಯಾಯಾದೀಶ ಎಸ್.ಎನ್. ವರಿಯಾವ ಅವರ ನೇತೃತ್ವದಲ್ಲಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿ ಅದಕ್ಕೆ ಎಲ್ಲಾ ಶೇರು ಹಗರಣದ ಪ್ರಕರಣಗಳನ್ನು ಒಪ್ಪಿಸಲಾಗಿತ್ತು.

ಶೇರು ಹಗರಣದ ಒಬ್ಬ ಪ್ರಮುಖ ಆರೋಪಿ ದಲ್ಲಾಳಿ ಹಿತೇನ್‌ದಲಾಲ್ ಈ ಪ್ರಕರಣದಲ್ಲಿ ತಪ್ಪಿತಸ್ಥರೆಂದು ನ್ಯಾಯಾಧೀಶರು ತೀರ್ಪು ನೀಡಿದ್ದಾರೆ. ಕೆನಾರಾ ಬ್ಯಾಂಕ್ ಫೈನಾನ್ಸಿಯಲ್ ಸರ್ವಿಸಸ್ ಅಧಿಕಾರಿ ಎಸ್. ಮೋಹನ್ ಅವರನ್ನು ತಪ್ಪಿತಸ್ಥರೆಂದು ತೀರ್ಪು ಹೇಳಿದೆ.

ಇವರಿಬ್ಬರೂ ಸೇರಿ ಕ್ಯಾನ್ ಫಿನಾದ ಹಣವನ್ನು - ಮುವತ್ತೂರು ಕೋಟಿ ರೂಪಾಯಿಗಳು-ದುರುಪಯೋಗ ಪಡಿಸಿಕೊಂಡಿದ್ದರು. ಈ ಪ್ರಕರಣ ಕ್ರಿಮಿನಲ್ ಪ್ರಕರಣವೆಂದು ನ್ಯಾಯಾಲಯದಲ್ಲಿ ದಾಖಲೆಯಾಗಿತ್ತು.

ಇಬ್ಬರಿಗೂ ಯಾವ ಪ್ರಮಾಣದ ಶಿಕ್ಷೆ ನೀಡಬೇಕೆಂದು ಇನ್ನೂ ತೀರ್ಮಾನ ಆಗಬೇಕಾಗಿದ್ದು ಈ ತಿಂಗಳ ಕೊನೆಗೆ ಈ ಬಗೆಗಿನ ತೀರ್ಪು ಬರಲಿದೆಯಂತೆ.

ಅಂತೂ ಶೇರು ಹಗರಣದ ಆರೋಪಿಗಳಿಗೆ ತಡವಾಗಿಯಾದರೂ ಶಿಕ್ಷೆ ದೊರೆಯುತ್ತಿದೆ.

ಕರ್ನಾಟಕದಲ್ಲಿ ಕಳೆದವಾರ

ಆಗಸ್ಟ್-14

- ಪೌರಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷರ ಮಿಸಲಾತಿ ನಿಗದಿ
- 89 ತಾಲೂಕುಗಳಲ್ಲಿ ಹೆಚ್ಚು ಮಳೆ
- ಅಲ್ಪಾಸಂಖ್ಯಾತ ಮತ್ತು ದುರ್ಬಲ ವರ್ಗದವರ ಕುಂದು ಕೊರತೆ ವಿಚಾರಣೆ ಪೊಲೀಸ್ ಸಮೀಷನರ ಸಂಚಾರಿ ಕಾರ್ಯಾಲಯ ಆರಂಭ.

ಆಗಸ್ಟ್-15

- ರಾಜ್ಯದಾದ್ಯಂತ 51 ನೇ ಸ್ವಾತಂತ್ರ್ಯ ದಿನ್ನಾಚರಣೆ.
- ಬಾಗೂರು-ನವಿಲೆ ಸಂತ್ರಸ್ತ ಗ್ರಾಮಗಳಲ್ಲಿ ಸ್ವಾತಂತ್ರ್ಯೋತ್ಸವ ಬಹಿಷ್ಕಾರ
- 137 ಖೈದಿಗಳ ಬಿಡುಗಡೆಗೆ ತಾಂತ್ರಿಕ ತೊಡಕು.
- ಕಾವೇರಿ ಪ್ರಾಧಿಕಾರ ರಚನೆಯಿಂದ ರಾಜ್ಯದ ಹಿತಕ್ಕೆ ಧಕ್ಕೆ ಇಲ್ಲ ಎಂದು ಮುಖ್ಯಮಂತ್ರಿ.

ಆಗಸ್ಟ್-16

- ಕೋಲಾರದಲ್ಲಿ ಭಾರೀ ಮಳೆ -12 ಮನೆ ನೆಲಸಮ,ಜನಜೀವನ ಅಸ್ತವ್ಯಸ್ತ.
- ಸುವರ್ಣ ಸ್ವಾತಂತ್ರ್ಯೋತ್ಸವ ಜಾಥಾ ಅಂತ್ಯ.
- ಕಾಲೇಜು ಅಧ್ಯಾಪಕರ ಮುಷ್ಕರ ಮತ್ತಷ್ಟು ತೀವ್ರ.

ಆಗಸ್ಟ್-17

- ರಾಮದುರ್ಗದ ಹುಲಗುಂದದಲ್ಲಿ ರಥೋತ್ಸವ ಕಾಲಕ್ಕೆ ಘರ್ಷಣೆ. ಲಾಠಿ ಪ್ರಹಾರ. ಗಾಳಿಯಲ್ಲಿ ಗುಂಡು. ಕಲ್ಲುತೂರಾಟದಿಂದ ಮೂವರ ಸಾವು.
- ವೈದ್ಯಕೀಯ ಕಾಲೇಜು ಉಪನ್ಯಾಸಕರಿಗೆ ಯುಜಿಸಿ ವೇತನ ಶ್ರೇಣಿ.
- ಕೋಲಾರ ನಿಲ್ಲದ ಮಳೆ ಅರ್ಭಟ, 30 ಮನೆಗಳಿಗೆ ಹಾನಿ, ದೂರವಾಣಿ ಅಸ್ತವ್ಯಸ್ತ.

ಆಗಸ್ಟ್-18

- ರಾಜ್ಯದಲ್ಲಿ ಆರು ಹೊಸ ರೈಲುಗಳ ಸಂಚಾರ ಆರಂಭ
- ಉತ್ತರ ಪ್ರದೇಶದ ಭೂಕುಸಿತ ಪ್ರವಾಹದಿಂದ ಪ್ರತಿಮಾಬೇಡಿ ಸಹಿತ ರಾಜ್ಯದ ಆರು ಜನರ ಸಾವು.
- ಹುನಗುಂದ ಗಲಭೆ- ಸತ್ತವರ ಸಂಖ್ಯೆ ಆರಕ್ಕೆ.

ಆಗಸ್ಟ್-19

- ತಿಪ್ಪೆಸ್ವಾಮಿಗೆ ವೆಂಕಟಪ್ಪ, ಪುಟ್ಟರಾಜ ಗವಾಯಿಗೆ ಕನಕ-ಪುರಂದರ [illegible] ಹಿರಣ್ಣಯ್ಯಗೆ ಗುಬ್ಬಿವೀರಣ್ಣ ಪ್ರಶಸ್ತಿ, ಫಕೀರಪ್ಪ ಜನಪದ ಶ್ರೀ, ಚೋಕ್ಕಮಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ.
- ಶಾಸಕ ಗುತ್ತೇದಾರ ಸೇರಿ 9 ಆರೋಪಿಗಳು ನ್ಯಾಯಾಲಯಕ್ಕೆ ಹಾಜರು.
- 5 ನೇ ವರ್ಗದಿಂದ ಅಂಗ್ಲ ಮಾಧ್ಯಮ ಆದೇಶ ರದ್ದು

ಆಗಸ್ಟ್-20

- ನೀರಾವರಿ ಕಾಮಗಾರಿಗಳಿಗೆ ತಟ್ಟಿದ ರಾಜ್ಯ ಇಂಜನೀಯರ್‌ಗಳ ಲೇಖನಿ ಸ್ಥಗಿತ ಮುಷ್ಕರದ ಬಿಸಿ.
- ಆಹಾರ ನಿಗಮಕ್ಕೆ ಶಾಸಕ ಕೃಷ್ಣ ಮೂರ್ತಿ ರಾಜಿನಾಮೆ
- ಹಂಪಿ, ಜೋಗ್‌ಫಾಲ್ಸ್ ಅಬಿವೃದ್ಧಿ ಯೋಜನೆಗೆ 4.33 ಕೋಟಿರೂ ಬಿಡುಗಡೆ.

ಪಂಚಾಯತ್ ನೌಕರರ ಜಿಲ್ಲಾ ಸಮ್ಮೇಳನ

ಬೀದರ್ ಜಿಲ್ಲಾ ಪಂಚಾಯತ್ ನಾಕರರ ಸಮ್ಮೇಳನವು ಆಗಸ್ಟ್ 10 ರಂದು ಬೀದರ್‌ನಲ್ಲಿ ಯಶಸ್ವಿಯಾಗಿ ನೇರವೇರಿತು.

ಸಂಘದ ಪ್ರಧಾನ ಕಾರ್ಯದರ್ಶಿ ವಿ.ಪಿ. ಕುಲಕರ್ಣಿ ಮಾತನಾಡಿ ಕೂಲಿಯಂತೆ ದುಡಿಯುವ ಪಂಚಾಯತ್ ನೌಕರರು ಕಳೆದ 12 ವರ್ಷಗಳಿಂದ ಕನಿಷ್ಟ ಸೌಲಭ್ಯಕ್ಕಾಗಿ ಹೋರಾಡುತ್ತಾ 500 ರಿಂದ 900 ರವರೆಗೆ ಸಂಬಳ ಹೆಚ್ಚಿಸಿ ಕೊಂಡ ಬಗ್ಗೆ ವಿವರಿಸಿದರು.

ಅರೆಕಾಲಿಕ, ಪೂರ್ಣಕಾಲಿಕವೆಂದು ಸರ್ಕಾರ ನೌಕರರ ಮಧ್ಯೆ ಒಡಕು ತರುವ ಪ್ರಯತ್ನವನ್ನು ಖಂಡಿಸಿದರು. ಶಾಸಕರು, ಎಂ.ಪಿಗಳ ಭತ್ಯೆಗಳನ್ನು ಅವರೇ ಚರ್ಚಿಸಿ ಹೆಚ್ಚಿಸಿಕೊಳ್ಳುವಾಗ ಪಂಚಾಯತ್ ನೌಕರರಿಗೆ ಕನಿಷ್ಟ ವೇತನ ಕೊಡಲು ಸಂಪನ್ಮೂಲ ಕೊರತೆ ಹೇಳುವುದು ಒಣಗೇಡಿತನವೆಂದರು.

ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ದೇಶಾದ್ಯಂತ ಅಂಚೆ, ಎಲ್.ಪಿ.ಸಿ, ಅಂಗನವಾಡಿ ನೌಕರರು ಖಾಸಗೀಕರಣದ ವಿರುದ್ಧ ಹೋರಾಟ ನಡೆಸುತ್ತಿರುವಾಗ ದೇಶಿಯ ಮಾರುತಿ ಉದ್ಯೋಗ ಕಂಪನಿಯನ್ನು ವಿದೇಶಿಯರಿಗೆ ಮಾರಿಕೊಂಡ ಸ್ವದೇಶಿ ಪ್ರೇಮದ ಕೇಂದ್ರ ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಿದರು.

ಸಮ್ಮೇಳನದ ಉದ್ಘಾಟನೆಯನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿ ಡಾ|| ನಾಗಲಾಂಬಿಕ ಮಾಡಿದರೆ ಮುಖ್ಯ ಅತಿಥಿಗಳಾಗಿ ಅಚ್ಯುತ ರಾವ್ ಜಮಕೋಡೆಯವರು ಮಾತನಾಡಿದರು. ವಿವಿಧ ಸಂಘಟನೆಗಳ ಮುಖಂಡರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.



ನೂತನ ಜಿಲ್ಲಾ ಪದಾಧಿಕಾರಿಗಳು

ಅಧ್ಯಕ್ಷರು- ಗುರುಶಾಂತ ಬಿರಾದಾರ
ಗೌರವಾಧ್ಯಕ್ಷರು-ಪ್ರಭುಸಂತೋಷ
ಉಪಾಧ್ಯಕ್ಷರುಗಳು ಗೌರಿ.ಬಿ.ಬಾಬುರಾವ ಸಂಗಮಕರ, ಮಡಿವಾಳಪ್ಪ ಕಾರಬಾರಿ
ಪ್ರಧಾನ ಕಾರ್ಯದರ್ಶಿ: ಸಂಗ್ರಾಮ್‌ಜೋಸ್ಲೆ
ಜಂಟಿಕಾರ್ಯದರ್ಶಿಗಳು : ವಿಜಯಕುಮಾರ ಬಿರಾದಾರ, ಬಂಡೇಪ್ಪಾ ಕಾವಿಳಶೆಟ್ಟಿ, ವೀರಣ್ಣ ಜಮಾದಾರ, ಮಲ್ಲಿಕಾರ್ಜುನ ಪಾಟೀಲ ಶಿವಪುತ್ರ ವಿರಶೆಟ್ಟಿ
ಖಜಾಂಚಿ ಅಮೃತ ಮರಕಲೆಕರ ಜತೆ 13 ಸದಸ್ಯರ ಕಾರ್ಯಕಾರಿ ಸಮಿತಿ ಅವಿರೋಧವಾಗಿ ಆಯ್ಕೆಗೊಂಡಿತು.

ಯಶಸ್ವಿಯಾದ ಅಕ್ರಮ ಸಾಗುವಳಿ ರೈತರ ಧರಣಿ

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲೂಕಿನ ರೈತ ಕೃಷಿಕೂಲಿಕಾರರು 1978 ರಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಅರಣ್ಯ ಇಲಾಖೆ ವಶಪಡಿಸಿಕೊಳ್ಳುವುದರ ವಿರುದ್ಧ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಜುಲೈ 21 ರಿಂದ ನೂರಾರು ರೈತರು ಸರದಿ ಉಪವಾಸ ಧರಣಿ ನಡೆಸಿದರು.

ಧರಣಿ ಸತ್ಯಾಗ್ರಹಗಳ ಬಳಿ ಬಂದ ಅರಣ್ಯ ಅಧಿಕಾರಿಗಳು ಹಾಗೂ ಘಟಪ್ರಭಾ ಉಪ ಅರಣ್ಯ ಸಂರಕ್ಷಣೆಯ ಅಧಿಕಾರಿಗಳು ಇನ್ನು ಮುಂದೆ ಸಾಗುವಳಿ ಭೂಮಿಯಲ್ಲಿ ಸಸಿನೆಡುವ ಕಾರ್ಯ ಕೈ ಬಿಡುತ್ತೇವೆ. ಅಕ್ರಮ ಸಾಗುವಳಿ ಮಾಡುತ್ತಿರುವ ರೈತರು ಅರ್ಜಿ ಹಾಕಿದರೆ ಭೂಮಿ ಬಿಡಲು ಯೋಚಿಸುತ್ತೇವೆಂದು ಭರವಸೆ ನೀಡಿದ್ದಾರೆ.

ಜುಲೈ 21 ರಿಂದ 31 ರ ವರೆಗೆ ನಡೆದ ಧರಣಿ ಸತ್ಯಾಗ್ರಹದಲ್ಲಿ ಎಲ್.ಎಸ್. ನಾಯ್ಕ, ಕಪ್ಪಣ್ಣವರ, ಜಿ.ಬಿ ತೋರಗಲ್ಲ, ಶ್ರೀಕಾಂತ ಹಟ್ಟಿ ಹೋಬಳಿ ಮಾತನಾಡಿದರು.

ಮುನವಳ್ಳಿ ರೈತರಾದ ವಿರುಪಾಕ್ಷ ದ್ಯಾಮಪ್ಪ ಗೋಳ, ವಿಠಲ ರಾಯಪ್ಪ ಹರಿಜನ, ಶಿವರಾಯಪ್ಪ ಪಂಚೆಪ್ಪ ಹನುಮಂತ ದಿಡ್ಡಿಮನಿ, ಪಂಚಪ್ಪ ಹಳ್ಳೂಗ, ಗಂಗಪ್ಪ ದಂಡಿನಿ ಮುಂತಾದ ಪ್ರಮುಖರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಅಧ್ಯಯನ ಶಿಬಿರ

ಉಡುಪಿ ತಾಲೂಕು ಸಿಪಿಐ(ಎಂ) ಆಯ್ದ ಕಾರ್ಯಕರ್ತರ ಅಧ್ಯಯನ ಶಿಬಿರವು ಆಗಸ್ಟ್ 1 ಮತ್ತು 2 ರಂದು ಯಶಸ್ವಿಯಾಗಿ ನಡೆಯಿತು.

ರಾಷ್ಟ್ರದ ಪ್ರಸ್ತುತ್ತ ರಾಜಕೀಯ ಪರಿಸ್ಥಿತಿ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಅಪಾಯಗಳು, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಕಮ್ಯುನಿಸ್ಟ್ ಪ್ರಣಾಳಿಕೆ ಕಾರ್ಯಕ್ರಮ ಕುರಿತು ರಾಜ್ಯ ಮುಖಂಡರಾದ ಸಿ.ನಂಜುಂಡಪ್ಪ, ಬಿ.ಮಾಧವ ಮತ್ತು ಕೆ.ಆರ್. ಶ್ರೀಯಾನ್ ಉಪನ್ಯಾಸ ನೀಡಿದರು. ಕೊನೆಯಲ್ಲಿ ಪಿ.ವಿಶ್ವನಾಥ ರೈ ಮಾತನಾಡಿ ಶಿಬಿರದಲ್ಲಿ ಭಾಗವಹಿಸಿ ಕಾರ್ಯಕರ್ತರು ಸಕ್ರಿಯವಾಗಿ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಂಡು ತಾಲೂಕಿನಲ್ಲಿ ಪಕ್ಷ ಬಲಪಡಿಸುವಂತೆ ಕರೆ ನೀಡಿದರು.

ಡಿ.ವೈ.ಎಫ್.ಐ. ಸದಸ್ಯತ್ವ ಆಂದೋಲನ

ಮಂಗಳೂರು: ಭಾರತ ಪ್ರಜಾಸತ್ತಾತ್ಮಕ ಯುವಜನ ಪೇಡರೇಷನ್ ಬಜಾಲ್ ಘಟಕವು ಇತ್ತಿಚೆಗೆ ಬಜಾಲ್ ಕಂಕನಾಡಿ ಗ್ರಾಮಗಳಲ್ಲಿ ಒಂದೆ ದಿನದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಸದಸ್ಯರನ್ನು ನೊಂದಾಯಿಸಿ ಕರ್ನಾಟಕ ರಾಜ್ಯದಲ್ಲೆ ಹೆಗ್ಗಳಿಕೆಗೆ ಪಾತ್ರವಾಗಿದೆ.

ಸದಸ್ಯತ್ವ ಆಂದೋಲನಕ್ಕೆ ಸಹಕರಿಸಿದ ಗ್ರಾಮಸ್ಥರಿಗೆ ಅಭಿನಂದನೆ ಸಲ್ಲಿಸಿರುವ ಮುಖಂಡರು ಹತ್ತಾರು ವರ್ಷಗಳಿಂದ ಬಜಾಲ್ ಘಟಕವು ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿರುವುದೆ ಆಂದೋಲನ ಯಶಸ್ವಿಯಾಗಲು ಕಾರಣ ಎಂದಿದ್ದಾರೆ.

ಎಸ್.ಎಫ್.ಐ ಉ.ಕ. ಅಧ್ಯಯನ ಶಿಬಿರ

ಈ ದೇಶವನ್ನು ಒಂದಾಗಿಡಲು ಧರ್ಮ, ಜಾತಿ, ಭಾಷೆಯ ಉನ್ಮಾದದಿಂದ ಸಾಧ್ಯವಿಲ್ಲ. ವೈಜ್ಞಾನಿಕ ಚಿಂತನೆ ಮೂಲಕ ನಾವು ದೇಶವನ್ನು ನೋಡುವಂತಾಗಬೇಕು. ಒಂದೇ ಸಂಸತಿ ಒಂದೇ ಜನಾಂಗ ಒಂದೇ ಧರ್ಮ ಇವುಗಳಿಂದ ಎಂದೂ ಒಂದು ರಾಷ್ಟ್ರವಾಗದು. ಬಹುಸಂಸತಿಯನ್ನು ಹೊಂದಿದ್ದು ಭಾರತ ಎಂದು ಜಿಲ್ಲಾ [illegible] ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಲ್.ಕೆ. ಅತೀಕ್ ನುಡಿದರು. ಅಂಕೋಲದಲ್ಲಿ ಅವರು ಭಾರತ ವಿದ್ಯಾರ್ಥಿ ಫೆಡರೇಶನ್ (SFI) ನ ಉ.ಕ. ಜಿಲ್ಲಾ ಮಟ್ಟದ ಅಧ್ಯಯನ ಶಿಬಿರದ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಯುವಕರು ತಾತ್ಕಾಲಿಕ ಭಾವನಾತ್ಮಕ ವಿಷಯಕ್ಕೆ ಬಲಿಯಾಗದೇ ದೇಶದ ಐಕ್ಯತೆಯನ್ನು ಕಾಪಾಡಿಕೊಂಡು ಹೋಗಲು. ಪ್ರಗತಿಪರ ಮನೋಭಾವ ಬೆಳೆಸಿಕೊಳ್ಳಲು ಕರೆ ನೀಡಿದರು

ಉದ್ಘಾಟಕರಾಗಿ ಆಗಮಿಸಿದ ಡಿ.ವೈ.ಎಫ್.ಐನ ರಾಜ್ಯಾಧ್ಯಕ್ಷ ಶಾಂತಾರಾಮ ನಾಯಕ ಮಾತನಾಡಿ ಪ್ರಜಾಪ್ರಭುತ್ವ ರಕ್ಷಣೆ ಇವತ್ತಿನ ವಿದ್ಯಾರ್ಥಿ ಯುವಜನರ ಹೊಣೆಯಾಗಿದೆ. ದೇಶದ ಐಕ್ಯತೆ ಸಮಗ್ರತೆಗೆ ಧಕ್ಕೆ ತರುವ ಶಿಕ್ಷಣ ನೀತಿಯಲ್ಲಿ ಕೋಮುವಾದಿ ವಿಚಾರ ತುಂಬುವ ಪ್ರಯತ್ನ ನಡೆಯುತ್ತಿದೆ. ಪ್ರಗತಿಪರ ಜನತೆ ಎಚ್ಚೆತ್ತು ಈ ನೀತಿಗಳ ವಿರುದ್ಧ ಪ್ರತಿಭಟನೆಗೆ ಮುಂದಾಗಬೇಕೆಂದು ಕರೆ ನೀಡಿದರು.

ಹಿರಿಯ ಪತ್ರಕರ್ತರಾದ ಅಮ್ಮೆಂಬಳ ಆನಂದ ದೇಶದ ಒಗ್ಗಟ್ಟಿಗೆ ಧರ್ಮವೇ ಕಾರಣವಲ್ಲವೆಂಬುದನ್ನು ಭಾರತ ಪಾಕಿಸ್ಥಾನ ಇಬ್ಭಾಗದ ಕಾರಣಗಳನ್ನು ತಿಳಿಸಿದರು. ಎಸ್.ಎಫ್.ಐ ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್ ಮಾತನಾಡುತ್ತ ನಾವು ಅಣುಬಾಂಬ್ ಮೂಲಕ ಯಾರನ್ನೂ [illegible] ಗೆಲ್ಲಲು ಆಗದು, ನಮಗೆ ಶಿಕ್ಷಣ, ಉದ್ಯೋಗ ಬೇಕು, ನಮ್ಮನ್ನು ಕಿತ್ತು ತಿನ್ನುವ ಸಾವಿರ ಸಮಸ್ಯೆಗಳಿಗೆ ಎತ್ತರ ಬೇಕು ಎನ್ನುತ್ತ 1945 ರ ಆಗಸ್ಟ್ 6,9 ಪ್ರಪಂಚದ ಘೋರ ದಿನಗಳು ಮತ್ತೆ ಮರುಕಳಿಸದಿರಲಿ ಎಂದರು.

ಯುವರಾಜ್ ಕಂಬಾಳಿಮಠ ಉಪಸ್ಥಿತರಿದ್ದರು. ಅಂಕೋಲ ತಾಲೂಕ ಸಮಿತಿ ಅಧ್ಯಕ್ಷ ಜಯಪ್ರಕಾಶ್ ಸ್ವಾಗತಿಸಿದರು. ನಾಗರಾಜ ಶೆಟ್ಟಿ ವಂದಿಸಿದರು ಕೆ. ರಮೇಶ್ ಕಾರ್ಯಕ್ರಮ ನಿರ್ವಹಿಸಿದರು.

2 ದಿನಗಳ ಅಧ್ಯಯನ ಶಿಬಿರದಲ್ಲಿ 1 ಶೈಕ್ಷಣಿಕ ಸ್ಥಿತಿಗತಿಯ ಬಗ್ಗೆ. ಕೆ. ಎನ್. ಉಮೇಶ್, ರಾಜಕೀಯ ಆರ್ಥಿಕ ಪರಿಸ್ಥಿತಿಯ ಬಗ್ಗೆ, ಸಿ.ಆರ್ ಶ್ಯಾನಭಾಗ್ ಅಭಿವೃದ್ಧಿ ಮತ್ತು ಪರಿಸರದ ಬಗ್ಗೆ ವಿಠ್ಠಲಭಂಡಾರಿ ವಿಷಯ ಮಂಡನೆ ಮತ್ತು ವಿದ್ಯಾರ್ಥಿಗಳಿಂದ ಚರ್ಚೆನಡೆಯಿತು.

ಸೆ. 2-5 ಅಂಗನವಾಡಿ ನೌಕರರ ಅಧ್ಯಯನ ಶಿಬಿರ

ಅಂಗನವಾಡಿ ನೌಕರರ ಸಂಘದ ರಾಜ್ಯ ಮಟ್ಟದ ಅಧ್ಯಯನ ಶಿಬಿರವು ಸೆಪ್ಟೆಂಬರ್ 2 ರಿಂದ 5 ರ ವರೆಗೆ ತುಮಕೂರು ಜಿಲ್ಲೆಯ ತುರುವೇಕೆರೆಯ ರೇಷ್ಮೆ ಇಲಾಖೆ ಆವರಣದಲ್ಲಿ ನಡೆಯಲಿದೆ.

ಅಧ್ಯಯನ ಶಿಬಿರಕ್ಕೆ ಹಾಜರಾಗುವ ಪ್ರತಿನಿಧಿಗಳು 2 ನೇ ತಾರೀಖಿನಂದು ಬೆಳಿಗ್ಗೆ 11 ಘಂಟೆಯ ಒಳಗಾಗಿ ತುರುವೇಕೆರೆಗೆ ಸೇರಬೇಕೆಂದು ಸಂಘದ ಪ್ರಕಟಣೆ ತಿಳಿಸಿದೆ.

ಮಾರ್ಗ: ತುಮಕೂರಿನಿಂದ ನೇರ ತುರುವೇಕೆರೆ ಅಥವಾ ತುಮಕೂರು ತಿಪಟೂರು ಮಾರ್ಗದ ಕೆ.ಬಿ. ಕ್ರಾಸ್ ನಲ್ಲಿಳಿದು ಟೆಂಪೊಗಳ ಮೂಲಕ ತುರುವೇಕೆರೆ ಸೇರುವುದು.

ಪ್ರೌಢಶಾಲೆ ವಿದ್ಯಾರ್ಥಿಗಳಿಂದ ಯಶಸ್ವಿ ರಸ್ತೆ ತಡೆ

ಗುಲ್ಬರ್ಗ: ಜಿಲ್ಲೆಯ ಅಪಜಪೂರ ತಾಲೂಕಿನ ಗೊಬ್ಬುರ (ಕೆ)ಗ್ರಾಮದಲ್ಲಿ ಪ್ರೌಢಶಾಲೆ ವಿದ್ಯಾರ್ಥಿಗಳು, ಗುಲ್ಬರ್ಗ ವಿಭಾಗದ ಕೆ.ಎಸ್.ಆರ್.ಟಿ.ಸಿ ವೇಗದೂತ ಬಸ್ಸುಗಳು ನಿಲುಗಡೆ ಮಾಡುವಂತೆ ಒತ್ತಾಯಿಸಿ ಆಗಸ್ಟ್ 11 ರಂದು ಎಸ್.ಎಫ್.ಐ ನೇತೃತ್ವದಲ್ಲಿ 7 ಘಂಟೆಗಳ ಕಾಲ ರಸ್ತೆ ತಡೆಮಾಡಿ ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ಗ್ರಾಮದಲ್ಲಿ ನಂತರ ನಡೆದ ಸಮಾರಂಭದಲ್ಲಿ ಊರಿನ ಮುಖಂಡರನ್ನೊಳಗೊಂಡು ನೂರಾರು ಸಾರ್ವಜನಿಕರು ತಮ್ಮ ಊರಿನಲ್ಲಿ ಬಸ್ ನಿಲ್ಲುವಂತೆ ಮಾಡಿ ಶಾಲಾ ವಿದ್ಯಾರ್ಥಿಗಳ ಜೊತೆಗೆ ಗ್ರಾಮಸ್ಥರಿಗೂ ಅನುಕೂಲ ವಾಗುವಂತೆ ಯಶಸ್ವಿ ಹೋರಾಟ ನಡೆಸಿದ ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಈ ಸಮಾರಂಭದಲ್ಲಿ ಸಾಹೇಬ ಗೌಡ ಪಾಟೀಲ, ಎಸ್.ಎಫ್.ಐ.ನ ಜೈಲಾಲ್ ತೋಟದ ಮನಿ, ಜೆ.ಎಂ.ಎಸ್.ನ ಗಂಗಮ್ಮ ಬಿರಾದಾರ, ಅಂಬ್ರುತರಾವ ಬೀರಾದಾರ, ರಂಗಯ್ಯ ಗುತ್ತೇದಾರ, ಶರಣ ಬಸಪ್ಪ ಪಾಸ್ಕಿ, ಚಾಂದ ಸಾಬ್ ಶೆಕ್, ಮೂರ್ತಿ ಹೊಸಮನಿ ಇನ್ನೂ ಅನೇಕ ಮುಖಂಡರು ಮಾತನಾಡಿ ಎಸ್.ಎಫ್.ಐ ಸಂಘಟನೆ ಹಾಗೂವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ಆಟೋ ಚಾಲಕರಿಂದ ಸ್ವಾತಂತ್ರ್ಯ ದಿನಾಚರಣೆ

ಬೆಂಗಳೂರಿನ ಆಟೋರಿಕ್ಷಾ ಚಾಲಕರ ಸಂಘ (CITU)ದ ಗಾರಭಾವಿ ಪಾಳ್ಯ ಶಾಖೆಯು 51 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿತು. ನಗರ ಸಭೆ ಸದಸ್ಯೆ ಲಕ್ಷ್ಮಿದೇವಿ ಧ್ವಜಾರೋಹಣ ಮಾಡಿದರು.

ಎಸ್.ಎಫ್.ಐ.ನ ರಾಮಕೃಷ್ಣ ಮಾತನಾಡಿದರೆ ಸಿಪಿಐ(ಎಂ) ನ ಜಿಲ್ಲಾ ಮುಖಂಡರಾದ ಶಾಮಣ್ಣ ರೆಡ್ಡಿ, ಊರಿನ ಪ್ರಮುಖರಾದ ಕೃಷ್ಣಪ್ಪ, ಗೋಪಾಲ ರೆಡ್ಡಿ, ಯಲ್ಲಪ್ಪ ಉಪಸ್ಥಿತರಿದ್ದರು. ಸಂಘದ ಸಿ.ಸಿದ್ದಯ್ಯ ಸ್ವಾಗತಿಸಿದರೆ ಜಿ.ವೈ. ಗೋವಿಂದ ವಂದಿಸಿದರು.

ಸಾಮೂಹಿಕ ಸಂಘಟನೆಗಳ ವೇದಿಕೆ ರಚನೆ

ಗುಲ್ಬರ್ಗ: ಶಹಾಪೂರದಲ್ಲಿ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳು ಜುಲೈ 23 ರಂದು ಸಭೆ ಸೇರಿ ಕೇಂದ್ರ ಸರ್ಕಾರದ ಬೆಲೆ ಏರಿಕೆ ಅಣ್ವಸ್ತ್ರ ಪರೀಕ್ಷೆ ಸಾರ್ವಜನಿಕ ಉದ್ದಿಮೆಗಳಲಿ ಬಂಡವಾಳ ಹಿಂದೆಗೆಯುವಿಕೆ ಸೇರಿದಂತೆ ಜನವಿರೋಧಿ ನೀತಿಗಳನ್ನು ಪ್ರಭಲವಾಗಿ ವಿರೋಧಿಸುವ ನಿಟ್ಟಿನಲ್ಲಿ ಶಹಪೂರ ತಾಲೂಕು ಮಟ್ಟದ ವೇದಿಕೆ ರಚನೆಯಾಯಿತು.

ಅಧ್ಯಕ್ಷರು-ಚನ್ನಪ್ಪ ಆನೆಗುಂದಿ
ಉಪಾಧ್ಯಕ್ಷರು-ದೇವೇಂದ್ರಪ್ಪ ಪತ್ತಾರ್, ಸಿ.ಎಸ್. ಬೂಸನೂರ ಮಠ ಮತ್ತು ಸೋಮೇಶ್ವರ ಸಜ್ಜನ
ಕಾರ್ಯದರ್ಶಿ- ಜಿ.ಕೆ. ವಿಶ್ವನಾಥ,
ಸಹಕಾರ್ಯದರ್ಶಿ- ಸಿದ್ದಪ್ಪ ಪಾಲ್ಕೆ, ಡಿ. ಕಾಳಗಿ, ಮಲ್ಲಣ್ಣ ಅವರಯ್ಯ ಸ್ವಾಮಿ,
ಖಜಾಂಚಿ ಎಸ್. ಎಸ್. ತಳವಾರ ಹಾಗೂ ಸಲಹಾ ಸಮಿತಿಯ ಸದಸ್ಯರಾಗಿ ಪಿ,ಎ. ರಾಜಪುರೋಹಿತ ನಿಂಗಲ್ಲಾಸಗರ ಜೆ. ಎಂ. ಚನ್ನ ಬಸವಯ್ಯ ಆಯ್ಕೆಗೊಂಡರು.

ಶಿಕ್ಷಕರಿಗೆ ಒತ್ತಾಯಿಸಿ ಶಾಲೆಗೆ ವಿದ್ಯಾರ್ಥಿಗಳಿಂದ ಬೀಗ

ಗುಲ್ಬರ್ಗ ತಾಲೂಕಿನ ಆವರಾದ(ಬಿ) ಗ್ರಾಮದ ಪ್ರೌಢ ಶಾಲಾ ವಿದ್ಯಾರ್ಥಿಗಳು ತಮ್ಮ ಶಾಲೆಗೆ ಶಿಕ್ಷಕರ ಕೊರತೆ ಇದ್ದು ಕೊಡಲೇ ಅಧ್ಯಾಪಕರನ್ನು ನೇಮಿಸುವಂತೆ ಒತ್ತಾಯಿಸಿ ಎಸ್.ಎಫ್.ಐ ನೇತೃತ್ವದಲ್ಲಿ ಆಗಸ್ಟ್ 18 ರಂದು ಶಾಲೆಗೆ ಬೀಗ ಹಾಕಿ ಮುಷ್ಕರ ನಡೆಸಿದರು.

ಮನವಿ ಪತ್ರ ಸ್ವಿಕರಿಸಿದ ತಹಸಿಲ್ದಾರರು ಶಿಕ್ಷಣ ಅಧಿಕಾರಿಗಳನ್ನು ಕರೆದು ಕೂಡಲೇ ಶಾಲೆಗೆ ಉಪನ್ಯಾಸಕರನ್ನು ಭರ್ತಿ ಮಾಡುವಂತೆ ಆದೇಶ ನೀಡಿದರು. ಆಗಸ್ಟ್ 19 ಕ್ಕೆ ಇಬ್ಬರು ಉಪನ್ಯಾಸಕರು ಶಾಲೆಗೆ ಹಾಜರು, ಬೀಗ ತೆರವು.

ಹಸಿದ ಹೊಟ್ಟೆಗೆ ಬಾಂಬು

ಇತ್ತನಿಲ್ಲಲು ಸೂರು ಇಲ್ಲದ
ತೊಟ್ಟುಬಾಳಲು ಬಟ್ಟೆ ಕಾಣದ
ಕತ್ತೆದುಡಿತದಿ ನೆತ್ತಿನಡುಗಿಹ
ತುಟ್ಟಿಕಾಲದಿ ಕಷ್ಟಪಟ್ಟರು
ರೊಟ್ಟಿಸಿಕ್ಕದ ಹೊಟ್ಟೆಗೆ
ಬತ್ತಿ ಸೆಣೆತಿಹ ರಟ್ಟೆಗೆ
ದಟ್ಟ ಧರಿದ್ರರ ಬಾಳಿಗೆ
ತೆತ್ತು ಸಾವಿರ ಕೋಟಿ ಹಣಗಳ
ಹುಟ್ಟುವಾಗಲೆ ಸೊಟ್ಟಗಾಗಿಸಿ
ಮತ್ತೆ ನಿಲ್ಲಲು ಬಾರದಂಥಹ
ಹತ್ತುರೋಗವ ಬಿತ್ತಿ ಬೆಳೆಸುವ
ಸುಟ್ಟು ದೇಶವ ಕುಟ್ಟಿಕೆಡಹುವ
ಕೆಟ್ಟ ಬಾಂಬನು ಕೊಟ್ಟರೊ.

- ವಿಠಲಭಂಡಾರಿ

1964 ರಲ್ಲಿ ಚೀಣಾ ಪರಮಾಣು ಪರೀಕ್ಷಣೆ ಮಾಡಿದಾಗ ಸಿಪಿಐ(ಎಂ) ವಿರೋಧಿಸಲಿಲ್ಲ, ಮೇ 1998 ರಲ್ಲಿ ಪೋಖ್ರಾನ್ ಪರೀಕ್ಷಣೆಯನ್ನು ವಿರೋಧಿಸಿತು. ಏಕೆ? ಏಕೆಂದರೆ



ಸಿಪಿಐ(ಎಂ)ನ ಪರಮಾಣು ನೀತಿ

ಶಾಂತಿಗಾಗಿ ಮತ್ತು ಸಾಮ್ರಾಜ್ಯವಾದದ ವಿರುದ್ಧ



ಆದ್ದರಿಂದಲೇ ಸಾಮ್ರಾಜ್ಯಶಾಹಿಯ ಯಜಮಾನಿಕೆಯ ಪ್ರಯತ್ನ ಇನ್ನೂ ಸಾಗಿರುವ ಸನ್ನಿವೇಶದಲ್ಲಿ ಭಾರತ ಪರಮಾಣು ಆಯ್ಕೆಯನ್ನು ಕಾದಿರಿಸಿಕೊಳ್ಳಬೇಕು, ಅದೇ ವೇಳೆಗೆ ಸಂಪೂರ್ಣ ಪರಮಾಣು ನಿಶ್ಯಸ್ತ್ರೀಕರಣಕ್ಕಾಗಿ ಪ್ರಚಾರ ಮುಂದುವರೆಸಬೇಕು ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಒಂದು ಐತಿಹಾಸಿಕ ಹಿನ್ನೋಟ ಬೀರಿರುವ ಈ ಲೇಖನದಲ್ಲಿ

ರಕ್ಷಣಾ ಪಡೆಗೆ ಅಣ್ವಸ್ತ್ರಗಳನ್ನು ಸೇರ್ಪಡೆ ಮಾಡುವ (ಅಣ್ವಸ್ತ್ರೀಕರಣ) ಬಿಜೆಪಿ ನೇತೃತ್ವದ ಸರಕಾರದ ಘೋಷಣೆಗೆ ಸಿಪಿಐ(ಎಂ) ವ್ಯಕ್ತಪಡಿಸಿರುವ ವಿರೋಧದ ಬಗ್ಗೆ ಅಪಪ್ರಚಾರದ ಮಹಾಪೂರವೇ ಹರಿದಿದೆ. 1964 ರಲ್ಲಿ ಚೀನಾ ನಡೆಸಿದ ಅಣುಶಕ್ತಿ ಪರೀಕ್ಷೆ ಬಗ್ಗೆ ಸಿಪಿಐ(ಎಂ) ತಳೆದ ನಿಲುವನ್ನು ಈ ಸಂಬಂಧದಲ್ಲಿ ಕೆದಕಲಾಗಿದೆ.

1964 ರಲ್ಲಿ ಚೀನಾದ ಅಣುಶಕ್ತಿ ಪರೀಕ್ಷೆಯನ್ನು ಬೆಂಬಲಿಸಿದ್ದ ಸಿಪಿಐ(ಎಂ) 1998 ರಲ್ಲಿ ಭಾರತದ ಪರೀಕ್ಷೆಯನ್ನು ವಿರೋಧಿಸಿದೆ, ಇದು ಪಕ್ಷದ ದ್ವಿಮುಖಿ ಧೋರಣೆ ಹಾಗೂ ರಾಷ್ಟ್ರವಿರೋಧಿ ನಿಲುವನ್ನು ತೋರಿಸುತ್ತದೆ ಎನ್ನುವುದು ಈ ಅಪಪ್ರಚಾರದ ಸಾರಾಂಶ. ಇಂಥದ್ದೊಂದು ಲೇಖನ ಇಂಡಿಯನ್ ಎಕ್ಸ್‌ಪ್ರೆಸ್ (ಜುಲೈ 14) ನಲ್ಲಿ ಪ್ರಕಟವಾಗಿದೆ. ಮೂರು ದಶಕದಷ್ಟು ಹಿಂದಿನ ವಿದ್ಯಮಾನಗಳನ್ನು ಉಲ್ಲೇಖಿಸಿರುವುದರಿಂದ ಸಿಪಿಐ(ಎಂ)ನ ಅಂದಿನ ನಿಲುವನ್ನು ವಿವರಿಸುವುದು ಹಾಗೂ ಅದನ್ನು ಈಗಿನ ಸನ್ನಿವೇಶಕ್ಕೆ ಸಂಬಂಧ ಕಲ್ಪಿಸುವುದು ಅತ್ಯಗತ್ಯವಾಗಿದೆ.

1964 ರಲ್ಲಿ ಚೀನಾದ ಅಣುಶಕ್ತಿ ಪರೀಕ್ಷೆಯನ್ನು ಸಿಪಿಐ(ಎಂ) ವಿರೋಧಿಸಿರಲಿಲ್ಲ ಎನ್ನುವುದು ಸತ್ಯ. 1998 ರ ಮೇ ತಿಂಗಳ ಪೋಖ್ರಾನ್ ಪರೀಕ್ಷೆಗಳನ್ನು ಅದು ವಿರೋಧಿಸಿತು ಎನ್ನುವುದೂ ಅಷ್ಟೇ ಸತ್ಯ. ಹಾಗಾದರೆ ಈ ಎರಡು ನಿಲುವುಗಳ ಹಿನ್ನೆಲೆಯಾದರೂ ಏನು?

ಅಣ್ವಸ್ತ್ರಗಳು ಭೂಮಿಯ ಮೇಲೆ ಬದುಕುವ ಪರಿಸ್ಥಿತಿಯನ್ನೇ ನಾಶಪಡಿಸುತ್ತವೆ. ಹೀಗಾಗಿ ಸಾಮೂಹಿಕ ವಿನಾಶದ ಅಣ್ವಸ್ತ್ರಗಳನ್ನು ಯುದ್ಧ ಸಾಧನವಾಗಿ ಬಳಸುವುದನ್ನು ಸಿಪಿಐ(ಎಂ) ವಿರೋಧಿಸುತ್ತದೆ. ಆದ್ದರಿಂದ ಅಣ್ವಸ್ತ್ರಗಳನ್ನು ನಾಶಮಾಡಬೇಕು ಮತ್ತು ಜಾಗತಿಕ ಅಣ್ವಸ್ತ್ರ ನಿಶಸ್ತ್ರೀಕರಣ ಆಗಬೇಕು ಎಂದು ಪಕ್ಷದ ಪ್ರತಿಪಾದನೆ. ಆದರೆ, ಮನುಕುಲಕ್ಕೆ ಈ ಗಂಭೀರ ಸಮಸ್ಯೆ ಎದುರಾಗಲು ಕಾರಣವಾದ ಐತಿಹಾಸಿಕ ಸನ್ನಿವೇಶ ಹಾಗೂ ಅಣ್ವಸ್ತ್ರಗಳ ನಿರ್ಮೂಲನೆ ಹೋರಾಟ ಹೇಗೆ ಸಾಗಬೇಕು ಎನ್ನುವುದನ್ನು ಪರಿಶೀಲಿಸುವುದು ಅಗತ್ಯ.

"ಕಮ್ಯುನಿಸಂನ್ನು ತಡೆಹಿಡಿಯಲು"

ಅಣ್ವಸ್ತ್ರಗಳನ್ನು ಮೊದಲು ತಯಾರಿಸಿದ್ದು ಅಮೆರಿಕ. 1945 ರಲ್ಲಿ ಅಣುಬಾಂಬನ್ನು ಪರೀಕ್ಷಿಸಿದ ಅಮೆರಿಕ ಅದನ್ನು ಹಿರೋಷಿಮಾ-ನಾಗಸಾಕಿ ಮೇಲೆ ಬಳಸಿತು. ಇದರಿಂದ ಉಂಟಾದ ಪರಿಣಾಮ ಭಯಾನಕ, ಘನ ಘೋರ. ಆಮೇಲೆ ಇದೇ ಅಮೆರಿಕ ಶೀತಲ ಸಮರದ ಹಿನ್ನೆಲೆಯಲ್ಲಿ ಸೋವಿಯಟ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳನ್ನು ಗುರಿಯಾಗಿಸಿಕೊಂಡು ಇದೇ ಅಸ್ತ್ರಗಳೊಂದಿಗೆ ಬೆದರಿಸಿತು. 1952 ರಲ್ಲಿ ಅಮೆರಿಕ ಜಲಜನಕ ಬಾಂಬನ್ನು ತಯಾರಿಸಿತು.

ಅಮೆರಿಕ ಸಾಮ್ರಾಜ್ಯಶಾಹಿ ಒಡ್ಡಿದ ಹೊಸ ಬೆದರಿಕೆಗೆ ಪ್ರತಿಕ್ರಿಯಿಸಿದ ಸೋವಿಯತ್ ಒಕ್ಕೂಟ 1953 ರಲ್ಲಿ ಜಲಜನಕ ಬಾಂಬನ್ನು ಅಭಿವೃದ್ಧಿ ಪಡಿಸಿ ಅದನ್ನು ಪರೀಕ್ಷಿಸಿತು.

'ಕಮ್ಯೂನಿಸಂ ತಡೆಹಿಡಿಯುವ' ಅಂಗವಾಗಿ ಸೋವಿಯತ್ ಒಕ್ಕೂಟದ ವಿರುದ್ಧ ಅಣ್ವಸ್ತ್ರಗಳನ್ನು [illegible] ಅಮೇರಿಕದ ಆಳುವ ವರ್ಗಗಳ ಕೆಲವು ವಿಭಾಗಗಳು ಗಂಭೀರವಾಗಿ ಪರಿಶೀಲಿಸಿದ್ದವು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳು ಲಭ್ಯವಿವೆ. ಐತಿಹಾಸಿಕ ದಾಖಲೆಗಳು ಹಾಗೂ ಅಧ್ಯಯನಗಳಿಂದ ಈ ಸಾಕ್ಷ್ಯಗಳು ಲಭ್ಯ.

1949 ರಲ್ಲಿ ಚೀನಿ ಕ್ರಾಂತಿ ಯಶಸ್ವಿಯಾದಾಗ ಚೀಣಾವನ್ನು ಸುತ್ತುವರಿಯುವ ನೀತಿಯನ್ನು ಅಮೆರಿಕಾ ಅಳವಡಿಸಿಕೊಂಡಿತು. ಸಮಾಜವಾದದ ಅಲೆ ಹೆಚ್ಚುತ್ತಿರುವುದನ್ನು ತಡೆಯುವ ಸಾಮ್ರಾಜ್ಯಶಾಹಿಯ ಸಾಮರಿಕ ಆಕ್ರಮಣಕಾರಿ ನಿಲುವಿನ ಅಂಗವಾಗಿತ್ತದು. 1950 ರ ದಶಕದಲ್ಲಿ ಚೀನಾದ ನೆರೆ ಹೊರೆ ದೇಶಗಳಲ್ಲಿ ಮಿಲಿಟರಿ ನೆಲೆಗಳನ್ನು ಸ್ಥಾಪಿಸುವ ಮೂಲಕ ಚೀನಾವನ್ನು ಅಮೇರಿಕ ಸುತ್ತುವರಿಯಿತು.

ಚೀನಾದ ನಂತರ ಕೊರಿಯಾ ಯುದ್ಧದ ಸರದಿ. ಸರಿಯಾದ ಐತಿಹಾಸಿಕ ದೃಷ್ಟಿಕೋನ ಇಲ್ಲದವರು 1950-53 ರ ಕೊರಿಯಾ ಯುದ್ಧವನ್ನು ಬೇಕಂತಲೇ ಮರೆಯುತ್ತಾರೆ. ಅಮೆರಿಕದ ಸಶಸ್ತ್ರ ಪಡೆಗಳು ಉತ್ತರ ಕೊರಿಯಾ ವಿರುದ್ಧ ಯುದ್ಧ ಸಾರಿದವು; ನೆರೆಯ ಸಮಾಜವಾದಿ ದೇಶಗಳನ್ನು ರಕ್ಷಿಸಲು ಚೀನಾ ಕಣಕ್ಕಿಳಿಯಿತು.

"ಒಪ್ಪಂದ ಏರ್ಪಡದೆ ಇದ್ದರೆ ವೈರಿಗಳ ಸೇವಾ ನೆಲೆಗಳ ಮೇಲೆ ಅಣುಬಾಂಬ್ ದಾಳಿಮಾಡಿ ಹಾಗೂ ಶತ್ರುಗಳ ಪ್ರಮುಖ ಸರಬರಾಜು ಹಾಗೂ ಸಂಪರ್ಕವನ್ನು ಮುಚ್ಚಲು ಹೊಲಗಳಲ್ಲಿ ಸೂಕ್ತ ರೇಡಿಯೋ ' ವಿಕಿರಣ ಸಾಧನಗಳನ್ನು ಬಿತ್ತುವ ಮೂಲಕ ಉತ್ತರ ಕೊರಿಯಾದಿಂದ ಶತ್ರು ಪಡೆಗಳನ್ನು ತೆರವು ಮಾಡುವುದು ನಮ್ಮ ಉದ್ದೇಶ ಎಂದು ಯುಎಸ್‌ಎಸ್‌ಆರ್‌ಗೆ ತಿಳಿಸಬೇಕು ಎಂದು 1952 ರ ಚುನಾವಣೆಗಳ ತರುವಾಯದಲ್ಲೇ ದೂರಪ್ರಾಚ್ಯದಲ್ಲಿನ ಅಮೆರಿಕ ಪಡೆಗಳ ಕಮಾಂಡರ್ ಜನರಲ್ ಮ್ಯಾಕ್ ಆರ್ಥರ್ ಅಧ್ಯಕ್ಷ ಐಸೆನ್ ಹೂವರ್‌ಗೆ ಹೇಳಿದ್ದರು. (ಡಿ.ಮ್ಯಾಕ್ ಆರ್ಥರ್ , ನೆನಪುಗಳು, ನ್ಯೂಯಾರ್ಕ್ 1967)

ಕೊರಿಯಾದಲ್ಲಿ [illegible] ಮುಂದುವರಿದರೆ ಕೊರಿಯಾದ ಸೇನಾಗುರಿಗಳ ವಿರುದ್ಧ ಮತ್ತು ಕೊರಿಯಾದಲ್ಲಿನ ಕಾರ್ಯಾಚರಣೆಗೆ ಕಮ್ಯುನಿಸ್ಟರು ನೇರ ಬೆಂಬಲವಾಗಿ ಬಳಸುವ ಮಂಚೂರಿಯಾ ಹಾಗೂ ಚೀನಾದಲ್ಲಿನ ಸೇನಾಗುರಿಗಳ ವಿರುದ್ಧ ಅಥವಾ ಕೊರಿಯಾ ಪ್ರದೇಶದಲ್ಲಿ ಅಮೇರಿಕ ವಿಶ್ವಸಂಸ್ಥೆ ಪಡೆಗಳ ಭದ್ರತೆಗೆ ಬೆದರಿಕೆ ಒಡ್ಡುವ ಯಾರದೇ ವಿರುದ್ಧ ಅಮೆರಿಕ ಅಣ್ವಸ್ತ್ರಗಳನ್ನು ಬಳಸಬೇಕು" ಎಂದು 1954ರ ಜನವರಿಯ ಯುದ್ಧ ವಿರಾಮದ ನಂತರವೂ ಅಮೇರಿಕದ ಜಂಟಿ ಪಡೆಗಳ ಮುಖ್ಯಸ್ಥರು ಶಿಫಾರಸು ಮಾಡಿದ್ದರು (ಫಾರ್ ಐಸೆನ್‌ಹೂವರ್, 2 ಗೋಲ್ಸ್ ಇಫ್ ಬಾಂಬ್ ವಾಸ್ ಟುಬಿ ಯೂಸ್ಡ್" ಎಂಬ ನ್ಯೂಯಾಕ್ ಟೈಮ್ಸ್‌ನ ವರದಿಯಲ್ಲಿ - ಜೂನ್ 8, 1984).

ಬ್ಲಾಕ್‌ಮೇಲ್‌ನ್ನು ಹಿಮ್ಮೆಟ್ಟಿಸಲು

ಚೀನಾವನ್ನು ದಮನಿಸಲು ಅಣ್ವಸ್ತ್ರ ಬ್ಲಾಕ್‌ಮೇಲ್ ತಂತ್ರವನ್ನು ಅಮೆರಿಕ ಗುಟ್ಟಾಗೇನೂ ಇಟ್ಟಿರಲಿಲ್ಲ 'ಒಂದು ವೇಳೆ ಸೋವಿಯತ್ ಒಕ್ಕೂಟದೊಂದಿಗೆ ಪರಮಾಣು ಯುದ್ಧ ಮಾಡಿದರೆ ರಷ್ಯ ಮತ್ತು ಚೀನಾಗಳೆರಡನ್ನೂ ನಾಶಮಾಡುವ ಅಣ್ವಸ್ತ್ರ ಸಾಮರ್ಥ್ಯ ಅಮೆರಿಕಕ್ಕೆ ಇದೆ' ಎಂದು ಅಮೆರಿಕದ ರಕ್ಷಣಾ ಮಂತ್ರಿ ರಾಬರ್ಟ್ ಮ್ಯಾಕ್ನಮಾರಾ ಅನೇಕ ಸಂದರ್ಭಗಳಲ್ಲಿ ಘೋಷಿಸಿದ್ದ. (ಡೇವಿಡ್ ಹಾರೋವಿಜ್, ಫ್ರಂ ಯಾಲ್ಟಾಟು ವಿಯೆಟ್ನಾಂ : ಅಮೆರಿಕನ್ ಫಾರಿನ್ ಪಾಲಿಸಿ ಇನ್‌ದ ಕೋಲ್ಡ್‌ವಾರ್, ಲಂಡನ್ 1967)

ಜಪಾನ್ ಸ್ವಾಮ್ಯದ ಒಕಿನಾವಾ ದ್ವೀಪ, ತೈವಾನ್, ಫಿಲಿಪ್ಪೀನ್ಸ್ ಮತ್ತು ದಕ್ಷಿಣ ಕೊರಿಯಾಗಳಲ್ಲಿರುವ ಅಮೇರಿಕದ ಮಿಲಿಟರಿ ನೆಲೆಗಳಿಂದ ಭೂ, ವಾಯು ಹಾಗೂ ಸಾಗರ ಈ ಮೂರು ಕಡೆಗಳಿಂದ ಆಕ್ರಮಣಕಾರಿ ಸೇನಾ ಕಾರ್ಯಾಚರಣೆಗಳನ್ನು ನಡೆಸಲಾಯಿತು. ಚೀನಾ ಅಣ್ವಸ್ತ್ರ ಶಕ್ತ ರಾಷ್ಟ್ರವಾಗುವುದಕ್ಕೂ ತುಂಬಾ ಮುಂಚೆಯೇ ಚೀನಾದ ಮೇಲೆ ನ್ಯೂಕ್ಲಿಯರ್ ಬಾಂಬ್‌ಗಳನ್ನು ಗುರಿಯಿಡಲಾಗಿತ್ತು. ಅಣ್ವಸ್ತ್ರ ಸಜ್ಜಿತವಾದ ಅಮೇರಿಕ ನೌಕಾಪಡೆಯ ಏಳನೇ ತುಕಡಿ ಚೀನಾ ಮತ್ತು ವಿಯೆಟ್ನಾಂ ಸುತ್ತಲಿನ ಸಾಗರದಲ್ಲಿ ಆಕ್ರಮಣಕಾರಿ ಕಾವಲನ್ನು ಹಾಕಿತ್ತು.

ಈ ಎಲ್ಲಾ ಬೆದರಿಕೆಗಳ ಹಿನ್ನೆಲೆಯಲ್ಲಿ ಚೀನಾವೂ ಅಣ್ವಸ್ತ್ರಶಕ್ತ ರಾಷ್ಟ್ರವಾಗಿ ಹೊರಹೊಮ್ಮುವುದು ಅನಿವಾರ್ಯವಾಯಿತು. ಚೀನಾ ತನ್ನ ಪರಮಾಣು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸೋವಿಯತ್ ಒಕ್ಕೂಟದ ನೆರವನ್ನು [illegible] ಕೋರಿದಾಗ ಅದನ್ನು ನಿರಾಕರಿಸಲಾಯಿತು. ಎರಡೂ ಸಮಾಜವಾದಿ ದೇಶಗಳ ನಡುವಿನ ಬಾಂಧವ್ಯ ಹದಗೆಡುತ್ತಾ ಬಂದ ಹಿನ್ನೆಲೆಯಲ್ಲಿ, ಈ ಸಹಕಾರದ ನಿರಾಕರಣೆ ಚೀನಾ ಸೋವಿಯತ್ ನಡುವಿನ ಬಿಕ್ಕಟ್ಟು 1962-63 ರಲ್ಲಿ ಬಿಗಡಾಯಿಸಲು ಒಂದು ಕಾರಣವಾಯಿತು.

ಚೀನಾ 1964ರಲ್ಲಿ ಅಣುಸಾಧನವನ್ನು ಸ್ಫೋಟಿಸಿದಾಗ ಹಾಗೂ ಆನಂತರ ಅಣ್ವಸ್ತ್ರ ಕಾರ್ಯಕ್ರಮದಲ್ಲಿ ಮುಂದುವರಿದಾಗ ಸಿಪಿಐ(ಎಂ) ಅದನ್ನು ವಿರೋಧಿಸಲಿಲ್ಲ. 50 ರ ದಶಕದಲ್ಲಿ ಅಮೇರಿಕ ಅಣ್ವಸ್ತ್ರಗಳನ್ನು ಪೇರಿಸತೊಡಗಿದಾಗ ಸೋವಿಯತ್ ಒಕ್ಕೂಟ ಅಣ್ವಸ್ತ್ರಗಳನ್ನು ಹೊಂದಲು ಮುಂದಾಗಿದ್ದನ್ನೂ ಭಾರತೀಯ ಕಮ್ಯುನಿಸ್ಟರು ವಿರೋಧಿಸಿರಲಿಲ್ಲ.

ಚೀನಾವನ್ನು ತಡೆಗಟ್ಟಿ, ಅಲ್ಲಿ ಕಮ್ಯುನಿಸಂ ಅನ್ನು ತೊಡೆದುಹಾಕುವ ಅಮೇರಿಕದ ಕುತಂತ್ರ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ದಿಸೆಯಲ್ಲಿ ಸಮಾಜವಾದಿ ಚೀನಾ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಸೂಕ್ತ ಎಂದು ಸಿಪಿಐ(ಎಂ) ಪರಿಗಣಿಸಿತು. ಅಮೆರಿಕ ಸೃಷ್ಟಿಸಿದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಮಾಜವಾದಿ ವ್ಯವಸ್ಥೆ ಮತ್ತು ಚೀನಾ ಜನತಾ ಗಣರಾಜ್ಯದ ಸಾರ್ವಭೌಮತೆ ಹಾಗೂ ಸ್ವಾತಂತ್ರವನ್ನು ರಕ್ಷಿಸಿಕೊಳ್ಳಲು ಈ ರಕ್ಷಾತ್ಮಕ ಹೆಜ್ಜೆ ನ್ಯಾಯಸಮ್ಮತವಾಗಿದೆ.

ಅಣ್ವಸ್ತ್ರ ಹೊಂದಿರದ ಯಾವುದೇ ದೇಶದ ವಿರುದ್ಧ ಅಣ್ವಸ್ತ್ರಗಳನ್ನು ಬಳಸುವುದಿಲ್ಲ ಮತ್ತು ಪ್ರಥಮವಾಗಿ ತಾನು ಅಣ್ವಸ್ತ್ರಗಳನ್ನು ಬಳಸುವುದಿಲ್ಲ ಎಂದು ಮೊದಲು ಘೋಷಿಸಿದ ದೇಶ ಚೀನಾ ಎನ್ನುವುದೂ ಗಮನಾರ್ಹ.

ಬದಲಾದ ಸನ್ನಿವೇಶ

ಚೀನಾ ಅಣ್ವಸ್ತ್ರ ರಾಷ್ಟ್ರವಾದಾಗಿನಿಂದ ಅಂತರಾಷ್ಟ್ರೀಯ ಪರಿಸ್ಥಿತಿಯಲ್ಲಿ ಗುಣಾತ್ಮಕ ಬದಲಾವಣೆ ಆಗಿದೆ. ಸೋವಿಯತ್ ಒಕ್ಕೂಟ ವಿಘಟನೆಯಾಗಿದ್ದರಿಂದ ಶೀತಲ ಸಮರದ ಚೌಕಟ್ಟು ಅಂತ್ಯವಾಗಿದೆ. ಆದರೂ ಜಗತ್ತಿನಲ್ಲಿ ಐದು ಅಣ್ವಸ್ತ್ರ ರಾಷ್ಟ್ರಗಳಿವೆ. ಅಮೆರಿಕ, ರಷ್ಯ, ಚೀನಾ ಫ್ರಾನ್ಸ್ ಮತ್ತು ಬ್ರಿಟನ್ ಇವೇ ಆ ದೇಶಗಳು.

ಸೋವಿಯತ್ ಒಕ್ಕೂಟ ವಿಭಜನೆಗೊಳ್ಳುವ ಮೊದಲೇ ಚೀನಾ ಸೋವಿಯತ್ ನಡುವಿನ ಸಂಬಂಧ ಸುಧಾರಿಸತೊಡಗಿತ್ತು. ಚೀನಾ ರಷ್ಯಾ ಗಡಿ ವಿವಾದ ಬಗೆಹರಿದಿದೆ. ಅಮೆರಿಕ-ಚೀನಾ ಸಂಬಂಧವೂ ಗಣನೀಯವಾಗಿ [illegible] ಅಣ್ವಸ್ತ್ರ ಬಳಕೆಯ ಬೆದರಿಕೆಯ ದೀರ್ಘ ಅಧ್ಯಾಯವೂ 1998 ರ ಜುಲೈನಲ್ಲಿ ಅಂತ್ಯಗೊಂಡಿದೆ. ಆಗ ಚೀನಾಕ್ಕೆ ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ಭೇಟಿಕೊಟ್ಟ ಸಂದರ್ಭದಲ್ಲಿ ಪರಸ್ಪರರ ಗುರಿಗಳ ಮೇಲೆ ಕ್ಷಿಪಣಿದಾಳಿ ಮಾಡಬಾರದೆಂಬ ಒಡಂಬಡಿಕೆಗೆ ಬರಲಾಯಿತು.

ಆದರೂ ಜಗತ್ತಿನಲ್ಲಿ ಇಂದಿಗೂ ಐದು ಅಣ್ವಸ್ತ್ರ ರಾಷ್ಟ್ರಗಳಿವೆ. ಅಮೆರಿಕ ಮತ್ತು ರಷ್ಯಾ ನಡುವೆ ಶಸ್ತ್ರಾಸ್ತ್ರಮಿತಿ ಒಡಂಬಡಿಕೆಗಳಿದ್ದರೂ ಈ ಎರಡೂ ರಾಷ್ಟ್ರಗಳು ಭಾರೀ ಪ್ರಮಾಣದ ಅಣ್ವಸ್ತ್ರಗಳನ್ನು ಹೊಂದಿವೆ. ಅಣ್ವಸ್ತ್ರಗಳ ನಾಶಕ್ಕೆ ಐದು ರಾಷ್ಟ್ರಗಳು ಒಟ್ಟಾಗಿ ಕಾಲಮಿತಿ ಯನ್ನೇನೂ ರೂಪಿಸಿಲ್ಲ. ಅತಿಹೆಚ್ಚು ಅಣ್ವಸ್ತ್ರಗಳನ್ನು ಹೊಂದಿರುವ ಹಾಗೂ ಐದು ದಶಕಗಳಿಂದಲೂ ಆಕ್ರಮಣಕಾರಿ ಅಣ್ವಸ್ತ್ರ ತಂತ್ರವನ್ನು ಪ್ರತಿಪಾದಿಸುತ್ತಿರುವ ದೇಶವಾಗಿ ಅಮೇರಿಕ ಅಣ್ವಸ್ತ್ರ ನಾಶದ ಅಗತ್ಯವನ್ನು ಒಪ್ಪಿಕೊಳ್ಳಬೇಕಾಗಿದೆ ಹಾಗೂ ಆ ದಿಸೆಯಲ್ಲಿ ಆರಂಭದ ಹೆಜ್ಜೆಗಳನ್ನು ಇಡಬೇಕಾಗಿದೆ ಎನ್ನುವುದು ಸ್ಪಷ್ಟವಾಗಿದೆ.

ಇದಕ್ಕಾಗಿ ವಿಶ್ವವ್ಯಾಪಿ ಆಂದೋಲನವೊಂದು ಅಗತ್ಯವಾಗಿದ್ದು ಅದಕ್ಕೀಗ ಕಾಲ ಪಕ್ವವಾಗಿದೆ.

ಭಾರತಕ್ಕೆ ಅಣ್ವಸ್ತ್ರ ಬೆದರಿಕೆ ಇಲ್ಲ

ಯಾವುದೇ ಸೇನಾ ಬ್ಲಾಕ್‌ಗಳಿಗೆ ಸೇರಬಾರದೆಂಬ ಅಲಿಪ್ತ ನೀತಿಯನ್ನು ಭಾರತ 50 ರ ದಶಕದ ಮಧ್ಯ ಭಾಗದಿಂದಲೂ ಅನುಸರಿಸಿಕೊಂಡು ಬಂದಿದೆ. ಅಣ್ವಸ್ತ್ರಗಳ ಬಳಕೆಗೆ ವಿರೋಧವಾಗಿರುವ ಭಾರತ ಜಾಗತಿಕ ನಿಶಸ್ತ್ರೀಕರಣವನ್ನು ಪ್ರತಿಪಾದಿಸುತ್ತಿದೆ.

ಪಾಕಿಸ್ತಾನದೊಂದಿಗೆ ಯುದ್ಧಗಳನ್ನು ನಡೆಸಿದಾಗಲೂ ಮತ್ತು ಚೀನಾದೊಂದಿಗಿನ ಗಡಿ ವಿವಾದದ ಮೇಲೂ ಅಣ್ವಸ್ತ್ರ ಬಳಸದಿರುವ ತನ್ನ ಮೂಲ ನೀತಿಯಿಂದ ಭಾರತ ವಿಚಲಿತವಾಗಲಿಲ್ಲ. ಇಷ್ಟೂ ವರ್ಷ ಕಾಲ ಅಮೆರಿಕಾ ಹಾಗೂ ಅದರ ಮಿತ್ರರಿಂದ ಚೀನಾ ಎದುರಿಸಿದಂತೆ ಭಾರತವೇನೂ ನೇರ ಅಣ್ವಸ್ತ್ರದ ಬೆದರಿಕೆಯನ್ನೇನನ್ನೂ ಎದುರಿಸಿಲ್ಲ.

ಯಾವುದೇ ಸೇನಾ ಕೂಟಗಳ ಮೈತ್ರಿ ಮಾಡದಿರುವುದು ಹಾಗೂ ಅಲಿಪ್ತ ನೀತಿಯ ಅನುಸರಣೆಯಲ್ಲಿ ಕೆಲವು ಚಂಚಲತೆಗಳಿದ್ದಾಗ್ಯೂ ಭಾರತಕ್ಕೆ ಅನುಕೂಲವೇ ಆಗಿದೆ.

ಚೀನಾದಂತಲ್ಲದೆ ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತ ನೇರವಾಗಿ ಯಾವ ಸಂದರ್ಭದಲ್ಲೂ ಅಣ್ವಸ್ತ್ರ ಬೆದರಿಕೆಯನ್ನು ಎದುರಿಸಲಿಲ್ಲ. ಅಮೆರಿಕದೊಂದಿಗಿನ ಸಂಬಂಧದಲ್ಲಿ ಏರಿಳಿತಗಳಿದ್ದರೂ ಅಮೆರಿಕದ ಆಳುವ ವರ್ಗಗಳು ಯಾವತ್ತೂ ಭಾರತವನ್ನು ಪ್ರತಿದ್ವಂದ್ವಿಯೆಂದು ಪರಿಗಣಿಸಲಿಲ್ಲ. ಬದಲಾಗಿ 1962 ರ ಗಡಿ ಘರ್ಷಣೆ ವೇಳೆ ಅದನ್ನು ಚೀನಾದ ವಿರುದ್ಧ ಬಳಸಲು ಯತ್ನಿಸಿದ. ಸೇನಾ ನೆರವನ್ನು ನೀಡಿದೆ.

ಅಪಪ್ರಚಾರ

ಭಾರತದ ವಿರುದ್ಧ ಚೀನಾ ಟಿಬೆಟ್‌ನಿಂದ ಅಣ್ವಸ್ತ್ರ ಸಜ್ಜಿತ ಕ್ಷಿಪಣಿಗಳನ್ನು ಗುರಿಯಾಗಿರಿಸಿಕೊಂಡಿದೆ ಎಂಬ ಪ್ರಚಾರದ ಬಗ್ಗೆ ಹೇಳುವುದಾದರೆ 1988 ರ ಡಿಸೆಂಬರ್‌ನಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿಯವರೇ ಚೀನಾ ಭೇಟಿ ಸಂದರ್ಭದಲ್ಲಿ ಈ ವಿಚಾರವನ್ನು ತಳ್ಳಿಹಾಕಿದರು. ಇದನ್ನು ಚೀನಾದವರು ನಮಗೆ ಹೇಳಿದ್ದಲ್ಲ. ನಮ್ಮದೇ ಮೂಲಗಳಿಂದ ಇದು ಗೊತ್ತಾಗಿದೆ ಎಂದು ರಾಜೀವ್‌ಗಾಂಧಿ ಹೇಳಿದ್ದರು. ('ದಿ ಹಿಂದೂ' ಪತ್ರಿಕೆ, ಡಿಸೆಂಬರ್ 24,1988)

ಇದು 1988ರ ಪರಿಸ್ಥಿತಿಯಾದರೆ ಕಳೆದ ದಶಕದಲ್ಲಿ ಸಂಬಂಧಗಳಲ್ಲಿನ ಸುಧಾರಣೆ ಹಾಗೂ ಸಹಜೀಕರಣದ ನಂತರ ಭಾರತದ ವಿರುದ್ಧ ಟಿಬೆಟ್‌ನಲ್ಲಿ ಕ್ಷಿಪಣಿಯನ್ನು ನೆಲೆಗೊಳಿಸುತ್ತದೆ ಎನ್ನುವುದು ತೀರಾ ಅಸಾಧ್ಯದ ಸಂಗತಿ. ಪೋಖ್ರಾನ್ ಪರೀಕ್ಷೆಗಳ ಸ್ವಲ್ಪ ಮೊದಲು ಶಾಂತಿ ಮತ್ತು ಸಂಘರ್ಷ ಅಧ್ಯಯನಗಳ ಕೇಂದ್ರದ ನಿರ್ದೇಶಕ ಮೇಜರ್ ಜನರಲ್ ದೀಪಂಕರ್ ಬ್ಯಾನರ್ಜಿ ಭಾರತದ ವಿರುದ್ಧ ನಿರ್ದೇಶಿಸಲಾದ ಅಣ್ವಸ್ತ್ರ ಹೊಂದಿದ ಕ್ಷಿಪಣಿಗಳು ಟಿಬೆಟ್‌ನಲ್ಲಿವೆ ಎನ್ನುವುದಕ್ಕೆ ಯಾವುದೇ ಸಾಕ್ಷ್ಯವಿಲ್ಲ ಎಂದು ಪ್ರತಿಪಾದಿಸಿದ್ದರು (ಫ್ರಂಟ್‌ಲೈನ್ ಏಪ್ರಿಲ್ 24, 1998)

ಸೋವಿಯತ್ ಒಕ್ಕೂಟದ ಕುಸಿತದ ನಂತರ 1991 ರ ನಂತರದ ಅವಧಿಯಲ್ಲಿ ಅಣ್ವಸ್ತ್ರ ವಿಚಾರಕ್ಕೆ ಸಂಬಂಧಿಸಿ ಹೇಳುವುದಾದರೆ ಭಾರತದ ಮೇಲೆ ಪರಿಣಾಮ ಬೀರುವಂಥ ಪ್ರತಿಕೂಲ ಸನ್ನಿವೇಶವೇನೂ ಸೃಷ್ಟಿಯಾಗಿಲ್ಲ. ಚೀನಾದೊಂದಿಗಿನ ಸಂಬಂಧ ಸುಧಾರಿಸಿದೆ. ಕಾಶ್ಮೀರ ವಿವಾದ ಇದ್ದರೂ ಭಾರತ ಮತ್ತು ಪಾಕಿಸ್ತಾನ ಮಾತುಕತೆ ನಡೆಸಿ ಆರ್ಥಿಕ ಮೊದಲಾದ ನಿರ್ದಿಷ್ಟ

ಪುಟ 7 ಕ್ಕೆ

ಸ್ವಾತಂತ್ರ್ಯದ ಸ್ವರ್ಣ ಜಯಂತಿ ಆಚರಣೆಗಳು ಮುಗಿದಿವೆ. ಈ ಅವಧಿಯಲ್ಲಿ ಒಂದು ವರ್ಷ ಹಿಂದಿನ ಹೋರಾಟಗಳ ಸವಿನೆನಪುಗಳನ್ನು ಮೆಲುಕಿಸಿದ್ದಾಯಿತು. ಈಗ ಐವತ್ತು ವರ್ಷಗಳ ಸ್ವಾತಂತ್ರ್ಯದ ನಂತರ ಭಾರತ ಹೊಸಶತಮಾನದ ಹೊಸ್ತಿಲಲ್ಲಿ ಎಲ್ಲಿ ಬಂದು ನಿಂತಿದೆ, ಹೇಗೆ ನಿಂತಿದೆ ಎಂದು ಒಂದು ಗಂಭೀರ ಆತ್ಮಾವಲೋಕನ ಮಾಡುವ ಸಮಯ ಬಂದಿದೆ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ

ಸೀತಾರಾಂ ಯೆಚೂರಿ



ಆತ್ಮಾವಲೋಕನ ಮಾಡಬೇಕಾದ ಸಮಯವಿದು



ಅಧಿಕೃತ ಮಾಧ್ಯಮ ಮತ್ತು ಸರಕಾರಿ ಆಚರಣೆಗಳ ಮೂಲಕ ಕಳೆದ ಐದು ದಶಕಗಳಲ್ಲಿ ಭಾರತದ ಸಾಧನೆಗಳ ಬಗ್ಗೆ ಬಹಳ ಮಾತಾಡಿದ್ದಾಗಿದೆ. ನಿಜ, ದೇಶ ಹಲವು ವಲಯಗಳಲ್ಲಿ ಬಾಹ್ಯಾಕಾಶದಿಂದ ಹಿಡಿದು ಒಣ ಪ್ರದೇಶಗಳಲ್ಲಿ ಬೇಸಾಯದವರೆಗೆ - ಮಹತ್ತಾದನೆಗಳನ್ನು ಕಂಡಿದೆ. ಅತ್ತ ಭಾರತದ ನ್ಯೂನ್ಯತೆಗಳ ಬಗ್ಗೆಯೂ ಬಹಳಷ್ಟು ಮಾತಾಡಿದ್ದಾಗಿದೆ. ಬಡತನ, ನಿರುದ್ಯೋಗ, ಪೋಷಕಾಂಶಗಳ ಅಭಾವ, ಮಕ್ಕಳ ದುಡಿಮೆ, ನಿರಕ್ಷರತೆ, ಮೂಲಭೂತ ಆರೋಗ್ಯ ಸೌಲಭ್ಯಗಳ ಅಭಾವ ಇವು ಇಂತಹ ಚರ್ಚೆಗಳ ಪಟ್ಟಿಯಲ್ಲಿರುವ ವಿಷಯಗಳು. ಇಲ್ಲಿ ಗಂಭೀರ ಆತಂಕಕ್ಕಿಂತ ತಿರಸ್ಕಾರದ ಅಂಶವೇ ಹೆಚ್ಚಾಗಿತ್ತು ಎಂಬುದು ಬೇರೆ ಮಾತು. ಈ ಸಮಸ್ಯೆಗಳಿಗೆ ಪರಿಹಾರವಾಗಿ ಮೂರ್ತವಾದದ್ದೇನೂ ಮೂಡಿಬಂದಿಲ್ಲ.

ದೇಶದ ಹಲವು ರಾಜ್ಯಗಳಲ್ಲಿ ಹತ್ತಿ ಬೆಳೆಗಾರರ ಆತ್ಮಹತ್ಯೆಗಳ ಸುದ್ದಿಗಳು ಬಹುಪಾಲು ಭಾರತೀಯ ಜನಸಮೂಹಗಳ ಜೀವನ ಪರಿಸ್ಥಿತಿಗಳನ್ನು ಎತ್ತಿ ತೋರಿಸಿವೆ. ನಮ್ಮಲ್ಲಿ ಅತ್ಯಂತ ಕೆಳಗೇ ಇರುವ ಬಡತನದ ರೇಖೆಗಿಂತಲೂ ಕೆಳಗೆ ಬದುಕುತ್ತಿರುವವರ ಸಂಖ್ಯೆ ಇಡೀ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಜನಸಂಖ್ಯೆಯಷ್ಟು; ಪೋಷಕಾಂಶಗಳ ಅಭಾವದಿಂದ ಸಾವನ್ನಪ್ಪುವವರ ಸಂಖ್ಯೆಯೇ ಇಡೀ ಆಸ್ಟ್ರೇಲಿಯಾದ ಜನಸಂಖ್ಯೆಯಷ್ಟು. ವಿಶ್ವದಲ್ಲೇ ಅತೀ ಹೆಚ್ಚು ಅನಕ್ಷರಸ್ಥರು ಹಾಗೂ ನಿರುದ್ಯೋಗಿಗಳೊಂದಿಗೆ ಮುಂದಿನ ಶತಮಾನಕ್ಕೆ ನಾವು ಅಡಿಯಿಡಬೇಕಾಗಿದೆ. ಏಕೆ ಹೀಗೆ? ನಮ್ಮ ವೈಜ್ಞಾನಿಕ ಮತ್ತು ಇತರ ಸಾಧನೆಗಳು ವಿಶ್ವದಲ್ಲೇ ಅತ್ಯುತ್ತಮ ಸಾಧನೆಗಳನ್ನು ಸರಿಗಟ್ಟಿದರೂ ಏಕೆ ನಮ್ಮ ಬಹುಪಾಲು ಜನ ಶೋಚನೀಯ ಬದುಕು ಸಾಗಿಸಬೇಕಾಗಿದೆ? ಭಾರತೀಯರಿಗೆ ಇದಕ್ಕಿಂತ ಉತ್ತಮ ಬದುಕಿನ ಸಾಮರ್ಥ್ಯ ಇಲ್ಲವೆಂದೇ? ಇಲ್ಲ, ಬದಲಾಗಿ ನಿಜ ಸಂಗತಿಯೆಂದರೆ ನಾವೊಂದು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿಸುವ, ಬಡವರನ್ನು ಮತ್ತಷ್ಟು ಬಡವರಾಗಿಸುವ ವ್ಯವಸ್ಥೆಯಲ್ಲಿ ಸಿಲುಕಿಕೊಂಡಿದ್ದೇವೆ.

ಮೂರು ಭಿನ್ನ ಕಣ್ಣೋಟಗಳು

ಈ ಪ್ರಶ್ನೆಗಳನ್ನು ವಿವರವಾಗಿ ಪರಿಶೀಲಿಸುವ ಮೊದಲು ಈ ಪತ್ರಿಕೆಯಲ್ಲಿ ಕಳೆದ ಒಂದು ವರ್ಷದಲ್ಲಿ ಮತ್ತೆ-ಮತ್ತೆ ಹೇಳಿದ್ದನ್ನು ನೆನಪಿಸಿಕೊಳ್ಳೋಣ. ಅದೇನೆಂದರೆ, ಭಾರತದ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಸ್ವತಂತ್ರ ಭಾರತ ಹೇಗಿರಬೇಕು ಎಂಬ ಬಗ್ಗೆ ಮೂರು ವಿಭಿನ್ನ ಕಣ್ಣೋಟಗಳಿದ್ದವು.

ಇವುಗಳಲ್ಲಿ ಕಾಂಗ್ರೆಸ್‌ನ ಕಣ್ಣೋಟ ಪ್ರಾಬಲ್ಯ ಪಡೆದಿತ್ತು. ಒಂದು ಜಾತ್ಯಾತೀತ ಪ್ರಜಾಪ್ರಭುತ್ವ ಚೌಕಟ್ಟಿನೊಳಗೆ ಭಾರತವನ್ನೊಂದು ಸ್ವತಂತ್ರ ಬಂಡವಾಳಶಾಹಿ ದೇಶವಾಗಿ ಬೆಳೆಸುವುದು ಕಾಂಗ್ರೆಸ್‌ನ ಕಣ್ಣೋಟ. ಆದರೆ ಇದನ್ನು ಅವರು ಪಾಳೆಯ ಗಾರೀ ಶಕ್ತಿಗಳೊಂದಿಗೆ ಮೈತ್ರಿಯ ಮೂಲಕ ಸಾಧಿಸ ಹೊರಟರು.

ಈ ಕಾಂಗ್ರೆಸ್ ಕಣ್ಣೋಟಕ್ಕಿಂತ ಸಂಪೂರ್ಣ ಭಿನ್ನವಾದದ್ದು ಕಮ್ಯುನಿಸ್ಟ್ ಕಣ್ಣೋಟ - ಮಾನವನಿಂದ ಮಾನವನ ಶೋಷಣೆಯಿಂದ ಮುಕ್ತವಾದ ಒಂದು ಸ್ವತಂತ್ರ ಭಾರತದ ಕಣ್ಣೋಟವದು. ಕಮ್ಯುನಿಸ್ಟ್ ಪಕ್ಷ ಮತ್ತು ಅವರ ಲಕ್ಷಾಂತರ ಅನುಯಾಯಿಗಳು ಅಂಗೀಕರಿಸಿದ ಸಮಾಜವಾದಿ ಆದರ್ಶದಿಂದಾಗಿ ಕಾಂಗ್ರೆಸ್ ಜನಗಳ ಒತ್ತಡಕ್ಕೆ ಮಣಿದು ಭಾರತದ ರಾಜಕಾರಣಕ್ಕೆ ಒಂದು ಆಳವಾದ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಸ್ವರೂಪ ನೀಡಬೇಕಾಗಿ ಬಂತು.

ಈ ಎರಡೂ ಕಣ್ಣೋಟಗಳಿಂದ ತೀರಾ ಭಿನ್ನವಾದದ್ದು ಆರ್.ಎಸ್.ಎಸ್. ಕಣ್ಣೋಟ. ಅದು ಸ್ವತಂತ್ರ ಭಾರತದಲ್ಲಿ ಮತೀಯವಾದಿ 'ಹಿಂದೂರಾಷ್ಟ್ರ' ವನ್ನು ಸ್ಥಾಪಿಸುವ ಕಣ್ಣೋಟ. ಉನ್ಮತ್ತ ಕೋಮುವಾದದ ಮೇಲೆ ನಿಂತ ಈ ಕಣ್ಣೋಟದಿಂದಾಗಿ ಆರ್.ಎಸ್.ಎಸ್. ಸುಮಾರಾಗಿ ಸ್ವಾತಂತ್ರ್ಯ ಹೋರಾಟದಿಂದ ದೂರವೇ ಉಳಿಯಿತು. ಬ್ರಿಟಿಶ್ ಆಳರಸರು ಇದನ್ನು ಸಮಾಧಾನದಿಂದ ಗಮನಿಸಿದರೆ, ಸ್ವತಃ ಆರ್.ಎಸ್.ಎಸ್. ಮುಖಂಡರಾದ ನಾನಾಜಿ ದೇಶ್‌ಮುಖ್ 'ಆರ್.ಎಸ್.ಎಸ್. ಒಂದು ಸಂಘಟನೆಯಾಗಿ ವಿಮೋಚನಾ ಹೋರಾಟದಲ್ಲಿ ಏಕೆ ಭಾಗವಹಿಸಲಿಲ್ಲ?" ಎಂದು ಒಂದೊಮ್ಮೆ ಪ್ರಶ್ನೆ ಕೇಳುವಂತಾಯಿತು.

ಇಷ್ಟೇ ಅಲ್ಲ, ಆರ್.ಎಸ್.ಎಸ್. ಸದಾ ಬ್ರಿಟಿಶರ ಬೆಂಬಲಕ್ಕೆ ನಿಂತು ಸಂಸ್ಥಾನಗಳ ರಾಜರುಗಳೊಡನೆ ಕೈ ಮಿಲಾಯಿಸಿತು. ಭಾರತದೊಡನೆ ಸೇರಿಕೊಳ್ಳಲು ನಿರಾಕರಿಸಿದ ಕಾಶ್ಮೀರದ ಮಹಾರಾಜ ಹರಿಸಿಂಗ್ ಇಂತಹ ಒಬ್ಬ ರಾಜ. ತಮಾಷೆಯ ಸಂಗತಿಯೆಂದರೆ ಇಂತಹ ಶಕ್ತಿಗಳೇ ಈಗ ಸ್ವಾತಂತ್ರ್ಯ ಸುವರ್ಣ ಜಯಂತಿ ಆಚರಣೆಗಳ ಸಮಾಪನ ಸಮಾರಂಭಗಳಲ್ಲಿ ಅಧ್ಯಕ್ಷತೆ ವಹಿಸಿವೆ. ಈ ಬಗ್ಗೆ ನಂತರ ನೋಡೋಣ.

ಮೂಲಭೂತ ಬದಲಾವಣೆಗಳನ್ನು ತಡೆದಿಟ್ಟ ಕಣ್ಣೋಟ

ನಿರೀಕ್ಷಿಸಿದಂತೆ ಕಾಂಗ್ರೆಸ್ ಸ್ವಾತಂತ್ರ್ಯಾನಂತರ ತನ್ನ ಕಣ್ಣೋಟವನ್ನು ಜಾರಿಗೊಳಿಸಲಾರಂಭಿಸಿತು. ಆದರೆ ಭೂಮಾಲಕತ್ವದೊಂದಿಗೆ ಮೈತ್ರಿಯಿಂದಾಗಿ ಭಾರತದ ಭವಿಷ್ಯದ ದೃಷ್ಟಿಯಿಂದ ನಿರ್ಣಾಯಕವಾಗಿದ್ದ ಆಮೂಲಾಗ್ರ ಭೂಸುಧಾರಣೆಗೆ ತಡೆಬಂತು. ಭೂಮಾಲಕರು ಆಳುವ ವರ್ಗ ಮೈತ್ರಿಯ ಭಾಗವಾಗಿದ್ದರಿಂದ ಜನಗಳ ಒತ್ತಡದಿಂದ ಅಂಗೀಕರಿಸಿದ ಭೂಸುಧಾರಣೆಗಳು ಕಾಗದದ ಮೇಲೆಯೇ ಉಳಿದವು. ಇದರಿಂದಾಗಿ ತ್ವರಿತ ಕೈಗಾರೀಕರಣಕ್ಕೆ ಅಗತ್ಯವಾದ ಮಾರುಕಟ್ಟೆಯ ವಿಸ್ತರಣೆಯಾಗಲಿಲ್ಲ. ಆಮೂಲಾಗ್ರ ಭೂಸುಧಾರಣೆಗಳ ಜಾರಿಯಿಂದ ದಾರಿದ್ರ್ಯದಲ್ಲಿದ್ದ ಗ್ರಾಮೀಣ ಬಡಜನರ ಪರಿಸ್ಥಿತಿ ಗಮನಾರ್ಹವಾಗಿ ಸುಧಾರಿಸು ವುದಷ್ಟೇ ಅಲ್ಲ, ಕೃಷಿಯಲ್ಲಿ ಅಪಾರ ಉತ್ಪಾದಕ ಶಕ್ತಿಗಳನ್ನು ಬಿಡುಗಡೆ ಮಾಡಿ ಇಡೀ ದೇಶಕ್ಕೆ ಆಹಾರ ಒದಗಿಸಿ, ತ್ವರಿತ ಕೈಗಾರಿಕೀಕರಣವನ್ನು ಬೆಳೆಸುವಷ್ಟು ಮಿಗುತೆಯಾಗುತ್ತಿತ್ತು. ಆದರೆ ಭೂಸುಧಾರಣೆಗಳನ್ನು ಜಾರಿ ಮಾಡದೆ ಕಾಂಗ್ರೆಸ್ ಇಂತಹ ಸಾಧ್ಯತೆಗೆ ಬಾಗಿಲು ಮುಚ್ಚಿತು. ಆ ಮೂಲಕ ದೇಶ ಒಂದು ಸೀಮಿತ ಮಾರುಕಟ್ಟೆ ಮಾತ್ರ ಕಾಣುವಂತಾಯಿತು.

ಕಾಂಗ್ರೆಸ್ ಕಣ್ಣೋಟ ತಂದ ದುಷ್ಪರಿಣಾಮಗಳು

ಇಂತಹ ಪರಿಸ್ಥಿತಿಗಳಲ್ಲಿ ತ್ವರಿತ ಕೈಗಾರೀಕರಣಕ್ಕೆ ಹಿಡಿದ ದಾರಿಯೆಂದರೆ ಒಂದೆಡೆ ರಫ್ತು ಹೆಚ್ಚಿಸುವುದು, ಇನ್ನೊಂದೆಡೆ ಶ್ರೀಮಂತರ ಭೋಗ ವಸ್ತುಗಳ ಬೇಡಿಕೆಯ ಪೂರೈಕೆ. ಇವೆರಡಕ್ಕೂ ಬೇಕಾದ ತಂತ್ರಜ್ಞಾನ ಭಾರತದ ಬಳಿಯಿರಲಿಲ್ಲ. ಅದನ್ನು ಬೇರೆಡೆಯಿಂದ ಪಡೆಯಲು ವಿದೇಶೀ ವಿನಿಮಯ ಬೇಕು. ಇದಕ್ಕಾಗಿ ಭಾರೀ ಐಎಂಎಫ್ ಸಾಲಕ್ಕೆ ಮೊರೆ ಹೋಗಬೇಕಾಯಿತು. ಅದಕ್ಕೆ ಪ್ರತಿಯಾಗಿ ಅದರ ಕಠಿಣ ಶರತ್ತುಗಳಿಗೆ ಒಪ್ಪಬೇಕಾಯಿತು. ಸೋವಿಯತ್ ಒಕ್ಕೂಟದ ಕುಸಿತದಿಂದ ಬದಲಾದ ಜಾಗತಿಕ ಸನ್ನಿವೇಶ ಹಾಗೂ ಸೋವಿಯತ್ ಒಕ್ಕೂಟ ನಾಲ್ಕು ದಶಕಗಳ ಕಾಲ ಒದಗಿಸಿದ ನಿಸ್ವಾರ್ಥ ನೆರವು ಬತ್ತಿಹೋದದ್ದರಿಂದ ಆರ್ಥಿಕ ಉದಾರೀಕರಣದ ಪ್ರಕ್ರಿಯೆ ತೀವ್ರಗೊಂಡಿತು.

ಈ ನೀತಿಗಳ ದುಷ್ಪರಿಣಾಮಗಳ ಬಗ್ಗೆ ನಮಗೆ ತಿಳಿದೇ ಇದೆ. ಇಲ್ಲಿ ಈ ನೀತಿಗಳು ದೇಶದ ಸಾರ್ವಭೌಮತೆಯನ್ನು ಒತ್ತೆಯಿಟ್ಟು ದೇಶವನ್ನು ಸಾಲಬಲೆಯತ್ತ ತಳ್ಳಿವೆ, ಇನ್ನೊಂದೆಡೆ ಜನಸಮೂಹಗಳ ತಲೆಯ ಮೇಲೆ ಅಭೂತಪೂರ್ವ ಹೊರೆ ಹಾಕಿವೆ ಎಂದು ಹೇಳಿದರಷ್ಟೆ ಸಾಕು. ಹೀಗೆ ಕಾಂಗ್ರೆಸ್ ಕಣ್ಣೋಟ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರಾಗಿಸುವ ಬಡವರನ್ನು ಇನ್ನಷ್ಟು ಬಡವರಾಗಿಸುವ ಶೋಷಣೆಯ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸಿತು.

ಭೂಮಾಲಕತ್ವದೊಂದಿಗೆ ಮೈತ್ರಿಯ ಇನ್ನೊಂದು ಅಂಶವು ಪ್ರಸ್ತುತ ಸನ್ನಿವೇಶದ ಸೃಷ್ಟಿಯಲ್ಲಿ ಬಹಳಷ್ಟು ಕಾರಣವಾಗಿದೆ. ಈ ಮೈತ್ರಿಯಿಂದಾಗಿ ಪಾಳೆಯಗಾರಿಯ ಪಳೆಯುಳಿಕೆಗಳನ್ನು ನಿರ್ಮೂಲನ ಮಾಡಲಾಗಲಿಲ್ಲ. ಇದರರ್ಥ ಆ ವ್ಯವಸ್ಥೆಯೊಂದಿಗೆ ಉಂಟಾದ ಸಾಮಾಜಿಕ ಪ್ರಜ್ಞೆ ಅಂದರೆ ಜಾತಿ-ಮತಗಳ ಪ್ರಾಬಲ್ಯದ ಸಾಮಾಜಿಕ ಪ್ರಜ್ಞೆ ಬದಲಾಗಲಿಲ್ಲ. ಕಳೆದ ಕೆಲವು ವರ್ಷಗಳಿಂದ ಕೆಲವು ಆಳುವ ವರ್ಗದ ರಾಜಕೀಯ ಪಕ್ಷಗಳು ಇವೆರಡನ್ನೂ ತಮ್ಮ ರಾಜಕೀಯ ಗುರಿ ಸಾಧನೆಗಾಗಿ ಬಳಸಿಕೊಂಡು ದೇಶದ ಬಹುಸ್ವರೂಪದ ಸಾಮಾಜಿಕ ಹಂದರಕ್ಕೆ ಬೆದರಿಕೆಯೊಡ್ಡಿವೆ. ಕೋಮುವಾದಿ ಶಕ್ತಿಗಳು ಈ ಸನ್ನಿವೇಶದಲ್ಲಿ ಬಹಳಷ್ಟು ರಾಜಕೀಯ ಲಾಭ ಗಿಟ್ಟಿಸಿ ಸಮಾಜದಲ್ಲಿ ವಿಷ ಹಾಗೂ ದ್ವೇಷ ಹರಡಿಸಿ ಸಾವಿರಾರು ಮುಗ್ಧ ಜೀವಿಗಳ ಬಲಿ ತಗೊಂಡಿವೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಕಾಂಗ್ರೆಸ್ ಭಾರತದ ರಾಜಕಾರಣಕ್ಕೆ ಜಾತ್ಯಾತೀತ ಪ್ರಜಾಪ್ರಭುತ್ವ ಹಾಗೂ ಒಕ್ಕೂಟವಾದೀ ಚೌಕಟ್ಟನ್ನು ಅಂಗೀಕರಿಸಿದ್ದು ಕೂಡಾ ಸಾರ್ವಜನಿಕ ಒತ್ತಡಗಳಿಂದಾಗಿ, ಜನಗಳ ಆಕಾಂಕ್ಷೆಗಳಿಗೆ ಸ್ಪಂದಿಸಿದ್ದರಿಂದಾಗಿ ಮಾತ್ರ. ಭಾರತದ ರಾಜ್ಯಗಳನ್ನು ಭಾಷಾವಾರು ಆಧಾರದಲ್ಲಿ ಮರುವಿಂಗಡಣೆ ಮಾಡಲು ಅದು ಒಪ್ಪಿಕೊಳ್ಳಬೇಕಾದರೆ ದೊಡ್ಡ ಜನಾಂದೋಲನವೇ ಬೇಕಾಯಿತು. ವಾಸ್ತವವಾಗಿ ಭಾರತ ಹಲವು ದೇಶೀ ಗುಂಪುಗಳಿರುವ ದೇಶ ಎಂದು ಗುರುತಿಸಿ ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ ಮತ್ತಿತರ ಕಡೆ ಹೋರಾಟಗಳನ್ನು ಆರಂಭಿಸಿ ಒಕ್ಕೂಟ ತತ್ವಕ್ಕೆ ಒಂದು ಸ್ವರೂಪ ನೀಡಿದ್ದು ಕಮ್ಯುನಿಸ್ಟರೇ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಆದ್ದರಿಂದ ಜಾತ್ಯಾತೀತತೆ, ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವಕ್ಕೆ ಕಾಂಗ್ರೆಸ್ ಎಂದೂ ದೃಢವಾಗಿ ಬದ್ಧವಾಗಿರಲಿಲ್ಲ. ಈ ಬದ್ಧತೆ ಎಷ್ಟು ಟೊಳ್ಳಾಗಿತ್ತು ಎಂಬುದು ಕೋಮುವಾದಿ ಶಕ್ತಿಗಳೊಂದಿಗೆ ಅದರ ರಾಜಿ, ತುರ್ತುಪರಿಸ್ಥಿತಿಯ ಸಮಯದಲ್ಲಿ ಪ್ರಜಾಪ್ರಭುತ್ವವನ್ನು ಕೈಬಿಡಲು ಅದು ಸಿದ್ಧವಾದದ್ದು, ಕೇಂದ್ರ-ರಾಜ್ಯ ಸಂಬಂಧಗಳನ್ನು ಬುಡಮೇಲು ಮಾಡುವ ಅವರ ಪ್ರಯತ್ನ ಹಾಗೂ ಏಕ ಘಟಕ ವ್ಯವಸ್ಥೆ ತರುವತ್ತ ಅದರ ಪ್ರಯತ್ನದಲ್ಲಿ ಕಾಣಬಂದಿದೆ.

ತಿರಸ್ಕೃತ ಕಣ್ಣೋಟದ ಕೈಯಲ್ಲಿ ಆಡಳಿತ ಸೂತ್ರ

ಆದರೆ ಕೋಮುವಾದಿ ಶಕ್ತಿಗಳು ಜಾತ್ಯಾತೀತ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ಈಗ ನಡೆಸಿರುವ ಆಕ್ರಮಣ ಇನ್ನಷ್ಟು ಅಪಾಯಕಾರಿಯಷ್ಟೇ ಅಲ್ಲ, ಕಳೆದ 50 ವರ್ಷಗಳಲ್ಲಿ ಭಾರತೀಯ ಜನ ಸಾಧಿಸಿದ್ದೆಲ್ಲವನ್ನೂ ಕಳಕೊಳ್ಳುವ ಅಪಾಯವೊಡ್ಡಿದೆ. ಬಿಜೆಪಿ ನೇತೃತ್ವದ ಸರಕಾರದ ನಾಲ್ಕು ತಿಂಗಳ ಆಳ್ವಿಕೆಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಹರಡುತ್ತಿರುವ ಶುದ್ಧ ದ್ವೇಷ, ಬಾಬ್ರಿಮಸೀದಿ ಧ್ವಂಸದ ನಂತರ ಮುಂಬೈಯಲ್ಲಿ ನಡೆದ ಕೋಮುದಂಗೆಗಳನ್ನು ಕುರಿತ ಶ್ರೀಕೃಷ್ಣ ವರದಿಯನ್ನು ಮಹಾರಾಷ್ಟ್ರದ ಬಿಜೆಪಿ-ಶಿವಸೇನೆ ಸರಕಾರ ತಿರಸ್ಕರಿಸಿದ ಅಹಂಕಾರದ ನಿಲುವು, ವಿ.ಹೆಚ್.ಪಿ.- ಭಜರಂಗ ದಳ ಅಂತರ ಧರ್ಮೀಯ ಮದುವೆಗಳನ್ನೇ ಪ್ರಶ್ನಿಸುತ್ತಿರುವ ರೀತಿ ಇವೆಲ್ಲಾ ದೇಶದಲ್ಲಿ ಒಂದು ಅಪನಂಬಿಕೆ, ಅಭದ್ರತೆಯ ವಾತಾವರಣ ಸೃಷ್ಟಿಸಿವೆ.

ಇಲ್ಲಿ ಗುರುತಿಸಬೇಕಾದ ಸಂಗತಿಯೆಂದರೆ ಭಾರತದ ಐಕ್ಯತೆ ಮತ್ತು ಸಮಗ್ರತೆಯ ಬಲವಿರುವುದು ಭಾರತದ ವೈವಿಧ್ಯಮಯ ಸಾಮಾಜಿಕ ಹಂದರದ ಸಮಾನ ಅಂಶಗಳನ್ನು ಬಲಿಷ್ಠಗೊಳಿಸುವುದರಲ್ಲಿ. ಆದರೆ ಆರ್.ಎಸ್.ಎಸ್. ಮತ್ತು ಅದರ ವಿವಿಧ ಕೋಮುವಾದಿ ಫ್ಯಾಸಿಸ್ಟ್ ಅಂಗಗಳು ತದ್ವಿರುದ್ಧವಾಗಿ ವರ್ತಿಸುತ್ತಾ, ನಮ್ಮ ಶ್ರೀಮಂತ ವೈವಿಧ್ಯತೆಯ ಮೇಲೆ ಒಂದು ಸಮರೂಪತೆಯನ್ನು ಹೇರಿ ಆ ಮೂಲಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಮೂಲಕ್ಕೇ ಕೊಡಲಿಯೇಟು ಹಾಕುತ್ತಿವೆ.

ಹೀಗೆ 50 ವರ್ಷಗಳ ಸ್ವಾತಂತ್ರ್ಯದ ನಂತರ ಭಾರತೀಯ ಜನತೆ ಭಾರತೀಯ ಸಂವಿಧಾನವನ್ನು ಅಂಗೀಕರಿಸುವ ವೇಳೆಯಲ್ಲಿ ತಿರಸ್ಕರಿಸಿದ ಒಂದು ಕಣ್ಣೋಟ ಈಗ ಪ್ರಭುತ್ವಾಧಿಕಾರದ ಸೂತ್ರಗಳನ್ನು ಹಿಡಿದಿದೆ. ಇದೇ ವಿಭಿನ್ನ ಭಾಷೆಗಳು, ಸಂಸ್ಕೃತಿಗಳ ನೂರು ಕೋಟಿ ಜನಗಳನ್ನು ಒಟ್ಟುಗೂಡಿಸಲು ಅಗತ್ಯವಾದ ಜಾತ್ಯಾತೀತ ಪ್ರಜಾಪ್ರಭುತ್ವಕ್ಕೆ ಬಂದಿರುವ ಅತಿದೊಡ್ಡ ಅಪಾಯ. ಆದ್ದರಿಂದ ಕೋಮುವಾದಿ ಶಕ್ತಿಗಳು ಭಾರತೀಯ ಸ್ವಾತಂತ್ರ್ಯ ಆಂದೋಲನದ ಪರಂಪರೆಯನ್ನು ಕಿತ್ತುಕೊಂಡು ಕಳೆದ ಐದು ದಶಕಗಳಲ್ಲಿ ಭಾರತ ಕಟ್ಟಿ ಬೆಳೆಸಿದ ಸಕಾರಾತ್ಮಕ ಅಂಶಗಳನ್ನೆಲ್ಲಾ ನಾಶ ಮಾಡಲು ಬಿಡಬಾರದು.

ಇದು ಈ ಕೋಮುವಾದಿ ಶಕ್ತಿಗಳ ಆರ್ಥಿಕ ಅಜೆಂಡಾದ ಹಿನ್ನೆಲೆಯಲ್ಲಿ ಇನ್ನಷ್ಟು ಅತ್ಯಗತ್ಯ. ಈ ಆರ್ಥಿಕ ಅಜೆಂಡಾ ಈಗಿರುವ ಶೋಷಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಿ ಜನಗಳ ಮೇಲೆ ಇನ್ನಷ್ಟು ಸಂಕಟಗಳನ್ನು ಹೇರುತ್ತಿದೆ. ಈ ನೀತಿಗಳ ವಿರುದ್ಧ ಜನಗಳ ಅಸಂತೃಪ್ತಿಯ ದಾರಿ ತಪ್ಪಿಸಲು ಅತ್ಯಂತ ದುಷ್ಟ ಪ್ರಯತ್ನಗಳು ನಡೆದಿವೆ - ಇದಕ್ಕಾಗಿ ಕೋಮು ಧ್ರುವೀಕರಣವನ್ನು, ಪರಮಾಣು ರಾಷ್ಟ್ರಾಂಧತೆಯನ್ನು ಬಡಿದೆಬ್ಬಿಸಲಾಗುತ್ತಿದೆ.

ಇಂದೇನು ಮಾಡಬೇಕಾಗಿದೆ?

ಬಿಜೆಪಿ ಅಧಿಕಾರದಲ್ಲಿ ಮುಂದುವರಿಯುವುದೆಂದರೆ ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಒಂದು ಗಂಭೀರ ಅಪಾಯವೇ ಸರಿ. ಅಷ್ಟೇ ಅಲ್ಲ ನಮ್ಮ ಕೋಟಿಗಟ್ಟಲೆ ಜನಸಾಮಾನ್ಯರ ಬದುಕಿಗೆ ಮಾರಕ ಮತ್ತು ಶಾಂತಿ, ಜಾಗತಿಕ ನಿಶ್ಶಸ್ತ್ರೀಕರಣ ಹಾಗೂ ಅಲಿಪ್ತತೆಗೆ ಬದ್ಧವಾಗಿ ಅಂತರ್ರಾಷ್ಟ್ರೀಯ ರಂಗದಲ್ಲಿ ಗಳಿಸಿದ್ದ ಪ್ರತಿಷ್ಠೆಗೂ ಮಾರಕ. ಭಾರತದ ಸಾಮ್ರಾಜ್ಯಶಾಹಿ-ವಿರೋಧಿ ದಿಕ್ಕನ್ನು, ತತ್ವವನ್ನು ಬಲಗೊಳಿಸುವ ಬದಲು ಬಿಜೆಪಿ ಸರಕಾರ ಭಾರತವನ್ನು ಸಾಮ್ರಾಜ್ಯಶಾಹಿಯ ಬಾಲಂಗೋಚಿಯ ಮಟ್ಟಕ್ಕೆ ಇಳಿಸುತ್ತಿದೆ.

ಈ ಆಳುವ ವರ್ಗಗಳ ಪಕ್ಷಗಳು ಅನುಸರಿಸಿದ ಧೋರಣೆಗಳ ಫಲವಾಗಿ ಭಾರತೀಯ ಜನತೆ ಎದುರಿಸುತ್ತಿರುವ ಹತ್ತು ಹಲವು ಸಮಸ್ಯೆಗಳು ಹೆಚ್ಚುತ್ತಾ ಸಾಗಿವೆ. ಆರ್ಥಿಕ ಹೊರೆ ಹೆಚ್ಚುತ್ತಿದೆ. ಸಾಮಾಜಿಕ ವೈಷಮ್ಯ ಹೆಚ್ಚುತ್ತಿದೆ. ಪ್ರಾದೇಶಿಕ ಸಂಕುಚಿತತೆ ಹೆಚ್ಚುತ್ತಿದೆ. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿದೆ. ಪ್ರಜಾಪ್ರಭುತ್ವ ಸಂಸ್ಥೆಗಳು ದುರ್ಬಲಗೊಳ್ಳುತ್ತಿವೆ, ರಾಜಕೀಯದಲ್ಲಿ ನೈತಿಕತೆ ಅವನತಿಗೊಳ್ಳುತ್ತಿದೆ, ರಾಜಕೀಯದ ಅಪರಾಧೀಕರಣ, ಅಧಿಕಾರಶಾಹಿ ದರ್ಪ ಹೆಚ್ಚುತ್ತಿದೆ. ಪೋಲೀಸ್ ಬರ್ಬರತೆ ಹೆಚ್ಚುತ್ತಿದೆ. ಇವೆಲ್ಲಕ್ಕೂ ಹೆಚ್ಚಾಗಿ ಆರ್ಥಿಕ ಶೋಷಣೆ ತೀವ್ರಗೊಳ್ಳುತ್ತಿದೆ.

ಇಂತಹ ಎಲ್ಲಾ ಸಂಕಟಗಳಿಂದ ಭಾರತೀಯ ಜನತೆಗೆ ವಿಮೋಚನೆ ದೊರೆಯಬೇಕಾದರೆ ಅದು ಎಡ ಕಣ್ಣೋಟದಿಂದ ಮಾತ್ರ ಸಾಧ್ಯ. ಅಪೂರ್ಣಗೊಂಡಿರುವ ಕಾರ್ಷಕ ಕ್ರಾಂತಿಯನ್ನು ಪೂರ್ಣಗೊಳಿಸಿ, ಸಾಮ್ರಾಜ್ಯಶಾಹಿಯ ಮೇಲೆ ಅವಲಂಬನೆಯ ಪ್ರಕ್ರಿಯೆಯನ್ನು ಬದಲಿಸಿ, ಭಾರತೀಯ ಜನತೆಗೆ ಇದುವರೆಗೆ ಸಾಧಿಸಿದ್ದನ್ನು ಉಳಿಸಿ ಬೆಳೆಸಿ, ಆ ತಳಪಾಯದ ಮೇಲೆ ಎಲ್ಲಾ ರೀತಿಯ ಶೋಷಣೆಗಳಿಂದ ಮುಕ್ತವಾದ ಒಂದು ಸಮಾಜವನ್ನು ಕಟ್ಟಲು ಈ ಎಡ ಕಣ್ಣೋಟದಿಂದ ಮಾತ್ರ ಸಾಧ್ಯ.

ಪುಟ 7

ಪ್ರವಾಹ ಸಂತ್ರಸ್ತರಿಗೆ ಗುಂಡೇಟಿನ ಪರಿಹಾರ!

ಪ್ರಕೃತಿ ವಿಕೋಪದಿಂದ ಜನರ ಸಂಕಷ್ಟ ಒಂದೆಡೆ! ಇದಕ್ಕೆ ಸೂಕ್ತ ಪರಿಹಾರ ಕೊಡಿ ಎಂದು ಕೇಳಿದ ಜನತೆಯ ಮೇಲೆ ಗುಂಡಿನ ಮಳೆ; ಐದು ಸಾವು!! ಇವೆರಡರ ಮಧ್ಯೆ ಪ್ರವಾಹ ಪರಿಹಾರಕ್ಕಾಗಿ ಸಮಿತಿಯನ್ನು ರಾಜ್ಯಪಾಲರ ನೇತೃತ್ವದಲ್ಲಿ ರಚಿಸಬೇಕೋ, ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ರಚಿಸಬೇಕೋ ಎಂಬ ವಿವಾದ ಬೇರೆ!!!

ಇವೆಲ್ಲವೂ ಸದ್ಯ ಬಿಹಾರ ಕಾಣುತ್ತಿರುವ ವಿದ್ಯಮಾನಗಳು.

ರಾಜ್ಯದಲ್ಲಿ ಮಳೆಯ ಪ್ರಕೋಪ ಇನ್ನೂ ಕಡಿಮೆಯಾಗಿಲ್ಲ. ಎಡೆಬಿಡದೆ ಸುರಿದ ಮಳೆ ಪ್ರವಾಹಕ್ಕೆ ಇದುವರೆಗೆ 150 ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಸಾವಿರಾರು ಜನರು ತಾವೆ ಊರು ಬಿಟ್ಟು ಹೋಗಿದ್ದಾರೆ. ಲಕ್ಷಾಂತರ ಜನರು ಜಲಾವೃತರಾಗಿದ್ದಾರೆ.

ಉತ್ತರ ಬಿಹಾರವನ್ನು ಕಾಡಿದ ಅತಿವೃಷ್ಟಿ ಯಿಂದ ನೂರಾರು ಕೋಟಿ ರೂಪಾಯಿಗಳ ಫಸಲು ಹಾಳಾಗಿಹೋಗಿದೆ. ಲೆಕ್ಕವಿಲ್ಲದಷ್ಟು ಮನೆಗಳು ಜಾನುವಾರುಗಳು ಕೊಚ್ಚಿ ಹೋಗಿವೆ. ಆದರೆ ಬಿಹಾರದ ಆರ್.ಜೆ.ಡಿ ಸರಕಾರ ಮತ್ತು ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಜನರ ಸಂಕಷ್ಟವನ್ನು ಕಡಿಮೆ ಮಾಡಲು ನಿಷ್ಕಾಳಜಿ ತೋರುತ್ತಿರುವುದು ತೀರಾ ವಿಷಾದದ ಸಂಗತಿ. ರಾಜ್ಯದ 23 ಜಿಲ್ಲೆಗಳಲ್ಲಿ ಹಾವಳಿ ಎಬ್ಬಿಸಿರುವ ಪ್ರವಾಹ ಪೀಡಿತರಿಗೆ ಸೂಕ್ತ ಪರಿಹಾರ ಒದಗಿಸುವ ಬದಲು ಆ ನಿಟ್ಟಿನಲ್ಲಿ ಚಳುವಳಿ ನಡೆಸುತ್ತಿದ್ದ ಜನರ ಮೇಲೆ ರಾಬ್ಡಿದೇವಿ ಸರಕಾರ ಗೋಲಿಬಾರ್ ನಡೆಸಿ ಐದು ಜನರನ್ನು ಕೊಂದಿದೆ. ಸತ್ತವರಲ್ಲಿ ಮಾಜಿ ಶಾಸಕ ರಾಮಚರಿತ ರಾಯ್ ಅವರೂ ಸೇರಿದ್ದಾರೆ.

ಪ್ರವಾಹ ಸಂತ್ರಸ್ತರಿಗೆ ಪರಿಹಾರ ಒದಗಿಸುವಂತೆ ಒತ್ತಾಯಿಸಿ ಆಗಸ್ಟ್ 11 ರಂದು ಸೀತಾಮರಿ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರದರ್ಶನ ನಡೆಸುತ್ತಿದ್ದ ಜನರ ಮೇಲೆ ಪೋಲಿಸರು ಯಾವುದೇ ಪ್ರಚೋದನೆ ಹಾಗೂ ಮುನ್ನೆಚ್ಚರಿಕೆ ಇಲ್ಲದೆ ಗುಂಡು ಹಾರಿಸಿದಾಗ ಐದು ಜನರು ಸಾವನಪ್ಪಿದರು. ಜನತಾದಳ ಈ ಪ್ರದರ್ಶನವನ್ನು ಏರ್ಪಡಿಸಿತ್ತು.

ನ್ಯಾಯ ಕೇಳಿದ ಜನರ ಮೇಲೆ ಆರ್.ಜೆ.ಡಿ ಸರಕಾರ ನಡೆಸಿದ ಈ ದೌರ್ಜನ್ಯಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಸಿ.ಪಿ.ಐ(ಎಂ) ಸಹಿತ ಅನೇಕ ಪಕ್ಷಗಳು ಬಂದ್ ಆಯೋಜಿಸಿ ದಬ್ಬಾಳಿಕೆಗೆ ತಮ್ಮ ಪ್ರತಿಭಟನೆಯನ್ನು ದಾಖಲಿಸಿವೆ.

ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಪರಿಹಾರ ಸಮಿತಿಯನ್ನು ರಚಿಸಬೇಕೆಂಬ ಪ್ರಸ್ತಾವವೊಂದನ್ನು ಸರಕಾರ ಈ ಮಧ್ಯೆ ತಳ್ಳಿಹಾಕಿದ್ದು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲೇ ಸಮಿತಿ ರಚಿಸುವ ನಿರ್ಧಾರ ಕೈಗೊಂಡಿದೆ. ಈ ವಿವಾದ ಸಂತ್ರಸ್ತ ಜನತೆಗೆ ಶೀಘ್ರ ಪರಿಹಾರ ಒದಗಿಸುವ ಪ್ರಕ್ರಿಯೆಗೆ ಅಡ್ಡಿ ಉಂಟು ಮಾಡಲಿದೆ.

ಸಿಪಿಐ(ಎಂ) ಖಂಡನೆ

ಪ್ರವಾಹ ಪೀಡಿತ ಜನತೆಯ ಕಾರ್ಪಣ್ಯಕ್ಕೆ ಕೇಂದ್ರ ಸರಕಾರ ಯಾವುದೇ ರೀತಿಯಲ್ಲಿ ಸ್ಪಂದಿಸದೆ ಇರುವುದನ್ನು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಟೀಕಿಸಿದೆ. ಪರಿಹಾರ ಹಾಗೂ ಪುನರ್‌ವಸತಿ ಗಾಗಿ ರಾಜ್ಯ ಸರಕಾರ ಸಾಕಷ್ಟು ಕ್ರಮ ಕೈಗೊಳ್ಳದಿರುವುದನ್ನು ಪಕ್ಷ ಕಟುವಾಗಿ ಖಂಡಿಸಿದೆ. ಪರಿಹಾರ ಕಾರ್ಯಾಚರಣೆ ಯಲ್ಲಿ ಭ್ರಷ್ಟಾಚಾರ ತಡೆಗಟ್ಟುವ ಸರ್ವ ಪಕ್ಷಗಳ ಉಸ್ತುವಾರಿಯಲ್ಲಿ ಯುದ್ಧೋಪಾದಿ ಯಲ್ಲಿ ಪರಿಹಾರ ಹಾಗೂ ಪುನರ್‌ವಸತಿ ಕಾರ್ಯಾಚರಣೆ ನಡೆಯಬೇಕು ಎಂದು ಪಕ್ಷ ಹೇಳಿದೆ.

ಬಿಹಾರದ ಅತಿವೃಷ್ಟಿ ಪರಿಹಾರಕ್ಕಾಗಿ ಕೇಂದ್ರ ಸರಕಾರ ರಾಜ್ಯಕ್ಕೆ 500 ಕೋಟಿ ರೂಪಾಯಿ ನೆರವನ್ನು ನೀಡಬೇಕೆಂದು ರಾಜ್ಯಸಮಿತಿ ಒತ್ತಾಯಿಸಿದೆ.

ಸಂತ್ರಸ್ತರಿಗಾಗಿ ಬಟ್ಟೆ, ಔಷಧಿ, ಆಹಾರ ಸಾಮಗ್ರಿಗಳನ್ನು ಸಂಗ್ರಹಿಸುವಂತೆ ಅದು ಪಕ್ಷದ ಘಟಕಗಳು ಹಾಗೂ ಸಾಮೂಹಿಕ ಸಂಘಟನೆಗಳಿಗೆ ಕರೆ ಕೊಟ್ಟಿದೆ.

ದೇಶದೊಳಗೆ

ವಿಶ್ವ

ವಸತಿಯೋಜನೆ ಶಿವಸೇನೆ- ಬಿಜೆಪಿ ಮಾತಿನ ಯುದ್ಧ

ಮಹಾರಾಷ್ಟ್ರದಲ್ಲಿ ಕೊಳೆಗೇರಿ ನಿವಾಸಿಗಳಿಗೆ ಮನೆ ಒದಗಿಸುವ ಸಂಬಂಧ ರೂಪಿಸಲಾಗಿರುವ ಹೊಸ ಯೋಜನೆ ಯೊಂದು ಆಳುವ ಶಿವಸೇನೆ-ಬಿಜೆಪಿ ಕೂಟದಲ್ಲಿ ಒಡಕನ್ನೇ ಹುಟ್ಟುಹಾಕಿದೆ.

ಯೋಜನೆಯ ಕಾರ್ಯಸಾಧ್ಯತೆಯನ್ನು ಬಿಜೆಪಿ ಪ್ರಶ್ನಿಸಿರುವುದರಿಂದ ಮೈತ್ರಿಕೂಟ ದಲ್ಲಿನ ಒಡಕು ಮತ್ತೊಮ್ಮೆ ಬಹಿರಂಗಕ್ಕೆ ಬಂದಿದೆ.

ಕೊಳಗೇರಿ ಬದಲಿ ಯೋಜನೆಯ ಅನುಷ್ಠಾನದ ಕಾರ್ಯಸಾಧ್ಯತೆಯನ್ನು ಬಿಜೆಪಿ ಶಾಸಕ ಕಿರೀಟ್ ಸೋಮಯ್ಯ ಪ್ರಶ್ನಿಸಿದ್ದಾರೆ. ಈ ವಿಚಾರದಲ್ಲಿ ಉಪಮುಖ್ಯಮಂತ್ರಿ ಗೋಪಿನಾಥ್ ಮುಂಡೆ (ಬಿಜೆಪಿ) ನಮ್ಮ ಜೊತೆಗಿದ್ದಾರೆ ಎಂದು ಕಿರೀಟ್ ಹೇಳಿಕೆ.

ಬಿಜೆಪಿ ಶಾಸಕನ ಈ ಸವಾಲಿಗೆ ವಸತಿ ಸಚಿವ ಸುರೇಶ್ ಜೈನ್ (ಶಿವಸೇನೆ) ಪ್ರತಿಸವಾಲು ಹಾಕಿದ್ದಾರೆ.

ಶಿವಸೇನೆಯ ಮಂತ್ರಿ ಈ ಯೋಜನೆ ಯನ್ನು ನಿರ್ವಹಿಸುತ್ತಿರುವುದಕ್ಕೆ ವಿರೋಧವೇ ಎಂಬುದು ಜೈನ್ ಪ್ರಶ್ನೆ. ಬಿಜೆಪಿಯ ನೀರಾವರಿ ಮತ್ತು ಲೋಕೋಪಯೋಗಿ ಖಾತೆ ಸಚಿವರು ಕೃಷ್ಣಾಕಣಿವೆ ನಿಗಮ ಹಾಗೂ ರಸ್ತೆ ನಿರ್ಮಾಣಕ್ಕಾಗಿ ಬಾಂಡ್‌ಗಳ ಮೂಲಕ ಹಣ ಸಂಗ್ರಹಿಸುತ್ತಿದಾಗ ಅದರ ಕಾರ್ಯಸಾಧ್ಯತೆಗಳ ಬಗ್ಗೆ ಪ್ರಶ್ನೆಗಳನ್ನೇಕೆ ಎತ್ತಲಿಲ್ಲ ಎಂದೂ ಜೈನ್ ಬಿಜೆಪಿಗೆ ಪ್ರಶ್ನೆ ಹಾಕಿದ್ದಾರೆ.

ಶಾಸಕ ಕಿರೀಟ್ ವಿರುದ್ಧ ಬಾಯಿಗೆ ಬಂದಂತೆ ಮಾತನಾಡಿರುವ ಸುರೇಶ ಜೈನ್ ಕ್ಷಮೆ ಕೇಳದಿದ್ದರೆ ಅವರನ್ನು ಸಚಿವ ಸ್ಥಾನದಿಂದ ಕಿತ್ತುಹಾಕಬೇಕು ಎಂದು ಬಿಜೆಪಿ ಒತ್ತಾಯಿಸಿದೆ. ಅದರಿಂದ ಉಭಯ ಪಕ್ಷಗಳ ಸಂಬಂಧ ಬಿಗಡಾಯಿಸಿದೆ.

ಶ್ರೀಕೃಷ್ಣ ಆಯೋಗದ ವರದಿಯ ಹಿನ್ನೆಲೆಯಲ್ಲಿ ಪೂರ್ಣವಾಗಿ ಗಲಿಬಿಲಿಗೊಂಡಿ ರುವ ಸೇನೆ-ಬಿಜೆಪಿ ಕೂಟ ಸರಕಾರ ಪ್ರತಿಪಕ್ಷಗಳ ದಾಳಿಯಿಂದ ಬಸವಳಿದಿರುವ ಜತೆಗೆ ಸ್ವತಃ ಆಂತರಿಕ ಕಚ್ಚಾಟದಿಂದ ಅಪಹಾಸ್ಯಕ್ಕೀಡಾಗುತ್ತಿದೆ.

ಇದರಿಂದಾಗಿ ದಿಕ್ಕು ಕಾಣದಂತಾಗಿರುವ ಶಿವಸೇನೆ ಮುಖ್ಯಸ್ಥ ಬಾಳಠಾಕ್ರೆ ಶಿವಸೇನೆಯ ಯಾವುದೇ ಮಂತ್ರಿ ಸುದ್ದಿಗೋಷ್ಠಿಗಳಲ್ಲಿ ಮಾತನಾಡಬಾರದು ಎಂದು ತಾಕೀತು ಮಾಡಿದ್ದಾರೆ. ಮೈತ್ರಿಕೂಟ ಸರಕಾರದ ಮುಖವನ್ನು ಉಳಿಸಿಕೊಳ್ಳಲಿಕ್ಕಾಗಿ ಅವರು ಭಾರೀ ಕಸರತ್ತು ನಡೆಸತೊಡಗಿದ್ದಾರೆ.

ಕಾದು ನೋಡಬೇಕು, ಇನ್ನೇನು ವಿದ್ಯಮಾನಗಳು ನಡೆಯುತ್ತವೆಯೋ ಎಂದು.

ಬಿಜೆಪಿ ಸರಕಾರದ ಮೇಲೆ ಜಯಲಲಿತಾರಿಂದಲೇ ಭ್ರಷ್ಟಾಚಾರದ ಆಪಾದನೆ!

ಬಿಜೆಪಿ ನೇತೃತ್ವದ ಕೇಂದ್ರ ಸರಕಾರಕ್ಕೆ ಅಖಿಲ ಭಾರತ ಅಣ್ಣಾ ಡಿ.ಎಂ.ಕೆ ರಂಗ ಬೆಂಬಲ ವಾಪಸು ಪಡೆಯಲಿಲ್ಲ ಎಂದು ಬಿಜೆಪಿ ನಿಟ್ಟುಸಿರು ಬಿಟ್ಟ ಬೆನ್ನಲ್ಲೇ ಎಡಿಎಂಕೆ ನಾಯಕಿ ಜಯಲಲಿತಾ ಸರಕಾರಕ್ಕೆ ಇನ್ನೊಂದು ಗುದ್ದು ಕೊಟ್ಟಿದ್ದಾರೆ.

ಕೇಂದ್ರ ಸರಕಾರ ಹಲವು ಪ್ರಮುಖ ಅಧಿಕಾರಿಗಳನ್ನು ಈಚೆಗೆ ವರ್ಗಮಾಡಿದ್ದು ಇದು ಭಾರೀ ವಿವಾದವನ್ನೇ ಸೃಷ್ಟಿಸಿದೆ. ಭ್ರಷ್ಟಾಚಾರದ ರಾಣಿಯೆಂಬ ಮಾತಿಗೆ ಅನ್ವರ್ಥವಾದಂಥ ಜಯಲಲಿತಾರ ಹಲವು ಪ್ರಕರಣಗಳ ತನಿಖೆ ನಡೆಸುತ್ತಿರುವ ಹಾಗೂ ಕಟ್ಟುನಿಟ್ಟಿನ ಅಧಿಕಾರಿ ಎಂದು ಖ್ಯಾತರಾದ ಅನುಷ್ಠಾನ ನಿರ್ದೇಶನಾಲಯದ ನಿರ್ದೇಶಕ ಎಂ.ಕೆ. ಬೆಜ್ ಬರೂವ ಹೀಗೆ ವರ್ಗಗೊಂಡ ಅಧಿಕಾರಿಗಳಲ್ಲಿ ಒಬ್ಬರು. ಕಂದಾಯ ಕಾರ್ಯದರ್ಶಿ ಎನ್.ಕೆ. ಸಿಂಗ್ ಇನ್ನೊಬ್ಬರು. ಜಯಲಲಿತಾರ ಹಲವು ಪ್ರಕರಣಗಳ ತನಿಖೆ ಇವರಿಬ್ಬರ ವ್ಯಾಪ್ತಿಗೆ ಬರುತ್ತಿದ್ದು ಜಯರ ಒತ್ತಡದಿಂದಲೇ ಇವರ ವರ್ಗಾವಣೆ ನಡೆದಿದೆ ಎಂಬ ಭಾವನೆ ಬಲವಾಗಿದೆ. ಈ ಹಿನ್ನೆಲೆಯಲ್ಲಿ ವಿಶೇಷವಾಗಿ ಬೆಜ್‌ಬರೂವ ಅವರ ವರ್ಗಕ್ಕೆ ರಾಜಕೀಯ ವಲಯದಲ್ಲಿ ತೀವ್ರ ಪ್ರತಿರೋಧ ವ್ಯಕ್ತವಾಗಿದೆ. ಸಿಪಿಐ(ಎಂ) ಕೂಡ ಈ ವರ್ಗಾವಣೆಯನ್ನು ಖಂಡಿಸಿದೆ.

ಉಳಿವಿಗಾಗಿ....

ಉಳಿವಿಗಾಗಿ ಹೆಣಗಾಡುತ್ತಿರುವ ಸರಕಾರವೊಂದರ ರಾಜಕೀಯ ಆತುರದ ಕ್ರಮ ಇದಾಗಿದೆ ಎಂದು ಪಕ್ಷ ವರ್ಣಿಸಿದೆ.

ರಾಜಕೀಯ ಒತ್ತಡಗಳಿಗೆ ಮಣಿಯದೆ ತಮ್ಮ ಈ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ನಿಭಾಯಿಸುತ್ತಿರುವ ಅಧಿಕಾರಿಯೊಬ್ಬರ ವಿರುದ್ಧದ ಕ್ರಮ ಇದಾಗಿದೆ ಎಂದು ಸಿಪಿಐ(ಎಂ) ಪಾಲಿಟ್‌ಬ್ಯೂರೊ ಹೇಳಿದೆ.

ಈ ರೀತಿಯಾಗಿ ಹುಟ್ಟಿದಾರಭ್ಯ ದಿಂದಲೂ ಅಸ್ಥಿರತೆ ಎದುರಿಸುತ್ತಿರುವ ಸರಕಾರ ಈ ವರ್ಗಾವಣೆ ವಿವಾದದಿಂದಾಗಿ ಇಕ್ಕಟ್ಟಿಗೆ ಸಿಲುಕಿದಾಗ ಪ್ರತಿಪಕ್ಷಗಳ ಟೀಕೆ ಗಳಿಗಿಂತ ಹೆಚ್ಚಾಗಿ ಸ್ವತಃ ಆಳುವ ಕೂಟದ ಒಂದು ಪ್ರಮುಖ ಮಿತ್ರಪಕ್ಷ ದಿಂದಲೇ ಅದೂ ಯಾರ ವಿರುದ್ಧ ಈ ಆರೋಪವಿತ್ತೊ ಅದೇ ಪಕ್ಷದ ನಾಯಕಿಯಿಂದ ಆಟಂ ಬಾಂಬ್‌ನಂಥ ಆರೋಪವೊಂದು ಸಿಡಿಯಿತು. ನನ್ನ ವಿರುದ್ಧ ಫೆರಾ ಉಲ್ಲಂಘನೆಯ ಪ್ರಕರಣಗಳೇನೂ ಇಲ್ಲ, ಬೆಜ್‌ಬರುವಾ ವರ್ಗದಲ್ಲಿ ನನ್ನ ಪಾತ್ರ ವೇನೂ ಇಲ್ಲ ಎಂದು ಎಐಎಡಿಎಂಕೆ ನಾಯಕಿ ಜಯಲಲಿತಾ ಹೇಳಿದ್ದಿರಲಿ ಅವರು ಅಷ್ಟಕ್ಕೇ ಸುಮ್ಮನಾದರೇ? ಇಲ್ಲ. ಸಂಬಂಧಪಟ್ಟ ಎಐಎಡಿಎಂಕೆ ಮಂತ್ರಿಗೆ ತಿಳಿಯದೆಯೇ ಇದು ನಡೆದಿದೆ ಎಂದು ಹೊರಗೆಡಹಿದರು. ಬೆಜ್‌ಬರೂವಾ ವರ್ಗಕ್ಕಾಗಿ ಪ್ರಧಾನಿ ವಾಜಪೇಯಿಗೆ ನಿಕಟದಾರ ವ್ಯಕ್ತಿಗಳಿಗೆ ಕೆಲವರು ಭಾರೀ ಪ್ರಮಾಣದ ಲಂಚ ನೀಡಿದ್ದಾರೆ ಎಂದೂ ಜಯಾ ಆಪಾದಿಸಿದರು. ಫೆರಾ ಉಲ್ಲಂಘನೆಯ ಪ್ರಕರಣಗಳನ್ನು ಎದುರಿಸುತ್ತಿರುವ ದೊಡ್ಡ ಪತ್ರಿಕಾ ಸಮೂಹವೊಂದರ ಮಾಲಿಕರು ಇದರಲ್ಲಿ ಭಾಗಿಯಾಗಿದ್ದಾರೆ ಎಂದೂ ಅವರು ಹೇಳಿದರು. ಸರಕಾರಕ್ಕೆ ಇದಕ್ಕಿಂತ ದೊಡ್ಡ ಮುಜುಗರ ಇನ್ನೇನು ಬೇಕು.

ವಾಜಪೇಯಿ ಸರಕಾರದ ಪ್ರಾಮಾಣಿಕತೆಯ (ತತ್ವಸಿದ್ಧಾಂತ ಮೊದಲೇ ಇಲ್ಲ, ಬಿಡಿ) ಬುಡಕ್ಕೆ ಏಟು ಕೊಟ್ಟ ಜಯಾರ ಈ ಆರೋಪ ಗಂಭೀರ ಬಿಕ್ಕಟ್ಟನ್ನು ಸೃಷ್ಟಿಸಿದ್ದು ಮಿತ್ರಪಕ್ಷದ ಧುರೀಣೆ ಮಾಡಿರುವ ಆರೋಪಗಳ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳು ಒತ್ತಾಯಿಸಿವೆ.

ಕೇಂದ್ರ ತನಿಖಾ ದಳ (ಸಿಬಿಐ) ದಿಂದಲೇ ತನಿಖೆ ನಡೆಸುವಂತೆ ಸ್ವತಃ ಜಯಲಲಿತಾರವರೇ ಒತ್ತಾಯಿಸಿರುವುದು ಇನ್ನೊಂದು ಮಹತ್ವದ ವಿದ್ಯಮಾನವಾಗಿದೆ.

ಈ ಲೇಖನವನ್ನು ಬರೆಯುವ ಹೊತ್ತಿಗೆ ಬಂದ ಸುದ್ದಿ ಪ್ರಕಾರ, ಆರೋಪಗಳ ಬಗ್ಗೆ ಲಭ್ಯವಿರುವ ಸಾಕ್ಷ್ಯಗಳನ್ನು ಸಲ್ಲಿಸುವಂತೆ ಪ್ರಧಾನಿ ವಾಜಪೇಯಿ ಎಡಿಎಂಕೆ ನಾಯಕಿಗೆ ಪತ್ರ ಬರೆದರು.

ಈ ಮಧ್ಯೆ ಬೆಜ್‌ಬರುವಾ ವರ್ಗಾವಣೆ ಪ್ರಶ್ನಿಸಿ ಸುಪ್ರಿಂಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯೊಂದನ್ನು ಹೂಡಲಾಗಿದೆ. ಆಗಸ್ಟ್ 18 ರಂದು ಇದರ ವಿಚಾರಣೆ ನಡೆಸಿದ ನ್ಯಾಯಪೀಠ ಹಲವು ಪ್ರಮುಖ ಪ್ರಕರಣಗಳನ್ನು ನಿಭಾಯಿಸುತ್ತಿದ್ದ ಅನುಷ್ಠಾನ ನಿರ್ದೇಶಕರನ್ನು ಈ ಹಂತದಲ್ಲಿ ವರ್ಗಾಯಿಸಿದ್ದಕ್ಕೆ ಆತಂಕ ವ್ಯಕ್ತಪಡಿಸಿದೆ.

ಹಿಂದಿನ ಸಂಚಿಕೆಗಳಲ್ಲಿ ವರದಿಯಾದಂತೆ ಆಗಸ್ಟ್ 6 ರಂದು ಕರ್ನಾಟಕವೂ ಸೇರಿದಂತೆ ದೇಶಾದ್ಯಂತ ಹಿರೋಶಿಮಾ ದಿನವನ್ನು ಈ ವರ್ಷ ವಿಶೇಷ ಮುತುವರ್ಜಿಯಿಂದ ಆಚರಿಸಲಾಯಿತು. ಕಲ್ಕತ್ತ, ನವದೆಹಲಿಗಳ ಬೃಹತ್ ಮೆರವಣಿಗೆಗಳಲ್ಲದೆ ಚೆನ್ನೈ, ತಿರುವನಂತಪುರ, ಮುಂಬೈ, ಪಾಟ್ನಾ, ಲಕ್ನೌ, ತ್ರಿಪುರಾದ ಹಲವೆಡೆ ಬಿಜೆಪಿಯ ಬಾಂಬುನೀತಿಯ ವಿರುದ್ಧ ಪ್ರತಿಭಟನೆ ವ್ಯಕ್ತಗೊಂಡವು. ತಿರುವನಂತಪುರದಲ್ಲಿ ಮೂರು ಗಂಟೆಗಳ ಕಾರ್ಯಕ್ರಮದಲ್ಲಿ ಸಾವಿರಾರು ಜನ ಭಾಗವಹಿಸಿದ್ದರು. 'ಹಿರೋಶಿಮಾದ ನೋವಲ್ಲಿ ಪಾಲುದಾರರು" ಎಂಬ ಬ್ಯಾನರ್ ಗಮನ ಸೆಳೆದಿತ್ತು. ಖ್ಯಾತ ಇತಿಹಾಸಕಾರ ಕೆ.ಎನ್.ಪಣಿಕ್ಕರ್ 'ಬಾಂಬನ್ನು ಎದುರಿಸಿ - ಇಲ್ಲವಾದರೆ ನಾಳೆಯಿರುವುದಿಲ್ಲ" ಎಂದು ಮಲೆಯಾಳಂನಲ್ಲಿ ಸಾಗುವ ಒಂದು ಪೋಸ್ಟರನ್ನು ಬಿಡುಗಡೆ ಮಾಡಿದರು. ಈ ರೀತಿಯ ಚಿತ್ರದಲ್ಲಿ ಪ್ರಖ್ಯಾತ ವ್ಯಂಗ್ಯಚಿತ್ರಕಾರ ಅಬು ಅಬ್ರಹಾಂ ಒಂದು ವ್ಯಂಗ್ಯ ಚಿತ್ರ ಬರೆಯುತ್ತಿರುವುದನ್ನು ಕಾಣಬಹುದು. 'ಅಭದ್ರತೆಯ ಮಂತ್ರಾಲಯ'ದಿಂದ ಭವಿಷ್ಯದ ನಾಗರಿಕರಾದ ಮಕ್ಕಳಿಗೆ ಬಾಂಬಿನ 'ಉಡುಗೋರೆ'! - ಇದು ಈ ವ್ಯಂಗ್ಯ ಚಿತ್ರದ ಸಾರ.



ಶ್ರೀ ಕೃಷ್ಣ ಆಯೋಗದ ವರದಿ
ಜಾತ್ಯತೀತ ಶಕ್ತಿಗಳ ಒಗ್ಗಟ್ಟಿನ ಮುನ್ನಡೆ

ಮುಂಬಯಿಯ ಕೋಮುಗಲಭೆಗಳ ಬಗ್ಗೆ ವಿಚಾರಣೆ ನಡೆಸಿದ ಶ್ರೀಕೃಷ್ಣ ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವಂತೆ ಒತ್ತಾಯಿಸುವ ಪ್ರಕ್ರಿಯೆಯಲ್ಲಿ ಅನೇಕ ಪ್ರತಿಪಕ್ಷಗಳು ಕೈಜೋಡಿಸಿವೆ. ಇದು ಜಾತ್ಯಾತೀತ ಶಕ್ತಿಗಳ ಒಗ್ಗಟ್ಟಿನ ಮುನ್ನಡೆಯಲ್ಲಿ ಒಂದು ಮಹತ್ವದ ಹೆಜ್ಜೆ ಎಂದು ರಾಜಕೀಯ ವಲಯದಲ್ಲಿ ಅಭಿಪ್ರಾಯ ಪಡಲಾಗಿದೆ.

ಅಯೋಧ್ಯೆಯ ಬಾಬರಿ ಮಸೀದಿ ನಾಶದ ಹಿನ್ನೆಲೆಯಲ್ಲಿ ಮುಂಬಯಿ ಮಹಾನಗರದಲ್ಲಿ ಭುಗಿಲೆದ್ದ ಕೋಮುವಾದದ ಬಗ್ಗೆ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀಕೃಷ್ಣ ನೇತೃತ್ವದ ಏಕ ಸದಸ್ಯ ಆಯೋಗ ಸಲ್ಲಿಸಿದ್ದ ವರದಿ ಮಹಾರಾಷ್ಟ್ರದ ಈಗಿನ ಆಳುವ ಶಿವಸೇನೆ ಬಿಜೆಪಿ ಕೂಟಕ್ಕೆ ಛೀಮಾರಿ ಹಾಕಿತ್ತು. ಇದನ್ನು ರಾಜ್ಯ ಸರಕಾರ ತಿರಸ್ಕರಿಸಿದೆ. ಇದರ ಬಗ್ಗೆ ಐಕ್ಯರಂಗದ ಕಳೆದೆರಡು ಸಂಚಿಕೆಗಳಲ್ಲಿ ವಿವರವಾಗಿ ಓದಿದ್ದೀರಿ.

ಕೋಮುವಾದಿ ಶಕ್ತಿಗಳಿಗೆ ಛೀಮಾರಿ ಹಾಕಿರುವ ಈ ವರದಿಯ ಅನುಷ್ಠಾನಕ್ಕೆ, ತಪ್ಪಿತಸ್ಥರ ಶಿಕ್ಷೆಗೆ ಪ್ರತಿಪಕ್ಷಗಳು ಒತ್ತಾಯಿಸಿದ್ದು ಈ ನಿಟ್ಟಿನಲ್ಲಿ ದೇಶವ್ಯಾಪಿ ಚಳುವಳಿ ನಡೆಸಲು ಮುಂದಾಗಿವೆ.

ಆಗಸ್ಟ್ 16 ರಂದು ನವದೆಹಲಿಯಲ್ಲಿ ಸೇರಿದ್ದ ಸಭೆಯಲ್ಲಿ ಕಾಂಗ್ರೆಸ್, ಸಮಾಜವಾದಿ ಪಕ್ಷ, ರಾಷ್ಟ್ರೀಯ ಜನತಾದಳ, ನ್ಯಾಷನಲ್ ಕಾನ್ಫರೆನ್ಸ್, ಸಮಾಜವಾದಿ ಜನತಾಪಾರ್ಟಿ (ಆರ್), ಜನತಾ ಪಕ್ಷ, ಮುಸ್ಲಿಂ ಲೀಗ್, ರಿಪಬ್ಲಿಕನ್ ಪಕ್ಷ ಹಾಗೂ ಪಕ್ಷೇತರ ಸಂಸತ್ ಸದಸ್ಯ ಬೂಟಾಸಿಂಗ್ ಹಾಜರಿದ್ದರು. ಈ ಸಭೆಯ ನಿರ್ಧಾರಕ್ಕೆ ಬೆಂಬಲ ಸೂಚಿಸುವ ಪತ್ರವನ್ನು ಸಿಪಿಐ(ಎಂ) ನೀಡಿದೆ.

ಸಭೆ ಕಾರ್ಯಯೋಜನೆಯೊಂದನ್ನು ರೂಪಿಸಿದೆ. ಅದರ ಪ್ರಕಾರ, ರಾಷ್ಟ್ರಪತಿಯವರನ್ನು ಭೇಟಿಮಾಡಿ ಮಹಾರಾಷ್ಟ್ರ ಸರಕಾರವನ್ನು ವಜಾ ಮಾಡುವಂತೆ ಕೋರಲಾಗುತ್ತದೆ.

ರಾಷ್ಟ್ರೀಯ ಭಾವೈಕ್ಯ ಮಂಡಳಿಯ ವಿಶೇಷ ಸಭೆಯನ್ನು ಕರೆಯುವಂತೆಯೂ ಒತ್ತಾಯಿಸಲಾಗುತ್ತದೆ.

ನಾಲ್ಕು ಮಹಾನಗರಗಳಲ್ಲಿ ಅಪರಾಧ ಪ್ರಮಾಣ-1997ರಲ್ಲಿ

	ಕೊಲೆ	ಕೊಲೆ ಯತ್ನ	ಅತ್ಯಾಚಾರ	ಮಹಿಳೆಯರಿಗೆ ಕಿರುಕುಳ	ಅಪಹರಣ	ಕಳವು	ದೊಂಬಿ
ದೆಹಲಿ	562	504	458	666	1344	22701	200
ಮುಂಬಯಿ	288	182	130	163	173	14282	161
ಚೆನ್ನೈ	90	144	28	119	113	595	91
ಕಲ್ಕತ್ತ	82	265	10	14	25	144	347

ದಕ್ಷಿಣಪೂರ್ವ ಏಶ್ಯದ ಆರ್ಥಿಕ ಬಿಕ್ಕಟ್ಟು ಎರಡನೇ ವರ್ಷಕ್ಕೆ

ಶರತ್ ಚಂದ್ರ

ದಕ್ಷಿಣ ಪೂರ್ವ ಏಶ್ಯದ ಆರ್ಥಿಕ ಬಿಕ್ಕಟ್ಟು ಎರಡನೇ ವರ್ಷಕ್ಕೆ ಕಾಲಿಟ್ಟರೂ ಯಾವುದೇ ಪರಿಹಾರ ಕಾಣದೆ ಇನ್ನೂ ಅಪಾಯಕಾರಿ ಹಂತಕ್ಕೆ ತಲುಪಿದೆ. ಕಳೆದ ವರ್ಷ ಜುಲೈ 2 ರಂದು ಥೈಲೆಂಡಿನ ಬಾಹ್ಟ್ ಅಪಮೌಲ್ಯದಿಂದ ತೀವ್ರವಾಗಿ ಆರಂಭವಾದ ಈ ಬಿಕ್ಕಟ್ಟು ಇನ್ನೂ ಆಳವಾಗಿದ್ದು ಜಾಗತಿಕ ಆರ್ಥಿಕ ಕುಸಿತಕ್ಕೆ ಕಾರಣವಾಗುವ ಎಲ್ಲಾ ಲಕ್ಷಣಗಳು ಕಾಣಿಸುತ್ತಿವೆ.

ಜಾಗತಿಕ, ಬಂಡವಾಳಶಾಹಿ ಅಭಿವೃದ್ಧಿಶೀಲ ದೇಶಗಳೂ 'ಆರ್ಥಿಕ ಹುಲಿ'ಗಳಾಗಲು ಸಾಧ್ಯ ಎಂದು ಮಾದರಿಯಾಗಿ ಹಿಡಿದಿದ್ದ ದಕ್ಷಿಣ-ಪೂರ್ವ ಏಶ್ಯಾ ಮಾದರಿ ಕುಸಿದು ಬಿದ್ದಿದೆ. ಈ ಮಾದರಿಯ ಮುಖ್ಯ ಉದಾಹರಣೆಗಳು ಹಾಗೂ ಆರ್ಥಿಕ ಹುಲಿಗಳೆನಿಸಿಕೊಂಡಿದ್ದ ದಕ್ಷಿಣ ಕೊರಿಯಾ, ತೈವಾನ್, ಮಲೇಶ್ಯಾ ಥೈಲೆಂಡ್ ಇಂಡೋನೇಶ್ಯಾ ಹಾಂಗ್‌ಕಾಂಗ್ ಮತ್ತು ಸಿಂಗಾಪೂರ್ ಇಲಿಗಳಾಗಿವೆ. ಈ ದೇಶಗಳು ಆರ್ಥಿಕ ಹುಲಿಗಳಾದ ದಾರಿಯೇ ಈಗಿನ ಬಿಕ್ಕಟ್ಟಿಗೆ ಮೂಲಕಾರಣ ಎಂಬುದು ಸ್ಪಷ್ಟವಾಗುತ್ತಿದೆ. ಈ ಎಲ್ಲಾ ಆರ್ಥಿಕಗಳು ಕೆಲವೇ ವರ್ಷಗಳ ಹಿಂದಿನವರೆಗೆ ಏರುತ್ತಿದ್ದ ತಲಾ ಆದಾಯದಿಂದ ಸಮೃದ್ಧ ದೇಶದ ಪೋಸು ಕೊಡುತ್ತಿದ್ದವು. ಆದರೆ ಆ ದೇಶಗಳ ಬಂಡವಾಳಶಾಹಿಗಳ ಒಂದು ಸಣ್ಣ ವಿಭಾಗ ದೇಶದ ಐಶ್ವರ್ಯದ ದೊಡ್ಡ ಭಾಗ ಹೊಂದಿದ್ದವು ಎಂಬುದನ್ನು ಮರೆಮಾಚುತ್ತಿದ್ದವು. ಈಗ ಆ ಆರ್ಥಿಕ ಬೆಳವಣಿಗೆ ಈ ದೇಶಗಳ ಆರ್ಥಿಕ ಕುಗ್ಗುವ ಸಾಧ್ಯತೆ ಇದೆ.

ಇಂಡೋನೇಶ್ಯಾ ಶೇ.13 ರಷ್ಟು, ಥೈಲೆಂಡ್ ಶೇಕಡಾ 6 ರಷ್ಟು, ದಕ್ಷಿಣ ಕೊರಿಯಾ ಶೇ 4 ರಷ್ಟು, ಮಲೇಶ್ಯಾ ಶೇಕಡಾ 2 ರಷ್ಟು, ಹಾಂಗ್‌ಕಾಂಗ್ ಶೇಕಡಾ 1.3 ರಷ್ಟು ಆರ್ಥಿಕ ಕುಗ್ಗುವ ಸಾಧ್ಯತೆ ಇದೆ.

ಈ ದೇಶಗಳ ಆರ್ಥಿಕ ಹುಲಿ ಮಾದರಿಯ ಮುಖ್ಯ ಅಂಶಗಳು ಅವನ್ನು ಈಗ ಕಾಡುತ್ತಿವೆ. ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಬಳಕೆಯಾಗುವ ವಸ್ತುಗಳ ಸಾಮೂಹಿಕ ಉತ್ಪಾದನೆ ಕಡಿಮೆ ವೆಚ್ಚದಲ್ಲಿ ಮಾಡಿ ರಫ್ತು ಮಾಡುವುದು ಈ ಮಾದರಿಯ ಮುಖ್ಯ ಲಕ್ಷಣವಾಗಿತ್ತು. ರಾಜಕೀಯ ಹಕ್ಕುಗಳನ್ನು ನಿರಾಕರಿಸಿದ ಸರ್ವಾಧಿಕಾರಿ ಸರ್ಕಾರಗಳು ಕಾರ್ಮಿಕ ವರ್ಗದ ಹಕ್ಕುಗಳನ್ನು ಕಿತ್ತುಕೊಂಡಿದ್ದವು. ಬಹುರಾಷ್ಟ್ರೀಯ ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ಅಲ್ಲಿ ಬಂಡವಾಳ ಹೂಡಲು ಇದು ಒಂದು ಮುಖ್ಯ ಶರತ್ತಾಗಿತ್ತು. ಪ್ರಜಾಪ್ರಭುತ್ವದ ಬಗ್ಗೆ ಎಷ್ಟೇ ಮಾತಾಡಿದರೂ ಈ ಸರ್ವಾಧಿಕಾರಿಗಳನ್ನು ಆ ದೇಶಗಳ ಮೇಲೆ ಹೇರಿದ ಜಗತ್ತಿನ ಬಂಡವಾಳಶಾಹಿಗೆ ಈ ದೇಶಗಳಲ್ಲಿ ಬಂಡವಾಳ ಹೂಡಲು ಲಾಭ ದೇಶದಿಂದ ಹೊರ ಸಾಗಿಸಲು ಯಾವುದೇ ರೀತಿಯ ಅಡ್ಡತೆ ಇತ್ಯಾದಿ ನಿರ್ಬಂಧಗಳು ಇರಬಾರದು ಎಂಬುದು ಈ ಮಾದರಿಯ ಆರ್ಥಿಕದ ಮುಖ್ಯ ಅಂಶವಾಗಿತ್ತು.

ಇವೆಲ್ಲಾ ಈ ದೇಶಗಳಿಗೆ ಈಗ ಮುಳುವಾಗಿದೆ. ಅಭಿವೃದ್ಧ ಬಂಡವಾಳ ಶಾಹಿ ದೇಶಗಳಲ್ಲಿ ಬಳಕೆ ವಸ್ತುಗಳ ಬೇಡಿಕೆ ಪೂರೈಕೆ ಅಗತ್ಯ ಪೂರಾ ಆದಂತೆ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಬಂಡವಾಳವನ್ನು ಈ ದೇಶಗಳಿಂದ ಹೊರ ತೆಗೆಯುತ್ತಿವೆ. ರಫ್ತು ಮಾರುಕಟ್ಟೆ, ವಿದೇಶಿ ಬಂಡವಾಳ ಎರಡನ್ನೂ ಕಳೆದುಕೊಂಡ ಈ ದೇಶಗಳ ಆರ್ಥಿಕ ಕುಸಿಯಲಾರಂಭಿಸಿತ್ತು. ಜಾಗತಿಕ ಬಂಡವಾಳ ಎಲ್ಲಿ ಅತ್ಯಧಿಕ ಲಾಭ ಇದೆಯೋ ಅಲ್ಲಿಗೆ ಹರಿಯುತ್ತಿದೆ. 1997 ಒಂದರಲ್ಲೆ 250 ಶತಕೋಟಿ ಡಾಲರು ಬಂಡವಾಳ ಬೆಳೆಯುತ್ತಿರುವ ಮಾರುಕಟ್ಟೆಗಳಿಗೆ ಹರಿಯಿತು. ಇದು ಹಲವಾರು ಅಭಿವೃದ್ಧಿಶೀಲ ದೇಶಗಳ ಒಟ್ಟು ಉತ್ಪನ್ನದ ಹಲವು ಪಟ್ಟು ಹೆಚ್ಚು. ಆದ್ದರಿಂದ ಬಂಡವಾಳದ ಈ 'ಓಡಾಟ' ದಿಂದ ಹಲವಾರು ದೇಶಗಳ ಆರ್ಥಿಕ ಅಲ್ಲೋಲ್ಲ ಕಲ್ಲೋಲವಾಗುತ್ತಿವೆ. 1996 ರಲ್ಲಿ ಮಲೇಶ್ಯಾ, ಥೈಲೆಂಡ್, ಫಿಲಿಪ್ಪೀನ್ಸ್, ದಕ್ಷಿಣ ಕೊರಿಯಾಗಳಿಗೆ ಮಾತ್ರ 93 ಶತಕೋಟಿ ಡಾಲರುಗಳಷ್ಟು ಬಂಡವಾಳ ಪ್ರವೇಶಿಸಿತ್ತು. ಆದರೆ 1997 ರಲ್ಲಿ ಎಲ್ಲಾ ತಿರುವು ಮುರುವಾಗಿದೆ. 105 ಶತಕೋಟಿ ಡಾಲರು ಬಂಡವಾಳ ಈ ದೇಶಗಳನ್ನು ಬಿಟ್ಟು ಹೋಗಿದೆ. ಅಂದರೆ 1996 ರಲ್ಲಿ ಬಂದ ಬಂಡವಾಳ ಓಡಿಹೋದದ್ದು, ಮಾತ್ರವಲ್ಲ 12 ಶತಕೋಟಿ ಡಾಲರು ಬಂಡವಾಳ ನಷ್ಟವಾಗಿದೆ. 1998 ರಲ್ಲಿ ಏಶ್ಯಾದಿಂದ ಒಟ್ಟು ಬಂಡವಾಳದ ಪಲಾಯನ 120 ಶತಕೋಟಿ ಡಾಲರು ಗಳಷ್ಟು ಆಗಬಹುದೆಂದು ಅಂದಾಜು ಹಾಕಲಾಗಿದೆ. ಪ್ರಸ್ತುತ ಪ್ರತಿ ವಾರಕ್ಕೆ ನಾಲ್ಕು ಶತಕೋಟಿ ಡಾಲರುಗಳಷ್ಟು ಬಂಡವಾಳ ಯುರೋಪು, ಅಮೆರಿಕಗಳಿಗೆ ಪಲಾಯನ ಮಾಡುತ್ತಿವೆ.

ಈ 'ಮಾದರಿ'ಯ ಟಾಂಟಾಂ ಹೊಡೆಯುತ್ತಿದ್ದ ವಿಶ್ವ ಬ್ಯಾಂಕ್- ಐ.ಎಂ.ಎಫ್ ಗಳೇ ಈಗ ಆರ್ಥಿಕ ಕುಸಿತ ಇನ್ನೂ ಗಮನಾರ್ಹ ಅವಧಿಯವರೆಗೆ ಮುಂದುವರೆಯುತ್ತವೆ ಎಂದು ಹೇಳುತ್ತಿದೆ.

ಆದರೆ ಈ ಎಲ್ಲಾ ದೇಶಗಳು ಸಾಮಾಜಿಕ ಆಸ್ಫೋಟದಲ್ಲಿ ಸಿಡಿದು ಹೋಗದಿರಬೇಕಾದರೆ ಐ.ಎಂ.ಎಫ್ ಈ ದೇಶಗಳಿಗೆ ಸಾಲ ಕೊಡಬೇಕು. ಮಾದರಿ ಬಳಸಿಕೊಳ್ಳಿ ಅದರ ಬಳಿಯಿರುವ ಎಲ್ಲಾ ನಿಧಿಯನ್ನು ರಶ್ಯಾ ಒಂದೇ ದೇಶದಲ್ಲಿ ಐ.ಎಂ.ಎಫ್. ಸುರಿದರೂ ರಶ್ಯಾದ ಸಾಲದ ಅಗತ್ಯ ಪೂರೈಕೆ ಸಾಧ್ಯವಿಲ್ಲ. ಇನ್ನು ಈ ಏಳು ಹುಲಿಗಳ ಅಗತ್ಯ ಪೂರೈಕೆ ಬಗ್ಗೆ ಐ.ಎಂ.ಎಫ್ ಈಗಾಗಲೇ ಆತಂಕವಾಗಿದೆ. ಆದ್ದರಿಂದ ಇಡೀ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆ ಕುಸಿದು ಬೀಳುವುದೂ ಎಂಬ ಭಯವ್ಯತಕವಾಗಿದೆ.

ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ

ಶ್ರೀಲಂಕಾದ ಸರ್ಕಾರ ದೇಶದ ತುಂಬಾ ಸಾರ್ವತ್ರಿಕ ತುರ್ತು ಪರಿಸ್ಥಿತಿ ಘೋಷಿಸಿದೆ. ಇದರ ಫಲವಾಗಿ ಅಗಸ್ಟ್ ನಲ್ಲಿ ನಡೆಯಬೇಕಾಗಿದ್ದ ಪ್ರಾಂತೀಯ ಅಸೆಂಬ್ಲಿಗಳ ಚುನಾವಣೆ ಸ್ಥಗಿತಗೊಂಡಂತಾಗಿದೆ. ಸರ್ಕಾರದಲ್ಲಿ ಭಾಗವಹಿಸುತ್ತಿರುವ ಕೆಲವು ಪಕ್ಷಗಳು ಸೇರಿದಂತೆ ಹಲವಾರು ವಿರೋಧ ಪಕ್ಷಗಳು ಈ ಕ್ರಮವನ್ನು ಖಂಡಿಸಿವೆ. ಎರಡು ವಿರೋಧ ಪಕ್ಷಗಳು ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಕೋರ್ಟಿಗೆ ಹೋಗಿವೆ. ತಮಿಳು ಉಗ್ರಗಾಮಿಗಳ ಜತೆ ಯುದ್ಧದಲ್ಲಿ ಶ್ರೀಲಂಕಾದ ಸೈನ್ಯ ವ್ಯಸ್ತವಾಗಿದ್ದು ಚುನಾವಣೆಗೆ ಸೈನ್ಯ ಅಥವಾ ಪೊಲೀಸ್ ಬಳಸಿದರೆ ದೇಶದ ಆಂತರಿಕ ಹಾಗೂ ಬಾಹ್ಯ ಭದ್ರತೆಗೆ ಧಕ್ಕೆಯಾಗುತ್ತದೆ ಎಂದು ಸರ್ಕಾರ ನಿಲುವು.

ಉತ್ತರ ಮತ್ತು ಪೂರ್ವದ ಭಾಗಗಳನ್ನು ಬಿಟ್ಟರೆ ದೇಶದ ಇತರೇ ಪ್ರದೇಶಗಳಲ್ಲಿ ಕಾನೂನು ಉತ್ತಮ ವ್ಯವಸ್ಥೆಗೆ ಬೆದರಿಕೆ ಅಷ್ಟು ತೀವ್ರವಾಗಿಲ್ಲ ಅದರ ನೆವ ಹೂಡಲಾಗುತ್ತಿದೆ ಎಂಬುದು ವಿರೋಧ ಪಕ್ಷಗಳ ದೂರು.

TULF ಮತ್ತು ಇತರ ತಮಿಳು ಗುಂಪುಗಳು ಈ ಕ್ರಮವನ್ನು ಪ್ರಜಾಪ್ರಭುತ್ವ ವಿರೋಧಿ ಎಂದು ಬಣ್ಣಿಸಿವೆ. ಅಲ್ಲದೆ ಉತ್ತರ ಮತ್ತು ಪೂರ್ವಪ್ರದೇಶಗಳ ಸೈನ್ಯ LTTE ಮೇಲೆ ವಿಜಯ ಸಾಧಿಸಬಹುದು ಎಂಬ ಲಕ್ಷಣಗಳಿವೆ.

ಸಿಪಿಐ(ಎಂ)ನ ಪರಮಾಣು ನೀತಿ

ಪುಟ 4 ರಿಂದ

ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಬಹುದಾಗಿದೆ. ಎಡಪಕ್ಷಗಳ ವಿರೋಧವಿದ್ದರೂ ರಾಜೀವ್ ಗಾಂಧಿ ಕಾಲದಿಂದ ಅಮೇರಿಕದೊಂದಿಗೆ ಭಾರತ ಮಿಲಿಟರಿ ಸಹಕಾರ ಹೊಂದಿದೆ. 1998 ಏಪ್ರಿಲ್‌ನಲ್ಲಿ ವಾಜಪೇಯಿ ಸರಕಾರ ಈ ಸಹಕಾರವನ್ನು ಇನ್ನಷ್ಟು ವಿಸ್ತರಿಸಿಕೊಂಡಿದೆ ಹಾಗೂ ಅಮೇರಿಕದೊಂದಿಗೆ ಸಾಮರಿಕ ಮಾತುಕತೆಯನ್ನು ವಿಸ್ತರಿಸುವ ಬಗ್ಗೆ ಹೇಳಿಕೆ ನೀಡಿತು.

ಸಾಮ್ರಾಜ್ಯಶಾಹಿ-ವಿರೋಧಿ ಮೌಲ್ಯಗಳ ಪ್ರೇರಣೆಯಿಂದಲ್ಲ

ಬಿಜೆಪಿ ಆರೆಸ್ಸೆಸ್ ಕೂಟ ಹಾಗೂ ಬಿಜೆಪಿ ಸರಕಾರ ಯಾವುದೇ ಸಾಮ್ರಾಜ್ಯಶಾಹಿ ವಿರೋಧಿ ಮೌಲ್ಯಗಳಿಂದ ಪ್ರೇರಿತವಾಗಿಲ್ಲ, ಆದರೆ ಅಣುಯುದ್ಧದ ಮೂಲಕ ಹಿಂದುತ್ವ ಅಜೆಂಡಾವನ್ನು ಇನ್ನಷ್ಟು ಮುಂದಕ್ಕೊಯ್ಯುವುದೇ ಅವುಗಳ ಉದ್ದೇಶ ಎನ್ನುವುದು ಸ್ಪಷ್ಟ.

ವಾಜಪೇಯಿ ಸರಕಾರ ತಲೆಕೆಳಗು ಮಾಡುವವರೆಗೆ ಭಾರತ ಅನುಸರಿಸಿಕೊಂಡು ಬಂದ ನೀತಿ ಹೊಸ ಜಾಗತಿಕ ಸನ್ನಿವೇಶದಲ್ಲಿ ತುಂಬಾ ಪ್ರಸ್ತುತವಾಗಿತ್ತು. ಶೀತಲ ಸಮರ ಕೊನೆಗೊಂಡಿರುವುದರಿಂದ ಜಾಗತಿಕ ಅಣ್ವಸ್ತ್ರ ನಿಶ್ಶಸ್ತ್ರೀಕರಣ ಯತ್ನಗಳನ್ನು ತೀವ್ರಗೊಳಿಸಬಹುದು ಹಾಗೂ ಬಲಪಡಿಸಬಹುದು, ಸೋವಿಯತ್‌ನೊಂದಿಗೆ ಮುಖಾಮುಖಿ ಕೊನೆಗೊಂಡಿರುವುದರಿಂದ ಆಕ್ರಮಣಶೀಲ ಅಮೇರಿಕವನ್ನು ಇಕ್ಕಟ್ಟಿಗೆ ಸಿಲುಕಿಸಬಹುದು, ಸ್ಥಿರ ಶಾಂತಿಗಾಗಿ ಅಣ್ವಸ್ತ್ರಗಳು ಇರುವುದು ಅಗತ್ಯ ಎಂಬ ಸಾಮ್ರಾಜ್ಯಶಾಹಿಗಳ ಸಿದ್ಧಾಂತವನ್ನು ಕಸದ ಬುಟ್ಟಿಗೆಸೆಯಲು ಇದು ಸಕಾಲವಾಗಿದೆ.

ಅಣ್ವಸ್ತ್ರಗಳ ನಾಶಕ್ಕೆ ವೇಳಾಪಟ್ಟಿಯೊಂದನ್ನು ಐದು ಅಣ್ವಸ್ತ್ರ ರಾಷ್ಟ್ರಗಳು ಬದ್ಧವಾಗುವಂತೆ ಮಾಡುವ ದಿಸೆಯಲ್ಲಿ ಅಭಿಪ್ರಾಯವನ್ನು ರೂಪಿಸಲು ಅಣ್ವಸ್ತ್ರ ಮಾತುಕತೆ ಕುರಿತ ಅಂತರ್ರಾಷ್ಟ್ರೀಯ ವೇದಿಕೆಗಳನ್ನು ಬಳಸಿಕೊಳ್ಳಬಹುದಾಗಿದೆ.

ಈ ಪ್ರಕ್ರಿಯೆಯಲ್ಲಿ ಭಾರತ ನಿರ್ವಹಿಸಬಹುದಾಗಿದ್ದ ಪಾತ್ರವನ್ನು ಬಿಜೆಪಿ ನೇತೃತ್ವದ ಸರಕಾರ ಹಾಳು ಮಾಡಿದೆ. ಆದ್ದರಿಂದಲೇ ಸಿಪಿಐ(ಎಂ) ಪೊಖ್ರಾನ್ ಪರೀಕ್ಷೆಗಳ ನಂತರ ಸೇನೆಯ ಅಣ್ವಸ್ತ್ರೀಕರಣವನ್ನು ವಿರೋಧಿಸುತ್ತಿದೆ. ಅಣ್ವಸ್ತ್ರೀಕರಣಕ್ಕೆ ಹೋಗದೆ ತಮ್ಮ ಸ್ವಂತ ಸಾಮರ್ಥ್ಯವನ್ನು ಉಳಿಸಿಕೊಳ್ಳುವ ಹಾಗೂ ಸಿಟಿಬಿಟಿ ಹಾಗೂ ಎನ್‌ಪಿಟಿಯಂಥ ತಾರತಮ್ಯದಿಂದ ಕೂಡಿದ ಹಾಗೂ ಅಸಮಾನ ಒಡಂಬಡಿಕೆಗಳಿಗೆ ಸಹಿ ಹಾಕದಿರುವ ನಿಲುವಿಗೆ ಬದ್ಧವಾಗುವ ನೀತಿಯನ್ನು ಅನುಸರಿಸುವುದು ಭಾರತದ ಹಿತಾಸಕ್ತಿಗೆ ಅನುಕೂಲಕರವಾದುದಾಗಿದೆ.

ಆತ್ಮಾವಲೋಕನ ಮಾಡಬೇಕಾದ....

ಪುಟ 5 ರಿಂದ

ಹೀಗೆ ನಮ್ಮ ಸ್ವಾತಂತ್ರ್ಯದ ಶತಕದ ಉತ್ತರಾರ್ಧದಲ್ಲಿ ನಮ್ಮ ಭವಿಷ್ಯವನ್ನು ಈ ಮೂರು ಕಣ್ಣೋಟಗಳ ನಡುವಿನ ಸಮರದ ಫಲಿತಾಂಶ ನಿರ್ಧರಿಸಲಿದೆ. ನಮ್ಮ 'ಅದೃಷ್ಟದೊಂದಿಗೆ ಸಮಾಗಮ'ದ 'ಪಣವನ್ನು ನೆರವೇರಿಸಬೇಕಾದರೆ' ಅದಕ್ಕಿರುವ ಒಂದೇ ದಾರಿಯೆಂದರೆ ಇದುವರೆಗೆ ಭಾರತೀಯ ಜನತೆಯ ಸಾಧನೆಗಳನ್ನು ಕೋಮುವಾದಿ ಶಕ್ತಿಗಳ ಆಕ್ರಮಣಗಳಿಂದ ಉಳಿಸಲು ಜನರ ಹೋರಾಟಗಳನ್ನು ಬಲಿಷ್ಠಗೊಳಿಸುವುದು, ಹಾಗೂ ಆಳುವ ವರ್ಗಗಳು ಹೆಜ್ಜೆ ಹೆಜ್ಜೆಗೂ ತಡೆಯಲು ಪ್ರಯತ್ನಿಸುವ ಸ್ವಾತಂತ್ರ್ಯ ಹೋರಾಟದ ಅಪೂರ್ಣವಾಗುಳಿದ ಕೆಲಸಗಳನ್ನು ಪೂರ್ಣಗೊಳಿಸುವತ್ತ ಚಲಿಸುವುದು. ಒಂದು ನಿಜವಾದ ಜನತಾ ಪ್ರಜಾಪ್ರಭುತ್ವದ ನಿರ್ಮಾಣದತ್ತ ಸಾಗಲು ವರ್ಗ ಹೋರಾಟವನ್ನು ತೀಕ್ಷ್ಣಗೊಳಿಸುವುದು ಭಾರತದ ಮತ್ತು ಅದರ ಕೋಟಿಗಟ್ಟಲೆ ಜನಗಳ ಭವಿಷ್ಯವನ್ನು ರೂಪಿಸುವಲ್ಲಿ ಅತ್ಯಂತ ಮಹತ್ವದ ಅಂಶ.

ಉತ್ಸಾಹ ತುಂಬದ ಉತ್ಸವ..........

ಪುಟ 1 ರಿಂದ

ಮುಚ್ಚಿ ನೌಕರಿ ಕಳೆದುಕೊಂಡು ಪರದಾಡುವವರು ಒಂದೆಡೆಯಾದರೆ ಸ್ವರ್ಣಜಯಂತಿ ಉತ್ಸವದ ವರ್ಷ ನೊಂದಾಯಿಸಿ ಕೊಂಡ ನಿರುದ್ಯೋಗಿಗಳ ಬವಣೆ ಮನದಾಳವನ್ನು ಸುಡುತ್ತಿದೆ. ಸರಕಾರಿ ದವಾಖಾನೆಗಳ ದುರವಸ್ಥೆ, ಖಾಸಗೀ ಆಸ್ಪತ್ರೆ, ನರ್ಸಿಂಗ್ ಹೋಮ್‌ಗಳ ಜಂಜಾಟ ರೋಗಿಗಳನ್ನು ನೇರವಾಗಿ ಸ್ಮಶಾನದತ್ತ ಓಡಿಸುತ್ತಿದೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ಬೆಲೆಯೇರಿಕೆ, ಬೆನ್ನೆಲುಬನ್ನು ಮುರಿಯುತ್ತಿದೆ. ಶಾಲೆ, ಕಾಲೇಜುಗಳಲ್ಲಿಯ ಡೊನೇಶನ್ ಹಾವಳಿ ಪುಸ್ತಕಗಳ ಭಾರ ಒಳ್ಳೆ ನಾಗರಿಕನಾಗಿ ಬೆಳೆಯಬೇಕೆಂಬ ಮಕ್ಕಳ ಕನಸಿಗೆ ನೀರೆರಚುತ್ತಿದೆ. ಹೀಗಾಗಿ ಸ್ವಾತಂತ್ರ್ಯ ಸುವರ್ಣೋತ್ಸವದ ಒಂದು ವರ್ಷ ಕರ್ನಾಟಕದ ಜನತೆಗೆ, ಸುವರ್ಣ ದಿನಗಳಾಗಿ ಮೂಡಿಬರಲಿಲ್ಲ.

'ಐಕ್ಯರಂಗ' ತನ್ನ ಸ್ವಾತಂತ್ರ್ಯ ಸ್ವರ್ಣಜಯಂತಿ ವಿಶೇಷಾಂಕದ ಸಂಪಾದಕೀಯದಲ್ಲಿ ಸ್ವಾತಂತ್ರ್ಯೋತ್ಸವದ 50 ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಷ್ಟ್ ಪಕ್ಷ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಇನ್ನಷ್ಟು ಸಂಯೋಜಿಸಿ ಬಲಿಷ್ಠಗೊಳಿಸಿ, ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಕ್ಕೆ ಉಂಟಾಗಿರುವ ಅಪಾಯದಿಂದ ದೇಶವನ್ನು ರಕ್ಷಿಸಿ ಜನತಾ ಪ್ರಜಾಪ್ರಭುತ್ವ ರಂಗ ಸ್ಥಾಪನೆಗಾಗಿ ಶಕ್ತಿಮೀರಿ ದುಡಿಯುತ್ತದೆಂದೂ 'ಐಕ್ಯರಂಗ' ಆ ಮಹಾಚರಿತ್ರಾರ್ಹ ಜವಾಬ್ದಾರಿಯ ನಿರ್ವಹಣೆಯತ್ತ ಪ್ರಚಾರ ಪ್ರಕ್ಷೋಭೆಯಲ್ಲಿ ಪಾಲ್ಗೊಂಡು ಜನತಾ ಚಳುವಳಿ ಮುನ್ನುಗ್ಗುವಂತೆ ಮಾಡುವಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತದೆಂಬ ವಿಶ್ವಾಸವನ್ನು ಓದುಗರಿಗೆ ನೀಡಲು ಇಚ್ಛೆಪಡುತ್ತದೆ" ಎಂಬ ಆಶಯವನ್ನು ವ್ಯಕ್ತಮಾಡಿತು.

ದೇಶದ ಮಟ್ಟದಲ್ಲಿ ಆದೇ ರೀತಿ ಸಿಪಿಐ(ಎಂ) ಪಕ್ಷದ ಮುಖಂಡತ್ವದಲ್ಲಿರುವ ಪಶ್ಚಿಮ ಬಂಗಾಲ, ತ್ರಿಪುರ, ಕೇರಳ ರಾಜ್ಯಗಳಲ್ಲಿ ಈ ಅನಿಸಿಕೆಗಳನ್ನು ಪುಷ್ಟಿಗೊಳಿಸುವತ್ತ ಪ್ರಯತ್ನ ನಡೆದಿದೆಂದು ಹೇಳಬಹುದು. ಕರ್ನಾಟಕದ ಮಟ್ಟಿಗೆ ಹೇಳಬೇಕಾದರೆ 'ಐಕ್ಯರಂಗ' ಈ ದಿಸೆಯಲ್ಲಿ ಅತಿ ಉತ್ತಮ ರೀತಿಯ ಲೇಖನಗಳೊಂದಿಗೆ ತನ್ನ ಓದುಗರಲ್ಲಿ ಸ್ವಾತಂತ್ರ್ಯ ಚಳುವಳಿಯ ಉದ್ದೇಶಗಳು ಮೂಡಿಬರುವಂತೆ ಮಾಡುವುದರಲ್ಲಿ ಅವರಲ್ಲಿ ಹೊಸ ಸ್ಫೂರ್ತಿ ತುಂಬುವುದರಲ್ಲಿ ಯಶಸ್ವಿಯಾಗಿದೆಂದು ಹೆಮ್ಮೆಪಟ್ಟು ಹೇಳಬಹುದಾಗಿದೆ. ಆದರೆ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ತಮ್ಮದೇ ಆದ ಹಲವಾರು ಕಾರಣಗಳಿಂದಾಗಿ ಸ್ವರ್ಣೋತ್ಸವದ ಸಂದೇಶಗಳನ್ನು ಜನರ ಮಧ್ಯೆ ಕೊಂಡೊಯ್ಯುವುದರಲ್ಲಿ ಹೆಚ್ಚಿನ ಸಾಧನೆಮಾಡಿಲ್ಲೆಂದರೆ ತಪ್ಪಾಗಲಾರದು. ಈ ವರ್ಷದ ದಿನಗಳನ್ನು ಪಕ್ಷದ ಕೇಂದ್ರ ಹೇಳಿದಂತೆ ಯೋಜನಾಬದ್ಧವಾಗಿ ಅನುಕರಣೆಯಲ್ಲಿ ತರುತ್ತಿದ್ದರೆ, ಸಂಘಟನೆ ಬಲಿಷ್ಠಗೊಳಿಸಲೂ ಸಹಾಯವಾಗುತ್ತಿತ್ತು, ಛಿದ್ರಕಾರಿ, ಜಾತೀವಾದಿ ಕೋಮುಶಕ್ತಿಗಳನ್ನು ಅವುಗಳ ಅಪಾಯವನ್ನು ಜನರ ಮಧ್ಯೆ ಹೇಳಿ, ಅವರನ್ನು ಜನರಿಂದ ದೂರವಾಡಲೂ ಸಾಧ್ಯತೆಯಿತ್ತು. ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿ ಬಂದ ನಂತರ ಕರ್ನಾಟಕದಲ್ಲಿಯೂ ಅಧಿಕಾರ ಗ್ರಹಣ ಮಾಡುವ ಕನಸು ಕಾಣುತ್ತಿರುವ ಬಿಜೆಪಿ ಮುಖಂಡರು ಪ್ರತಿಯೊಂದು ಕ್ಷೇತ್ರದಲ್ಲಿ ಕೈಹಾಕಿ ಪ್ರಭಾವ ಬೆಳೆಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಜನತಾದಳ, ಕಾಂಗ್ರೆಸ್ ಪಕ್ಷಗಳು, ಆಂತರಿಕ ಜಗಳಗಳಲ್ಲಿ ಮುಳುಗಿವೆ, ಮತೀಯ ಶಕ್ತಿಗಳ ವಿರುದ್ಧ ಹೋರಾಡಲು ತಾವು ಎಡ ಜಾತ್ಯಾತೀತ ಶಕ್ತಿಗಳೊಡನೆ ಸೇರಿಕೊಳ್ಳಬೇಕು ಹಾಗೆಯೇ ತಮ್ಮ ಅಂತರಿಕ ಜಗಳ ಬಿಟ್ಟು ಪಕ್ಷ ಬಲಿಷ್ಠಗೊಳಿಸಬೇಕು, ಜನರ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಬೇಕು, ಅಂಥ ಚರಿತ್ರಾರ್ಹ ಜವಾಬ್ದಾರಿ ತಮ್ಮ ಮೇಲಿದೆಂಬುದನ್ನು ಅರ್ಥೈಸಿಕೊಳ್ಳಲು ಅವರು ವಿಫಲರಾಗಿದ್ದಾರೆ. ಸ್ವರ್ಣಜಯಂತಿಯ ಉತ್ಸವವನ್ನು ಕೊನೆಗೊಳಿಸುತ್ತಿರುವಾಗ ಹೋದ ವರ್ಷ ಸ್ವಾತಂತ್ರ್ಯದ ಸ್ವರ್ಣ ಜಯಂತಿ ಉತ್ಸವದ ದಿವಸ ಕೈಗೊಂಡ ನಿರ್ಧಾರವನ್ನೇ ಪುನರುಚ್ಚರಿಸಿ ದೇಶದ ರಕ್ಷಣೆಗಾಗಿ ಮತೀಯ ಶಕ್ತಿಗಳ ನಿರ್ನಾಮಕ್ಕಾಗಿ ದೇಶದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಜನತೆಗಿತ್ತ ಆಶ್ವಾಸನೆಗಳನ್ನು ಪೂರೈಸಲು ಎಡ ಜಾತ್ಯತೀತ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಸಾಧಿಸುತ್ತೇವೆಂಬ ಪಣತೊಡುವುದು ಅಗತ್ಯ, ಅಂಥ ಪಣತೊಟ್ಟು ಮುಂದೆ ಸಾಗೋಣ.

ಸುಪ್ರಿಂ ಕೋರ್ಟ್ ಮಧ್ಯಂತರ ಆದೇಶದ ಪ್ರಕಾರ ಪೆನ್ಶನ್ ಯೋಜನೆ ಈಗ ಐಚ್ಛಿಕ

ಸುಪ್ರಿಂ ಕೋರ್ಟ್ 19-8-97 ರಂದು 1995ರ ಪೆನ್ಶನ್ ಯೋಜನೆಯ ಜ್ಯಾರಿಗೆ ತಡೆಯೊಡ್ಡುವ ಮಧ್ಯಂತರ ಆದೇಶಕ್ಕೆ ಒಂದು ಸ್ಪಷ್ಟೀಕರಣ ನೀಡಿದೆ. ಈ ಯೋಜನೆ ಕಾರ್ಮಿಕರ ಭವಿಷ್ಯ ನಿಧಿಯ ದೊಡ್ಡ ಭಾಗವನ್ನು ಪೆನ್ಶನ್ ಯೋಜನೆಯೆಂಬುದರತ್ತ ತಿರುಗಿಸುವ ಯೋಜನೆ.

ಜುಲೈ 15, 1998ರಂದು ಸುಪ್ರೀಂ ಕೋರ್ಟ್ ಭಾರತ ಉಕ್ಕು ಕಾರ್ಮಿಕರ ಒಕ್ಕೂಟ(ಸಿಐಟಿಯು) ಹಾಗೂ ಐ.ಇ.ಎಲ್. ನೌಕರರ ಸಂಘ ಕೇಂದ್ರ ಸರಕಾರ ಹಾಕಿದ್ದ ಮೊಕದ್ದಮೆಯಲ್ಲಿ ಸ್ಪಷ್ಟೀಕರಣ ಆದೇಶ ನೀಡುತ್ತಾ ಹೀಗೆಂದಿದೆ- ".... ಆದ್ದರಿಂದ ಸ್ಪಷ್ಟೀಕರಣ ನೀಡುವುದೇನೆಂದರೆ 1995ರ ಯೋಜನೆಯ ಪ್ರಯೋಜನ ಪಡೆಯಬೇಕೆನ್ನುವ ಕಾರ್ಮಿಕರು ಆ ಯೋಜನೆಯಡಿ ಇರುವ ವಿಧಾನವನ್ನು ಅಂಗೀಕರಿಸಬೇಕು ಮತ್ತು ಸೂಕ್ತ ವಂತಿಕೆ ನೀಡಬೇಕು...(1995ರ ಯೋಜನೆಯ ಪ್ರಯೋಜನ ಬಯಸದವರು ಈ ಯೋಜನೆಯ ಪ್ರಕಾರ ವಂತಿಗೆ ಕೊಡಬೇಕಾಗಿಲ್ಲ ಎಂಬುದೂ ಸ್ವಯಂ ವೇದ್ಯ). ಅವರು ಈ ಯೋಜನೆಗಿಂತ ಮೊದಲಿದ್ದ ಯೋಜನೆಯಡಿಯೇ ಉಳಿಯುತ್ತಾರೆ. ಅವರ ವಿಷಯದಲ್ಲಿ ಅವರ ವಂತಿಗೆಗಳನ್ನು ಕಳಿಸುವ ಅವಕಾಶ ಮಾಲಕರ ಬಳಿಯುಳಿಯುವುದಿಲ್ಲ"

ಅಂದರೆ ಸರ್ಕಾರದ 1995ರ ಪೆನ್ಶನ್ ಯೋಜನೆ ಕನಿಷ್ಠ ಪಕ್ಷ ಐಚ್ಛಿಕವಾಗಬೇಕು. ಅದನ್ನು ಕಾರ್ಮಿಕರ ಮೇಲೆ ಹೇರಬಾರದು ಎಂಬ ಕಾರ್ಮಿಕರ ಬೇಡಿಕೆಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಂತಾಗಿದೆ. ಈ ಕೇಸಿನ ಅಂತಿಮ ವಿಚಾರಣೆ ಆಗಸ್ಟ್ 24ರಂದು ನಡೆಯಲಿದೆ.



ದೇಶದ ದುಡಿಯುವ ಜನರ 24 ಬೇಡಿಕೆಗಳು

ದೇಶದ ವಿವಿಧ ಜನ ವಿಭಾಗಗಳು ಆರ್ಥಿಕ ಉದಾರೀಕರಣ ಮತ್ತು ಕೋಮುವಾದದ ಅವಳಿ ಪಿಡುಗುಗಳ ವಿರುದ್ಧ ನಡೆಸಿರುವ ಹೋರಾಟವನ್ನು ತೀವ್ರಗೊಳಿಸಿ ಡಿಸೆಂಬರ್ 11, 1998 ರಂದು ಸಾರ್ವತ್ರಿಕ ಮುಷ್ಕರ ನಡೆಸಲು ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಕರೆ ನೀಡಿರುವ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ಅದೇ ರೀತಿ ಡಿಸೆಂಬರ್ 10-11 ರಂದು ಎರಡು ದಿನಗಳ ಮುಷ್ಕರ ನಡೆಸಲು ಸಾರ್ವಜನಿಕ ವಲಯದ ಕಾರ್ಮಿಕರು ನಿರ್ಧರಿಸಿರುವ ಬಗ್ಗೆಯೂ ಓದಿರುವಿರಿ. ಈ ಎರಡು ಪ್ರಮುಖ ಹೋರಾಟಗಳ ಬೇಡಿಕೆಗಳನ್ನು ಇಲ್ಲಿ ಕೊಡಲಾಗಿದೆ.

ಡಿಸೆಂಬರ್ 11, 1998 ರ ಸಾರ್ವತ್ರಿಕ ಮುಷ್ಕರದ ಬೇಡಿಕೆಗಳು

1. ಹೊಸ ಆರ್ಥಿಕ ಮತ್ತು ಕೈಗಾರಿಕಾ ಧೋರಣೆಯನ್ನು ಹಿಂತೆಗೆದುಕೊಳ್ಳಬೇಕು. ಐ.ಎಂ.ಎಫ್-ವಿಶ್ವ ಬ್ಯಾಂಕ್‌ನ ನವ-ಉದಾರೀಕರಣ ಹಾಗೂ ಪೇಟೆಂಟ್ ಕಂತೆಯನ್ನು ರದ್ದು ಮಾಡಬೇಕು.
2. ಭಾರತೀಯ ಆರ್ಥಿಕದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಲಂಗುಲಗಾಮಿಲ್ಲದ ಪ್ರವೇಶವನ್ನು ನಿಲ್ಲಿಸಬೇಕು.
3. ಕೇಂದ್ರ ಮತ್ತು ರಾಜ್ಯ ಸಾರ್ವಜನಿಕ ವಲಯದ ಘಟಕಗಳ ಮತ್ತು ಸರ್ಕಾರೀ ಇಲಾಖೆಗಳ ಖಾಸಗೀಕರಣ, ಶೇರು ಮಾರಾಟ ಹಾಗೂ ಕಂಪನೀಕರಣವನ್ನು ನಿಲ್ಲಿಸಬೇಕು. ವಿಮೆ, ದೂರಸಂಪರ್ಕ, ಹಣಕಾಸುವಲಯ, ವಿದ್ಯುಚ್ಛಕ್ತಿ ವಲಯ ಇತ್ಯಾದಿಗಳನ್ನು ತೆರೆಯುವ ನೀತಿಗಳನ್ನು, ತೆರೆದ ಆಕಾಶ ನೀತಿಯನ್ನು ಕೈ ಬಿಡಬೇಕು.
4. ಮುಚ್ಚಿದ ಕೈಗಾರಿಕಾ ಘಟಕಗಳನ್ನು ತೆರೆಯಬೇಕು, ಎಲ್ಲಾ ರೋಗಗ್ರಸ್ತ ಘಟಕಗಳ ಪುನಶ್ಚೇತನ, ಅದಕ್ಕಾಗಿ ಸಾಕಷ್ಟು ಪ್ರಮಾಣದಲ್ಲಿ ಹಾಗೂ ತಕ್ಷಣ ಹಣಕಾಸು ವ್ಯವಸ್ಥೆ ಒದಗಿಸಬೇಕು.
5. ಸಣ್ಣ ಪ್ರಮಾಣದ ಹಾಗೂ ಪಾರಂಪರಿಕ ಭಾರತೀಯ ಉದ್ದಿಮೆಗಳನ್ನು ರಕ್ಷಿಸಬೇಕು.
6. ಬೆಲೆಯೇರಿಕೆ ಮತ್ತು ಹಣದುಬ್ಬರವನ್ನು ತಡೆಯಬೇಕು.
7. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು, ಸಾಕಷ್ಟು ಪ್ರಮಾಣ ದಲ್ಲಿ ಮತ್ತು ಗುಣಮಟ್ಟದಲ್ಲಿ ಜೀವನಾವಶ್ಯಕ ಸರಕುಗಳನ್ನು ಆರ್ಥಿಕವಾಗಿ ದುರ್ಬಲವಾದ ವಿಭಾಗೆಗಳಿಗೆ ಸಬ್ಸಿಡಿ ದರಗಳಲ್ಲಿ ಒದಗಿಸಬೇಕು.
8. ಅವಶ್ಯಕ ಸರಕುಗಳ ಕಾಯ್ದೆಯನ್ನು ಮತ್ತೆ ತಂದು ಕಳ್ಳ ದಾಸ್ತಾನುಗಾರರು, ಕಾಳಸಂತೆಕೋರರ ವಿರುದ್ಧ ಕ್ರಮ ಕೈಗೊಳ್ಳಬೇಕು.
9. ನೈಜವಾದ ಭೂಸುಧಾರಣೆಗಳ ಜಾರಿಗೆ ಶೀಘ್ರ ಕ್ರಮಗಳನ್ನು ಕೈಗೊಳ್ಳಬೇಕು, ಭೂಮಿತಿ ಶಾಸನಗಳಲ್ಲಿನ ತೂತುಗಳನ್ನು ಮುಚ್ಚಬೇಕು, ಭೂಮಿತಿ ಮೀರಿದ ಮಿಗುತೆ ಹಾಗೂ ಬೇನಾಮಿ ಭೂಮಿಯನ್ನು ಭೂಹೀನರಿಗೆ ಹಂಚಬೇಕು. ಕೃಷಿ ಕಾರ್ಮಿಕರಿಗೆ ಪುಕ್ಕಟೆ ಮನೆ ನಿವೇಶನಗಳನ್ನು ಒದಗಿಸಬೇಕು. ಭೂದಾಖಲೆಗಳನ್ನು ಸರಿಪಡಿಸಿ ಭಾಗ ಬೆಳೆಗಾರರಿಗೆ ರಕ್ಷಣೆ ನೀಡಬೇಕು.
10. ಕೃಷಿ-ಮೂಲರಚನೆ ಅಭಿವೃದ್ಧಿ, ಸಂಶೋಧನೆ ಮತ್ತು ನೀರಾವರಿಯಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು; ಕೃಷಿಗೆ ಸಾಲ ದೊರಕುವಂತೆ ಮಾಡಬೇಕು, ಬಡರೈತರ ಎಲ್ಲಾ ಸಾಲಗಳನ್ನು ಮನ್ನಾ ಮಾಡಬೇಕು, ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಬೇಕು, ಫಲಪ್ರದವಾದ ಬೆಲೆಗಳು ಹಾಗೂ ಸಮಗ್ರ ಬೆಳೆ ವಿಮೆ ಒದಗಿಸಬೇಕು.
11. ಸಮಗ್ರ ಕೇಂದ್ರೀಯ ಕೃಷಿ ಕಾರ್ಮಿಕರ ಮಸೂದೆಯನ್ನು ಮಂಡಿಸಬೇಕು.
12. ಉದ್ಯೋಗದ ಹಕ್ಕನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಿ ತರಬೇಕು. ನಿರುದ್ಯೋಗ ಭತ್ಯೆ ನೀಡುವಂತೆ ಮಾಡಬೇಕು.
13. ನೇಮಕಾತಿಯ ಮೇಲೆ ನಿಷೇಧ ತೆಗೆಯಬೇಕು.
14. ಎಲ್ಲರಿಗೂ ಶಿಕ್ಷಣ ದೊರೆಯುವಂತೆ ಮಾಡಬೇಕು; ಪುಕ್ಕಟೆ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಸಿಗುವಂತೆ ಮಾಡಬೇಕು; ಶುಲ್ಕ ಏರಿಕೆಯನ್ನು ಹಿಂತೆಗೆದುಕೊಂಡು ಶಿಕ್ಷಣಕ್ಕೆ ಬಜೆಟ್‌ನಲ್ಲಿ ಎತ್ತಿರುವ ಹಣದ ಪ್ರಮಾಣವನ್ನು 10% ಕ್ಕೇರಿಸಬೇಕು.
15. 33ಶೇ. ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು; ಮಹಿಳೆಯರಿಗೆ ಸಮಾನ ಆಸ್ತಿ ಹಕ್ಕು ಸಿಗುವಂತಾಗಬೇಕು, ಪಟ್ಟಾಗಳನ್ನು ಗಂಡ ಮತ್ತು ಹೆಂಡತಿಗೆ ಜಂಟಿಯಾಗಿ ನೀಡುವಂತೆ ಗ್ಯಾರಂಟಿ ಮಾಡಬೇಕು; ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ತಡೆಯಬೇಕು ಹಾಗೂ ಇಂತಹ ಅಪರಾಧ ಎಸಗುವವರ ಮೇಲೆ ಕಟ್ಟುನಿಟ್ಟಾದ ಕ್ರಮ ಮತ್ತು ದುಡಿಮೆಯ ಜಾಗಗಳಲ್ಲಿ ಲೈಂಗಿಕ ಕಿರುಕುಳಗಳನ್ನು ನಿಲ್ಲಿಸಬೇಕು.
16. ಮಕ್ಕಳ ದುಡಿಮೆಯನ್ನು ನಿರ್ಮೂಲ ಮಾಡಲು ಶೀಘ್ರ ಕ್ರಮಗಳನ್ನು ಕೈಗೊಳ್ಳಬೇಕು.
17. ದಲಿತರ ಮತ್ತು ಬುಡಕಟ್ಟು ಜನಗಳ ಹಕ್ಕುಗಳ ಭರವಸೆ, ಅವರ ಮೇಲೆ ಅತ್ಯಾಚಾರ ನಡೆಸುವವರ ವಿರುದ್ಧ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು. ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ/ಬುಡಕಟ್ಟು ಕೋಟಾಗಳಲ್ಲಿ ಬಾಕಿಯನ್ನೆಲ್ಲಾ ತುಂಬಬೇಕು.
18. ತಕ್ಷಣವೇ ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳ ಮಾನ್ಯತೆಗೆ ಕಾನೂನು ತರಬೇಕು.
19. ಬಡತನ ಮಟ್ಟಕ್ಕಿಂತ ಮೇಲಿರುವಂತೆ ಕನಿಷ್ಟ ಕೂಲಿ ಹಾಗೂ ಬೆಲೆ ಸೂಚ್ಯಂಕ ದೊಡನೆ ತಂತಾನೇ ಕೂಲಿ ಏರಿಕೆಯ ಭರವಸೆ; ಕಾಲಕಾಲಕ್ಕೆ ಪರಿಷ್ಕರಣೆ ಇರಬೇಕು; ಕನಿಷ್ಟ ಕೂಲಿ ಕಾಯ್ದೆಯನ್ನು ಸಂವಿಧಾನದ 9ನೇ ಶೆಡ್ಯೂಲಿನಲ್ಲಿ ತರಬೇಕು; ಅದನ್ನು ಜಾರಿಗೊಳಿಸುವ ವ್ಯವಸ್ಥೆಯನ್ನು ಬಲಪಡಿಸಬೇಕು; ಕಾರ್ಮಿಕ ಶಾಸನಗಳು ಹಾಗೂ ಸಾಮಾಜಿಕ ಭದ್ರತಾ ಕ್ರಮಗಳನ್ನು ಅಸಂಘಟಿತ ವಲಯ ಮತ್ತು ಮನೆ ಆಧಾರಿತ ಕಾರ್ಮಿಕರಿಗೂ ವಿಸ್ತರಿಸಬೇಕು.
20. ನೇರ ತೆರಿಗೆಗಳನ್ನು ಹೆಚ್ಚಿಸಬೇಕು; ಕಂಪನಿ ವಲಯ ಮತ್ತು ಗ್ರಾಮೀಣ ಶ್ರೀಮಂತರ ಮೇಲೆ ತೆರಿಗೆ ಹಾಕಬೇಕು; ಪರೋಕ್ಷ ತೆರಿಗೆಗಳನ್ನು ಇಳಿಸಬೇಕು ಮತ್ತು ಬಡವರಿಗೆ ಪರಿಹಾರ ಒದಗಿಸಬೇಕು.
21. ಜಾತ್ಯಾತೀತ ಮೌಲ್ಯಗಳನ್ನು, ಮಹಿಳೆಯರ ಘನತೆಯನ್ನು ಉಲ್ಲಂಘಿಸುವ, ಹಿಂಸೆ ಮತ್ತು ಅಪರಾಧ ವನ್ನು ವೈಭವೀಕರಿಸುವ ಎಲ್ಲಾ ಮಾಧ್ಯಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿತ್ರಿಕ್ಷಿಸಬೇಕು.
22. ಪರಮಾಣು ಶಸ್ತ್ರೀಕರಣಕ್ಕೆ ತಡೆ ಹಾಕಬೇಕು; ಶಸ್ತ್ರಾಸ್ತ್ರ ಪೈಪೋಟಿ ನಿಲ್ಲಿಸಬೇಕು. ಸಿಟಿಬಿಟಿ ಮತ್ತು ಎನ್.ಪಿ.ಟಿ.ಗಳಿಗೆ ಸಹಿ ಹಾಕಬಾರದು.
23. ಭ್ರಷ್ಟ ವ್ಯವಹಾರಗಳಲ್ಲಿ ಒಳಗೊಂಡಿರುವ ಎಲ್ಲರ ಮೇಲೂ, ಮುಖ್ಯವಾಗಿ ಸಾರ್ವಜನಿಕ ಹುದ್ದೆಗಳಲ್ಲಿ ರುವವರ ಮೇಲೆ ಕಟ್ಟು ನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು.
24. ಶ್ರೀಕೃಷ್ಣ ಆಯೋಗದ ವರದಿಯಲ್ಲಿ ದೋಷಾರೋಪಣೆಗೊಳಗಾದವರನ್ನೆಲ್ಲಾ ಬಂಧಿಸಬೇಕು. ಮಹಾರಾಷ್ಟ್ರ ಸರಕಾರ ರಾಜೀನಾಮೆ ನೀಡಬೇಕು.

ಅಣಕ

ಶರತ್‌ಚಂದ್ರ

ಪ್ರಧಾನಿಯ ಆಪ್ತರು

ಛಲ ಬಿಡದ ತ್ರಿವಿಕ್ರಮನು ಮತ್ತೆ ಮುತ್ತುಗದ ಮರದ ಬಳಿ ಹೋಗಿ ಶವವನ್ನು ಹೆಗಲಿಗೇರಿಸಿ ಪಾರ್ಲಿಮೆಂಟು ರಸ್ತೆಯನ್ನು ದಾಟಿ ಕೆಂಪುಕೋಟೆ ಕಡೆ ಹೋಗುತ್ತಿರಲಾಗಿ ಶವ ಅಲುಗಾಡಿತು. ಮಾತನಾಡಲಾರಂಭಿಸಿತು.

ಅಯ್ಯ ರಾಜನೇ, ನಿನ್ನ ದಾರಿಯ ಆಯಾಸ ನೀಗಲು ಒಂದು ಕಥೆ ಹೇಳುತ್ತೇನೆ ನೀನು ಕೇಳುವಂಥವನಾಗು ಎಂದಿತು. ರಾಜ ತ್ರಿವಿಕ್ರಮನು ಹಿಂದೂ ರಾಜ್ಯವನ್ನು ಸಹಿಸುತ್ತಿರುವ ಜನಗಳಂತೆ ಮೌನವಾಗಿ ಆಲಿಸತೊಡಗಿದ.

ರಾಜನೇ ಭಾರತ ದೇಶದಲ್ಲಿ ಅಟಲ ಬಿಹಾರಿ ವಾಜಪೇಯಿ 17 ಪಕ್ಷಗಳ ಸುಭದ್ರ ಸರ್ಕಾರಕ್ಕೆ ಸಮರ್ಥ ನಾಯಕತ್ವ ಕೊಟ್ಟು ನೂರೈವತ್ತು ದಿನಗಳನ್ನು ದಾಟಿ 51 ನೇ ಸ್ವಾತಂತ್ರ್ಯ ದಿನದಂದು ಕೆಂಪುಕೋಟೆ ಯಲ್ಲಿ ಧ್ವಜ ಹಾರಿಸಿ ಭಾಷಣಮಾಡಿ ನಿಲ್ಲಲೂ ಆಗದೆ ಸ್ವಲ್ಪ ವಾಲಿ ಅಭದ್ರ ರಾದದ್ದು ನಿನಗೆ ಗೊತ್ತಿದೆ. ಪೋಖ್ರಾನ್-II ಸಿಡಿಸಿ ಆದರ ಗದ್ದಲದಲ್ಲಿ 17 ಪಕ್ಷಗಳ ಕಚ್ಚಾಟ ನಿಲ್ಲುವಂತೆ ಮಾಡಿದ ಸಮರ್ಥ ನಾಯಕತ್ವ ಅವರದು, ಪೋಖ್ರಾನ್ ಗದ್ದಲ ನಿಂತು 17 ಪಕ್ಷಗಳ ಕಚ್ಚಾಟದ ಗದ್ದಲ ಜಾಸ್ತಿಯಾದರೂ ಕೇಳಿದವರಿಗೆಲ್ಲಾ ರಾಜ್ಯವನ್ನು ಹಂಚಲು ಆರಂಭಿಸಿ ಹೊಸ ಗದ್ದಲ ಆರಂಭಿಸಿದ್ದಾರೆ. ರೂಪಾಯಿ ಕುಸಿಯುತ್ತಿರುವಂತೆ, ಎಲ್ಲಾ ಬೆಲೆಗಳು ಏರುತ್ತಿದ್ದರೂ ಆರ್ಥಿಕವನ್ನು ನಿಭಾಯಿಸಿ ಕೊಂಡು ಹೋಗುತ್ತಿರುವ ಇಂತಹ ಸಮರ್ಥ ಪ್ರಧಾನಿಗೆ ಆಪ್ತರು ಇರಲೇಬೇಕಲ್ಲ. ಈ ಸಮರ್ಥ ಪ್ರಧಾನಿಗೆ ಅತ್ಯಂತ ಆಪ್ತರು ಯಾರು? ಇವರ ಮಂತ್ರಿಮಂಡಲದ ಸಹೋದ್ಯೋಗಿ ಗಳಾದ ಅಡ್ವಾಣಿ ಮುರಳಿ ಮನೋಹರ ಜೋಶಿಯವರೇ? ಕಿಚಡಿ ಸರ್ಕಾರದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತಿರುವ ಜಾರ್ಜ್, ಜಸ್ವಂತ್ ಸಿಂಗರವರೇ? ಹಿಂದುತ್ವದ ರೂವಾರಿ ಗಳಾದ ಠಾಕ್ರೆ ದ್ವಯರೇ? ಇನ್ನಾರು? ಈ ಪ್ರಶ್ನೆಗೆ ಸಮಾಧಾನಕಾರ ಉತ್ತರ ನಿಡದಿದ್ದರೇ ವಾಜಪೇಯಿ ಸರ್ಕಾರದಂತೆ ನಿನ್ನ ತಲೆ ಸಾವಿರ ಹೋಳಾದೀತು ಎಚ್ಚರಿಕೆ ಎಂದು ಶವ ಸುಮ್ಮನಾಯಿತು.

ರಾಜ ತ್ರಿವಿಕ್ರಮನು ಆ ಪ್ರಶ್ನೆಗೆ ಉತ್ತರ ಕೊಡಲಾರಂಭಿಸಿದ. 17 ಪಕ್ಷಗಳ ಸರ್ಕಾರ ನಡೆಸುವ ಪ್ರಧಾನಿಗೆ ಆಪ್ತರು ಹಲವು. ಅತ್ಯಂತ ಆಪ್ತರು ಯಾರು ಎಂದು ಹೇಳುತ್ತೇನೆ ಕೇಳುವಂಥವನಾಗು, ಚೀನಾವೇ ನಮ್ಮ ಪರಮ ಶತ್ರು ಎಂದು ದಿನಗಟ್ಟಲೆ ಎಗರಾಡಿ ಪೋಖ್ರಾನ್-II ಸ್ಫೋಟಕ್ಕೆ ಜನಮನ ತಯಾರಿಸಿ ಸರ್ಕಾರದ ರಕ್ಷಣೆ ಮಾಡಿದ ಜಾರ್ಜ್ ಆಗ ಅತ್ಯಂತ ಆಪ್ತರು. ಪೋಖ್ರಾನ್ ಸ್ಫೋಟದಿಂದ ಉಂಟಾದ ಅಂತರ್ರಾಷ್ಟ್ರೀಯ ಫಜೀತಿ ಮತ್ತು ಎಲ್ಲಾ ತರದ ಸರ್ಕಾರದ ಫಜೀತಿಗಳಿಗೆ ಪರಿಹಾರ ಹುಡುಕಲು ಯಾವಾಗಲು ಯೋಜನೆ ಹಾಕುತ್ತಿರುವ ಯೋಜನಾ ಆಯೋಗದ ಉಪಾಧ್ಯಕ್ಷ ಜಸ್ವಂತ್ ಸಿಂಗರೂ ಆಪ್ತರೇ. ಶಕ್ತಿಪೀಠವನ್ನು ಸ್ಥಾಪಿಸಿ ಪೋಖ್ರಾನ್-II ನ್ನು ಅಷ್ಟು ತರಾತುರಿಯಲ್ಲಿ ನಡೆಸಿದ ಮುರಳಿ ಮನೋಹರ ಜೋಶಿಯಂತೂ ಪ್ರಧಾನಿಗೆ ಅತ್ಯಂತ ಆಪ್ತವಾದ ಕೆಲಸ ಮಾಡಿದ್ದಾರಲ್ಲ. ಮುಂಬಾಯಿಯ ಬಂಗಾಳಿ ಮುಸ್ಲಿಮರು ಗುಜರಾತಿ ಮುಸ್ಲಿಮರು, ಕ್ರಿಶ್ಚಿಯನ್ನರು, ದೆಹಲಿಯ ಕ್ರಿಶ್ಚಿಯನ್ನರಿಗೆಲ್ಲ ಹಿಂದೂ ರಾಜ್ಯದ ರುಚಿ ತೋರಿಸುತ್ತಿರುವ ಶಿವಸೇನೆಯ ಬಾಳಾ ಠಾಕ್ರೆ ವಿಹೆಚ್‌ಪಿಯ ಅಶೋಕ ಸಿಂಘಾಲ್ ಸಹ ಆಪ್ತರೇ. ಇಷ್ಟೊಂದು ಗದ್ದಲ ಎಬ್ಬಿಸದಿದ್ದರೆ ಜನ ಬೆಲೆ ಏರಿಕೆ ಯಾಕೆ ಅಂತ ಕೇಳುವುದಿಲ್ಲವೇ? ದೇಶಪ್ರೇಮಿಗಳಿಗೆಲ್ಲಾ ಗುರುತಿನ ಚೀಟಿ, ವಿದೇಶಿಯರಿಗೆ ಗಡಿಪಾರು, ತರಲೆ ಮಾಡುವವರಿಗೆಲ್ಲಾ ರಾಜ್ಯ ಹಂಚುತ್ತಿರುವ ಅಡ್ವಾಣಿಯವರು ಆಪ್ತರೇ. ಇವರೆಲ್ಲರಿಗಿಂತಲೂ ಹೆಚ್ಚಾಗಿ ಲೋಕಸಭೆಗೆ ಚುನಾವಣೆ ಸೋತರೂ ಪಾರ್ಲಿಮೆಂಟಿಗೆ ಹಿಂಬಾಗಿಲಿಂದ ರಾಜ್ಯಸಭೆ ಮೂಲಕ ಬರುವವರೆಗೆ ಪ್ರಧಾನಿಗೆ ಆಪ್ತ ಸಹಾಯಕರಾದ ಪ್ರಮೋದ ಮಹಾಜನರು ಅತ್ಯಂತ ಆಪ್ತರು ಎಂದು ಹೇಳಬಹುದು. ಪ್ರಧಾನಿ ವಾಜಪೇಯಿಯವರ ಸರ್ಕಾರ ಮೊದಲ ನೂರುದಿನಗಳಲ್ಲಿ ಅಭದ್ರವಾದಾಗಲೆಲ್ಲ ಸುಭದ್ರ ಮಾಡುವ ಹಂಗೆ ಕಾಣುವಂತೆ ಮಾಡುವ ಹೇಳಿಕೆ ನೀಡುತ್ತಿದ್ದ ಪ್ರಮೋದ ಮಹಾಜನರೇ ಅತ್ಯಂತ ಆಪ್ತರು. ಈಗಲೂ ವಾಜಪೇಯಿ ಸರ್ಕಾರ ಬೀಳದಂತೆ ತಕ್ಕ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಸರ್ಕಾರ ಬೀಳದಂತೆ, ಬೇರೆ ಬೇರೆ ರೀತಿಯಲ್ಲಿ ಕಾಪಾಡುವ ಎಲ್ಲರೂ ಆಪ್ತರು. ಆದರೆ ಇಂತಹ ಹೆಚ್ಚಿನ ಪ್ರಯತ್ನ ಮಾಡಿದ ಪ್ರಮೋದ್ ಮಹಾಜನ ಅವರು ಹೆಚ್ಚು ಆಪ್ತರು ಎಂದು ರಾಜ ನಿಲ್ಲಿಸಿದ.

ಅಯ್ಯಾ ರಾಜನೇ ನೀನು ಬಾರಿ ಘಾಟಿ. ನಾನು ನಿನ್ನ ಬಾಯಿಂದ ಹೊರಡಿಸಬೇಕೆಂದಿದ್ದ ಜಯಲಲಿತಾ ಹೇಳಿಕೆಯ್ನು ಲಂಚ ತೆಗೆದುಕೊಂಡು ವಿದೇಶಿ ವಿನಿಮಯದ ಕಳ್ಳರಿಗೂ ಸಿಂಹಸ್ವಪ್ನರಾಗಿರುವ ಬೇಜಬರುವಾ ವರ್ಗ ಮಾಡಿಸಿದ್ದ ಪ್ರಧಾನಿಯ ಆಪ್ತರು ಯಾರು ಅಂತ. ನೀನು ಅದನ್ನು ಹೇಳದೆಯೂ ಹೇಳಿದ್ದಿಯಾ. ಉತ್ತರವೇನೋ ತೃಪ್ತಿಕರವಾಗಿಯೇ ಇದೆ. ಆದರೆ ನೀನು ನಿನ್ನ ಮಾತು ಮುರಿದೆ. ಇಗೋ ನಾನು ಹೊರಟೆ ಎಂದು ಗಹಗಹಿಸಿ ನಕ್ಕು ಮರೆಯಾಯಿತು.

ಸಾರ್ವಜನಿಕ ವಲಯದ ಕಾರ್ಮಿಕರ ಹತ್ತು ಬೇಡಿಕೆಗಳು

1. ಸಾರ್ವಜನಿಕ ವಲಯದ ಖಾಸಗೀಕರಣ ಮಾಡಬಾರದು.
2. ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟ ನಿಲ್ಲಿಸಬೇಕು. ಶೇರು ಮಾರಾಟಕ್ಕಾಗಿ ರಚಿಸಿದ 'ಹೂಡಿಕೆ ಹಿಂಪಡೆ ಆಯೋಗ' (Disinvestment Commission) ವನ್ನು ರದ್ದುಪಡಿಸಬೇಕು.
3. ಎಲ್ಲಾ ರೋಗಗ್ರಸ್ತ ಸಾರ್ವಜನಿಕ ವಲಯದ ಘಟಕಗಳನ್ನು ತ್ವರಿತವಾಗಿ ಪುನಶ್ಚೇತನಗೊಳಿಸಬೇಕು. ಸರಕಾರವೇ ಪ್ರವೋಟರ್ ಆಗಿ ನಿಂತು ಸಕಲ ಹಣಕಾಸು ನೆರವು ಒದಗಿಸಬೇಕು.
4. ಸಂಸತ್ತಿನಲ್ಲಿ ಮಂಡಿಸಿರುವ ಸಿಕಾ(SICA) ತಿದ್ದುಪಡಿ ಮಸೂದೆಯನ್ನು ರದ್ದು ಮಾಡಬೇಕು.
5. ಬಿ.ಐ.ಎಫ್.ಆರ್. ನ ಪರಾಮರ್ಶೆಗೆ ನೀಡಿದ ಸಾರ್ವಜನಿಕ ವಲಯದ ಘಟಕಗಳ ನೌಕರರ ವೇತನ ಪರಿಷ್ಕರಣದ ಮೇಲೆ ನಿರ್ಬಂಧವನ್ನು ಹಾಗೂ ಪರಿಷ್ಕರಣದಲ್ಲಿ ಸ್ಲಾಬ್ ವ್ಯವಸ್ಥೆಯನ್ನು ವಿ.ಡಿ.ಎ.ಯನ್ನು ಹಿಂತೆಗೆದುಕೊಳ್ಳಬೇಕು.
6. ಹಿಂದಿನ ಒಪ್ಪಂದಗಳ ಅವಧಿ ಮುಗಿದಿರುವ ಎಲ್ಲಾ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳಲ್ಲಿ ಈಗಾಗಲೇ ವಿಳಂಬಗೊಂಡಿರುವ ವೇತನ ಮಾತುಕತೆಗಳನ್ನು ತಕ್ಷಣವೇ ಪ್ರಾಮಾಣಿಕವಾಗಿ ಹಾಗೂ ಯಾವುದೇ ಶರತ್ತುಗಳನ್ನು ಹಾಕದೆ ಆರಂಭಿಸಬೇಕು.
7. ಶಾಶ್ವತವಾಗಿರುವ ಹಾಗೂ ಸದಾ ಇರುವ ಕೆಲಸಗಳಿಗೆ ಕಾಂಟ್ರಾಕ್ಟ್ ಕಾರ್ಮಿಕರನ್ನು ಬಳಸಬಾರದು. ಈಗಿರುವ ಕಾಂಟ್ರಾಕ್ಟ್ ಕಾರ್ಮಿಕರನ್ನು ನಿಯಮಿತಗೊಳಿಸಬೇಕು.
8. ಒಂದು ವಿಶೇಷಾಜ್ಞೆ ತಂದು ಬೋನಸ್ ಪಾವತಿ ಕಾಯ್ದೆಯಲ್ಲಿನ ಎಲ್ಲಾ ಮಿತಿಗಳನ್ನು ತೆಗೆಯಬೇಕು; ಆದಾಯ ತೆರಿಗೆಯ ವಿನಾಯ್ತಿ ಮಿತಿಯನ್ನು ಹೆಚ್ಚಿಸಬೇಕು.
9. ಗ್ರಾಚ್ಯುಟಿ ಮಿತಿಯನ್ನು ಕೇಂದ್ರ ಸರ್ಕಾರದ ನೌಕರರಿಗೆ ಕೊಡುವಂತೆ 3.5 ಲಕ್ಷ ರೂ.ಗಳಿಗೆ 1.4.95 ರಿಂದ ಜಾರಿಗೆ ಬರುವಂತೆ ಏರಿಸಬೇಕು.
10. ನೌಕರರ ವಂತಿಗೆಯಿರುವ ಭವಿಷ್ಯ ನಿಧಿ ಯೋಜನೆಯಿಂದ ಯಾವುದೇ ಹಣವನ್ನು ಕಡ್ಡಾಯವಾಗಿ ಪಡೆಯದ ಪ್ರತ್ಯೇಕ ಪೆನ್ಷನ್ ಯೋಜನೆಯನ್ನು ರೂಪೀಕರಿಸಲು ಸಾರ್ವಜನಿಕ ವಲಯದ ಘಟಕಗಳಿಗೆ ಅವಕಾಶ ನೀಡಬೇಕು.

ವಾರದ ವ್ಯಂಗ್ಯಚಿತ್ರ

'ಟೈಂಸ್ ಆಫ್ ಇಂಡಿಯಾ'ದಲ್ಲಿ ಆರ್.ಕೆ.ಲಕ್ಷ್ಮಣ್

ಇಲ್ಲಾ ಸಾರ್, ನಾವು ಹಳೆಯ ಸಮಸ್ಯೆಗಳನ್ನು ಪರಿಹರಿಸಿಲ್ಲ, ಈಗಿರುವ ಸಮಸ್ಯೆಗಳನ್ನು ಪರಿಹರಿಸಿಲ್ಲ, ಭವಿಷ್ಯದ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸುತ್ತಿದ್ದೇವೆ.



Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12 ... ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by P Ramachandra Rao for Communist Party of India(Marxist), Karnataka State Committee, EDITOR: P RAMACHANDRA RAO